# ಕೆ.ಟಿ. ಶಿವಪ್ರಸಾದ್
# K.T. SHIVA PRASAD

ಎಚ್. ಎ. ಅನಿಲ್ ಕುಮಾರ್
H. A. ANIL KUMAR



ಕರ್ನಾಟಕ ಲಲಿತಕಲಾ ಅಕಾಡೆಮಿ
KARNATAKA LALITHAKALA ACADEMY

# ಕೆ. ಟಿ. ಶಿವಪ್ರಸಾದ್

# K. T. SHIVA PRASAD


**ಎಚ್. ಎ. ಅನಿಲ್ ಕುಮಾರ್**

**H. A. Anilkumar**



ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ೨ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು

**KARNATAKA LALITHAKALA ACADEMY**

Kannada Bhavana, 2nd Floor, J.C. Road, Bangalore- 560 002

K.T. SHIVA PRASAD -- A Monograph written and translated into English by H.A. Anil Kumar and Published by Shri H. Shankarappa, Registrar, Karnataka Lalithakala Academy, Kannada Bhavana, J.C. Road, Bangalore - 560 002

First Edition : 2000

1000 copies

Pages: 80

Price Rs: 45/-

ಹಕ್ಕುಗಳು - ಕರ್ನಾಟಕ ಲಲಿತಕಲಾ ಅಕಾಡೆಮಿ

Copyrights: KLKA

ಪ್ರಧಾನ ಸಂಪಾದಕರು : ಪ್ರೊ. ವಿ. ಜಿ. ಅಂದಾನಿ

ಪ್ರಕಟಣಾ ಸಮಿತಿ:

ಶ್ರೀ. ಚಿ. ಸು. ಕೃಷ್ಣಸೆಟ್ಟಿ

ಶ್ರೀ. ಆರ್. ಜಿ. ರಾಯ್ಕರ್

ಶ್ರೀ. ರಾಜೇಂದ್ರ ಅಷ್ಟಗಿ

ಶ್ರೀ. ಅಶೋಕ ಟಿ. ಅಕ್ಕಿ

ಶ್ರೀಮತಿ, ಭಾನು ಮುನಾಫ್

ಪ್ರಕಾಶಕರು

ಶ್ರೀ. ಎಚ್. ಶಂಕರಪ್ಪ

ರಿಜಿಸ್ಟ್ರಾರ್

Coverpage Painting: "Tiger Painting" 1997, Oil on Painting

Backpage Painting: "Tiger, Tiger" 1985, Oil on Painting

Cover & Backpage design:

artist Devraj. B

Lettersetting & Printing:

Dharini Graphics,

Rajajinagar,

Bangalore - 560 021

Ph: 3327029

# ಅಧ್ಯಕ್ಷರ ಮಾತು

ಕರ್ನಾಟಕದ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲೊಂದಾದ ಪುಸ್ತಕ ಪ್ರಕಟಣೆಯ ಯೋಜನೆಯಡಿಯಲ್ಲಿ ಈಗಾಗಲೇ ಅನೇಕ ಹಿರಿಯ ಮತ್ತು ಸಮಕಾಲೀನ ಕಲಾವಿದರನ್ನು ಕುರಿತಂತೆ ಪುಸ್ತಕಗಳು ಹೊರಬಂದಿವೆ. ಈ ಪುಸ್ತಕಗಳು ಕಲಾವಿದರ ಜೀವನ ಮತ್ತು ಅವರ ಕಲೆಯ ಆತ್ಮೀಯ ಪರಿಚಯ ಮಾಡಿಕೊಡುವುದರ ಜೊತೆ ಜೊತೆಗೇ ಅವರುಗಳು ರೂಪುಗೊಳ್ಳಲು ಕಾರಣವಾದ ಕಲಾಕ್ಷೇತ್ರದ ವಿಶಾಲ ಭಿತ್ತಿಯನ್ನು ಅನಾವರಣಗೊಳಿಸುತ್ತದೆ.

ಸಮಕಾಲೀನ ಕಲಾವಿದರ ಮಾಲೆಯಲ್ಲಿ ಕಲಾವಿದ ಶ್ರೀ ಕೆ.ಟಿ ಶಿವಪ್ರಸಾದರ ಕಲೆಯ ಬಗ್ಗೆ ಶ್ರೀ ಎಚ್.ಎ. ಅನಿಲ್ ಕುಮಾರ್ ಬರೆದಿರುವ ಈ ಪುಸ್ತಕವನ್ನು ಪ್ರಕಟಿಸಲು ನನಗೆ ಸಂತೋಷವಾಗುತ್ತಿದೆ. ಶಿವಪ್ರಸಾದ್ ನನ್ನ ಆತ್ಮೀಯ ಗೆಳೆಯ ಹಾಗೂ ಸಮಕಾಲೀನ. ದಲಿತ ಹಾಗೂ ಶೂದ್ರ ಚಳುವಳಿಗಳಲ್ಲಿ ಭಾಗವಹಿಸಿ, ತಮ್ಮದೇ ರೀತಿಯಲ್ಲಿ ಅವುಗಳನ್ನು ಅಂತರಂಗೀಕರಿಸಿಕೊಂಡು, ತೈಲವರ್ಣ ಮಾಧ್ಯಮದ ಮೂಲಕ ಅದಕ್ಕೊಂದು ಸೌಂದರ್ಯಶಾಸ್ತ್ರೀಯ ಆಯಾಮ ನೀಡಿರುವ ಅವರ ಪ್ರಯತ್ನವು ಸಮಗ್ರ ಭಾರತದಲ್ಲೇ ಅನನ್ಯವೆನಿಸುವಂಥದ್ದು. ಕಲೆಯ ವಾಣಿಜ್ಯ ಪ್ರಭಾವಳಿಯ ಹೊರಗಿರುವ ಹಾಸನದಂತಹ ತಾಲ್ಲೂಕಿನಲ್ಲಿ ಇದ್ದುಕೊಂಡೇ ಕಲೆಯ ಎಲ್ಲ ಬಗೆಯ ಸಮಕಾಲೀನ ಕಲಾತ್ಮಕ ಜೀವಂತ ಗುಣಗಳನ್ನೂ ದಕ್ಕಿಸಿಕೊಳ್ಳಬಹುದೆಂದು ತೋರಿಸಿಕೊಟ್ಟವರು ಶಿವಪ್ರಸಾದ್. 'ತೈಲವರ್ಣದ ಚಿತ್ರ ಸಂಪ್ರದಾಯ ಇನ್ನೂ ಸತ್ತಿಲ್ಲ' ಎಂಬುದನ್ನು ಇವರು ತೋರಿಸಿಕೊಟ್ಟಿರುವುದಲ್ಲದೆ, ಆ ಮಾಧ್ಯಮದ ಹತ್ತಾರು ಹೊಸ ಸಾಧ್ಯತೆಗಳನ್ನೂ ತಮ್ಮ ಬೃಹತ್ ಕ್ಯಾನ್ವಾಸುಗಳ ಮೂಲಕ ಅನ್ವೇಷಿಸಿಕೊಂಡಿದ್ದಾರೆ.

ಅವರ ಜನಪ್ರಿಯ "ಹುಲಿವೇಷ"ದವರ ಸರಣಿ ಚಿತ್ರಗಳು, ಅವುಗಳೊಂದಿಗೆ ತೊಗಲುಬೊಂಬೆ, ಕಾಮಿಕ್ ಪಾತ್ರಧಾರಿಗಳು ಮತ್ತು ಸಿನಿಮ ಪೋಸ್ಟರ್‌ಗಳನ್ನು ಅಳವಡಿಸಿಕೊಂಡ ಚಿತ್ರಗಳು ಹೀಗೆ, ಇವೆಲ್ಲವೂ ನಮಗೆ, ಪಾಶ್ಚಾತ್ಯ ಅರ್ಥದಲ್ಲಿ ತೈಲವರ್ಣವು ಇಲ್ಲಿಯವರೆಗೂ ಕಟ್ಟಿಕೊಡದಂತಹ ಅನುಭವ. ಶಿವಪ್ರಸಾದರ ಕೃತಿಗಳಲ್ಲಿ ಇವು ವೇದ್ಯ. ಶಿವಪ್ರಸಾದರ ಕ್ರಿಯಾತ್ಮಕ ಚಟುವಟಿಕೆಗಳನ್ನು ಆಳವಾಗಿ ಬಲ್ಲ, ಅವರ ಕುರಿತು ಈವರೆಗೂ ಹೊಸ ನೋಟಗಳನ್ನು ನೀಡಿರುವ ಲೇಖಕ ಎಚ್. ಎ. ಅನಿಲ್‌ಕುಮಾರ್, ಈ ಕಲಾವಿದರ ಕೊಡುಗೆಯ ಬಗ್ಗೆ ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಅರ್ಥಪೂರ್ಣವಾಗಿ, ಅದೂ ಒಂದೇ ಕೃತಿಯನ್ನು ಮೂಲವಾಗಿರಿಸಿಕೊಂಡು ('ಟೈಗರ್ ಪೈಂಟಿಂಗ್') ಅನನ್ಯವಾಗಿ ವಿವರಿಸಿ ಬರೆದಿದ್ದಾರೆ. ಅಕಾಡೆಮಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ಅವರಿಗೆ ಅಭಿನಂದನೆ. 'ಅಭಿನವ' ಪತ್ರಿಕೆಯ ಮೂಲಕ ಕನ್ನಡದ ಗಂಭೀರ ಪತ್ರಿಕಾ ಸಂಸ್ಕೃತಿಗೆ ಹೊಸ ಮುಖ ನೀಡುತ್ತಿರುವ ನ.ರವಿಕುಮಾರ್ ಮತ್ತು ಚಂದ್ರಿಕಾ ಅವರು ಅತೀವ ಪ್ರೀತಿಯಿಂದ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಕಲಾವಿದ ಬಿ. ದೇವರಾಜ್ ಮುಖಪುಟವನ್ನು ಸೊಗಸಾಗಿ ರೂಪಿಸಿದ್ದಾರೆ. ನನ್ನ ಕನಸುಗಳೆಲ್ಲವನ್ನೂ ವಾಸ್ತವದ ಸಂಗತಿಗಳನ್ನಾಗಿ ಮಾಡಲು ಸಹಕರಿಸುತ್ತಿರುವ ಅಕಾಡೆಮಿಯ ಸದಸ್ಯರಿಗೂ, ರಿಜಿಸ್ಟ್ರಾರ್ ಶ್ರೀ ಶಂಕರಪ್ಪನವರಿಗೂ ಅಕಾಡೆಮಿಯ ಪರವಾಗಿ ಮತ್ತು ನನ್ನ ವೈಯಕ್ತಿಕ ಕೃತಜ್ಞತೆಗಳು.

ಕಲಾವಿದರು, ಕಲಾರಸಿಕರು ಮತ್ತು ಕಲಾಸಾಹಿತ್ಯಾಭಿಮಾನಿಗಳು ಈ ದ್ವಿಭಾಷಾ ಪುಸ್ತಕವನ್ನು ಸ್ವಾಗತಿಸುತ್ತಾರೆಂದು ಭಾವಿಸುತ್ತೇನೆ.

ದಿನಾಂಕ: ಯುಗಾದಿ, ೫-೪-೨೦೦೦, ಪ್ರೊ. ವಿ. ಜಿ. ಅಂದಾನಿ

ಬೆಂಗಳೂರು ಅಧ್ಯಕ್ಷರು.

ಕೆ.ಟಿ.ಶಿವಪ್ರಸಾದ್




K.T.SHIVA PRASAD

# ಮೈಲಾರಲಿಂಗನ ದರ್ಶನಕ್ಕೆ ಮುನ್ನ

ನಾನು ಮೊದಲು ಶಿವಪ್ರಸಾದರನ್ನು ಭೇಟಿಯಾದದ್ದು ೧೯೯ಳರಲ್ಲಿ. ಅವರ ಮತ್ತು ಅವರ ಕೃತಿಗಳ ಪರಿಚಯವಾಗುವ ಮೊದಲೇ ಅವರ ಕೃತಿಗಳನ್ನು ಕುರಿತು ಒಂದು ಕ್ಯಾಟಲಾಗನ್ನು ಬರೆದುಕೊಡುವಂತೆ ಮಾರ್ಥ ನನಗೆ ಸೂಚಿಸಿದ್ದರು. ನಾನು ಕೂಡಲೇ ಒಪ್ಪಿಕೊಂಡುಬಿಟ್ಟಿದ್ದೆ. ನನ್ನ ತಲೆಮಾರಿನ ಕಲಾವಿದರ ಪ್ರಕಾರ ತಾತ್ವಿಕವಾಗಿ ಓಬಿರಾಯನ ಕಾಲದ್ದಾಗಿ ಬಿಟ್ಟಿದ್ದ ಈಸಲ್ ಪೈಂಟಿಂಗ್ ಪ್ರಕಾರದಲ್ಲಿ ಯಾವುದೇ ಜೀವಂತ ಕಲಾಕೃತಿ ಮೂಡಿಬರುವ 'ಛಾನೇ' ಇರಲಿಲ್ಲ. ತದ್ವಿರುದ್ಧವಾಗಿ, ಆಗ ನಾನು ನೋಡಿದ್ದ ಶಿವಪ್ರಸಾದ್ ಏಕೈಕ 'ಟೈಗರ್ ಮ್ಯಾನ್' ಎಂಬ ಚಿತ್ರದ ಮಾಂತ್ರಿಕ ಗುಣವು ಯಾವುದೇ ಕಲಾ ಇತಿಹಾಸದ ಮಾನದಂಡದಿಂದಲೂ ಸೋಲುವ ಛಾನ್ಸೂ' ಇರಲಿಲ್ಲ!

ಶೂದ್ರ, ದಲಿತ ಹಾಗೂ ಸಮಾಜವಾದಿ ಚಳುವಳಿಗಳ ಪಕ್ಷಪಾತಿಯಾದ, ಸಿರಿವಂತ ಹಿನ್ನೆಲೆಯ ಶಿವಪ್ರಸಾದರ ತೋಟದ ಮನೆಯೊಂದನ್ನು ಮನದಲ್ಲಿ ಕಲ್ಪಿಸಿಕೊಳ್ಳುತ್ತಲೇ, ಬರೆಯಬೇಕಾದ ಕ್ಯಾಟಲಾಗ್‌ನ ನೋಟ್ಸ್ ಮಾಡಿಕೊಳ್ಳಲು ಅವರ ಮನೆಯಿರುವ ಹಾಸನ ತಲುಪಿದೆ. ಅಲ್ಲಿ ಕಂಡದ್ದು ಒಂದು ಪುಟ್ಟ ಬಾಡಿಗೆ ಮನೆ. ಅದರ ಸುತ್ತಲೂ ಮಾರ್ಥ ಪ್ರೀತಿಯಿಂದ ಬೆಳೆಸಿದ್ದ ನೂರಾರು ಗಿಡಗಳು. ಅವೆರಡು ಅಂಶಗಳ ಕೇಂದ್ರಭಾಗದಲ್ಲಿದ್ದುದು ಅವರ ಬೃಹತ್ ಕ್ಯಾನ್ವಾಸ್ ಚಿತ್ರಗಳು. ಮನೆ ಚಿಕ್ಕದಾಗಿದ್ದಿದ್ದು, ಆದ್ದರಿಂದಲೇ ಅದರೊಳಗಿನ ಮನಸ್ಸಿನ ಸೃಷ್ಟಿಯಾದ ಕೃತಿಗಳು ಬೃಹತ್ತಾಗಿ, ಶ್ರೀಮಂತವಾಗಿದ್ದುದು ನನಗೆ ಅರ್ಥಪೂಣವಾಗಿ ಕಂಡಿತು. ಶಿವಪ್ರಸಾದ್ ತಮ್ಮ ಪ್ರತಿ ಕ್ಯಾನ್ವಾಸಿಗೆ ವ್ಯಯಿಸುವ ಕಾಲ ಹಾಗೂ ಆರ್ಥಿಕ ದ್ರವ್ಯದ ಕಾರಣದಿಂದಾಗಿಯೇ 'ಶ್ರೀಮಂತಿಕೆಯನ್ನು', ಅವರ ಪುಟ್ಟ ಮನೆಯನ್ನು ಕಂಡು 'ಬಡತನವನ್ನು ಕಲ್ಪಿಸಿಕೊಂಡರೆ, ಅದೊಂದು ಸಮೀಪ ದೃಷ್ಟಿಕೋನವಾಗತ್ತದೆಯಷ್ಟೆ. ಮುಂದೆ ಅವರ ಕೃತಿಗಳನ್ನು ಕುರಿತಂತೆ ನಾಲ್ಕು ಕ್ಯಾಟಲಾಗನ್ನು ನಾನು ಬರೆದಾಗ ಅವುಗಳಿಗೊಂದು ತಾತ್ವಿಕ ನೆಲೆಗಟ್ಟು ದೊರಕಿಸಿಕೊಡಲು ಅವರ ಸುತ್ತಲಿನ ಈ, ಇಂತಹ ಅಂಶಗಳು ಮತ್ತು ಘಟನೆಗಳು ಆತ್ಮೀಯ ರೂಪಕಗಳಾಗಿ ನನಗೆ ದಕ್ಕಿದ್ದಿದೆ. ಉದಾಹರಣೆಗೆ ಶ್ರೀಮಂತಿಕೆ-ಬಡತನವೆಂಬ ಕಪ್ಪು-ಬಿಳುಪಿನ ಚಿತ್ರಗಳನ್ನೇ ನೋಡಲಿಚ್ಛಿಸುವ ನಾವು, ಅವುಗಳ ಮಧ್ಯದಲ್ಲಿರಬಹುದಾದ ಕಂದುಬಣ್ಣಕ್ಕೆ ಸಾಮಾನ್ಯವಾಗಿ ಕುರುಡಾಗಿರುತ್ತೇವೆ. ಭಾರತದ ಆಧುನಿಕ ಹಾಗೂ ಸಮಕಾಲೀನ ಸಂದರ್ಭದ ದೃಶ್ಯಕಲಾ ಇತಿಹಾಸವೂ ಹಾಗೆಯೆ! "ನೈಜ ಕಲಾಪ್ರಕಾರಕ್ಕೆ ವಸಾಹತು ಇತಿಹಾಸದ ಸ್ಪರ್ಶವಿದೆ' ಎಂಬ ಒಂದೇ ಕಾರಣಕ್ಕೆ ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣವೆಂಬಂತೆ, ಅದರ ಅದ್ಭುತ ಸಾಧ್ಯತೆಗಳೆಲ್ಲದರ ಬಗ್ಗೆ ಕಣ್ಮುಚ್ಚಿ ಕುಳಿತಿದೆ ಈ ಚಿತ್ರ ಇತಿಹಾಸ. ನಾನು ನೈಜತೆಯ ಕಟ್ಟಾಭಿಮಾನಿಯೇನಲ್ಲ. ಆದರೆ ನೈಜತೆಯೊಳಗಿನಿಂದಲೇ, ಅದರದ್ದೇ ನಿರ್ವಚನ ಮಾಡಬಲ್ಲಂತಹ ಶಿವಪ್ರಸಾದರ ಪ್ರಯೋಗವನ್ನು ನಾನು ಭಾರತೀಯ ಇತಿಹಾಸದಲ್ಲಿ ಮತ್ತೆಲ್ಲಿಯೂ ಕಂಡಿಲ್ಲ. ಮಿಲನ್ ಕುಂದೇರನ 'ಜೋಕ್' ಕಾದಂಬರಿಯು ಇಂತಹದ್ದು, ಕಾದಂಬರಿ ಪ್ರಕಾರದ ಬಂಧವನ್ನೇ ಅದು ನಿರ್ವಚಿಸುತ್ತದೆ.

ಶಿವಪ್ರಸಾದರ ಮನೆಯಲ್ಲಿ ಅವರ ಕ್ಯಾನ್ವಾಸುಗಳನ್ನು ನೋಡುವಾಗ, ಅಲ್ಲಿ ಓಡಾಟ ನಿಲ್ಲಿಸಿಬಿಡಬೇಕಾಗುತ್ತದೆ ಅಂತಹ ಇಕ್ಕಟ್ಟು. ಒಳಗಿನ ರೂಮೊಂದರ ತುಂಬ ಶೂಗಳ ಸಂಗ್ರಹದಿಂದಾಗಿ ಅಲ್ಲಿಯೂ 'ಕಾಲಿಡುವಂತಿಲ್ಲ'. ಮತ್ತು

ಪ್ರತಿಯೊಂದು ಚಿತ್ರದ ರಚನೆಗೂ ಅಗತ್ಯವಿರುವ, ಅವರು ಕ್ಲಿಕ್ಕಿಸಿರುವ ನಿತ್ಯ ಜನಜೀವನದ ಅಪಾರ ಫೋಟೋಗಳ ಸಂಖ್ಯೆ ಇವೆಲ್ಲವೂ ಶಿವಪ್ರಸಾದರ ಸಾಮಾಜಿಕ ಹಾಗೂ ಸೌಂದರ್ಯಾತ್ಮಕತೆಯನ್ನು ಒಟ್ಟಿಗೆ

ಬೆಸುಗೆ ಹಾಕುವ ಪ್ರಯತ್ನಕ್ಕೆ ಒಳ್ಳೆಯ ಉದಾಹರಣೆಗಳಾಗುತ್ತವೆ. ಸಮಾಜವಾದಿಗಳಿಗೆ ಇವರ ಕೃತಿಗಳೊಳಕ್ಕೆ ಹಾಗೂ ಕಲಾವಿದರಿಗೆ ಇವರ ಸಮಾಜವಾದೀಯ ನಂಬಿಕೆಯೊಳಕ್ಕೆ ಪ್ರವೇಶಿಕೆ ದೊರಕಬೇಕಾದರೆ ಇವರ ಮನೆಯನ್ನು ಹೊಕ್ಕು, ಅಲ್ಲಿರುವ ಚಿತ್ರಗಳು, ಇವರು ಸಂಗ್ರಹಿಸಿರುವ ಶಿಲ್ಪಗಳು, ಫೋಟೋಗಳು ಮತ್ತು ಇವರ ಮಾತುಗಳನ್ನು ಕಣ್ಣಲ್ಲಿ ಕಣ್ಣಿಟ್ಟು, ಕಿವಿಯಾನಿಸಿ, ಮನಸ್ಪೂರ್ವಕವಾಗಿ ಶೋಧಿಸಬೇಕು - ಶರ್ಲಾಕ್ ಹೋಮ್ಸ್ನಂತೆ. ಆಗಲೇ ಎರಡರ್ಧ ಹೋಳಾಗಿರುವ ಶಿವಪ್ರಸಾದರ ವ್ಯಕ್ತಿತ್ವವನ್ನು ಸಂಗ್ರಹರೂಪದಲ್ಲಿ ಗ್ರಹಿಸಲು ಸಾಧ್ಯ.

* * *

ಸುಮಾರು ಒಂದು ವರ್ಷ ಕಾಲ ಪ್ರೀತಿಯಿಂದ ಬರೆದ ಪುಸ್ತಕವಿದು. ಕಾಲವನ್ನು ಎಂದೂ ಒಂದೇ ಸಮವೆಂದು ಭಾವಿಸದ ನನ್ನ ಸಮಯಪ್ರಜ್ಞೆಯ ಕೊರತೆಯನ್ನು ತಾಳ್ಮೆಯಿಂದ ನಿರುಕಿಸಿದ ವಿ.ಜಿ.ಅಂದಾನಿಯವರು, ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುವ ಅಕಾಡೆಮಿಯ ರಿಜಿಸ್ಟ್ರಾರ್ ಶಂಕರಪ್ಪನವರು, ನಾನು ಕೊಟ್ಟ 'ಚಿತ್ರ'ಹಿಂಸೆಯನ್ನು ಇನ್ನೂ ತಾಳಿಕೊಂಡಿರುವ 'ಅಭಿನವ'ದ ಗೆಳೆಯರಾದ ಚಂದ್ರಿಕ-ನ.ರವಿಕುಮಾರ್, ತಾತ್ವಿಕವಾಗಿ ನನ್ನೊಂದಿಗೆ ಸಹಮತ ಹೊಂದಿದಂತೆ ನಟಿಸಿದರೂ ತಮ್ಮದೇ ವೈಯಕ್ತಿಕ ಅನುಮಾನಗಳನ್ನು ಉಳಿಸಿಕೊಳ್ಳುವ ಛಾತಿಯುಳ್ಳ ಸುರೇಖ, ಬಾಬು ಈಶ್ವರಪ್ರಸಾದ್ ಹಾಗೂ ಪ್ರಕಾಶ್ ಬಾಬು - ಇವರುಗಳಿಂದಾಗಿ ಈ ಪುಸ್ತಕಕ್ಕೊಂದು ಕಟ್ಟೆಚ್ಚರಿಕೆಯ ಗುಣ ಲಭಿಸಿದೆಯೆಂದು ಭಾವಿಸಿದ್ದೇನೆ. ಗೆಳೆಯರಾದ ಎನ್. ಮರಿಶಾಮಾಚಾರ್, ಕೆ. ವಿ. ಸುಬ್ರಹ್ಮಣ್ಯಂ, ಸುರೇಶ್ ಜಯರಾಮ್, ಎಂ.ಜಿ. ದೊಡ್ಡಮನಿ, ಮಾರ್ಥ ಯಾಕಿಮೊವಿಝ್ ಹಾಗೂ ಸತ್ಯಪ್ರಕಾಶ್ ವಾರಣಾಸಿಯಂತಹವರಿಂದ ನಾನು ಕಲಿಯುತ್ತಿರುವ ಸಹೃದಯತೆ ಹಾಗೂ ಶಿಸ್ತುಬದ್ಧತೆಯು ಈ ಪುಸ್ತಕದೊಳಗೆ ಸ್ವಲ್ಪವಾದರೂ ತನ್ನ ಕಾರ್ಯನಿರ್ವಹಿಸಿದ್ದರೆ ನಾನು ಧನ್ಯ. ಮುಖಪುಟ ಚಿತ್ರ ಹಾಗೂ ಒಳಗಿನ ಚಿತ್ರಗಳ ಸಂಯೋಜನೆಯನ್ನು ಅರ್ಥಪೂರ್ಣಗೊಳಿಸಿದ್ದು ಕಲಾವಿದ ಬಿ. ದೇವರಾಜ್, ಹಾಗೆಯೇ ಈ ಪುಸ್ತಕವನ್ನು ಬರೆಸಿದ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪ್ರಕಟಣಾ ಸಮಿತಿ - ಇವರೆಲ್ಲರಿಗೂ ಕೇವಲ ಕೃತಜ್ಞತೆ ಹೇಳಿದರೆ ಅದು ಸೋಗಿನದಾಗುತ್ತದೆ.

ಸಹಪಾಠಿಯಾಗಿ, ಗುರುವಾಗಿ ಅನೇಕ ಪಾಠಗಳನ್ನು ಹೇಳಿಕೊಟ್ಟ, ಎಲ್ಲಕ್ಕಿಂತಲೂ ಹೆಚ್ಚಾಗಿ ಶಿವಪ್ರಸಾದ್ ಅಂತಹವರ ವಿಶಿಷ್ಟ ನೈಜತೆ'ಯ ಕಟ್ಟಾಭಿಮಾನಿಯಾಗಿದ್ದ ಅಕಾಲಿಕವಾಗಿ ಮೃತ್ಯವಶನಾದ ಗೆಳೆಯ ಕಲಾವಿದ-ಛಾಯಾಗ್ರಾಹಕ ವಿ.ರಾಜಾವೀರನನ್ನು ನೆನೆಸಿಕೊಳ್ಳುತ್ತ ...

ಬೆಂಗಳೂರು

ಎಚ್. ಎ. ಅನಿಲ್ ಕುಮಾರ್

# ಮೈಲಾರಲಿಂಗನ ದರ್ಶನ

"ಭಾರತೀಯ ಕಲಾವಿದರು ಹಾಗೂ ವಿಮರ್ಶಕರು ಪ್ರತಿಮಾ ನಿರ್ಮಾಣವನ್ನು (ಇಮೇಜ್-ಮೇಕಿಂಗ್) ಕುರಿತಂತೆ ನೇತ್ಯಾತ್ಮಕವಾಗಿ ಪ್ರತಿಭಟಿಸುವ ಅಂಶಕ್ಕೆ ನಾನು ತಣ್ಣಗೆ, ಇತ್ಯಾತ್ಮಕವಾಗಿ ಪ್ರತಿಕ್ರಿಯಿಸಲಾರೆ. ಈ ಪ್ರತಿಮಾತ್ಮಕತೆಗೆ ಪರ್ಯಾಯವಾಗಿ ಮೂಡಿ ಬರುವ ಒಂದು ಕಲಾತ್ಮಕ ನಿರ್ಮಿತಿಯನ್ನು ನಾವು ಹೊಳಹು, ತತ್ವ, ವಸ್ತು ಪ್ರತಿಷ್ಠಾಪನಾ ಕಲೆ ಎಂದೆಲ್ಲಾ ಅರ್ಥೈಸಬಹುದು. ಈ ಭಾಷೆಯನ್ನು ಕ್ರಮೇಣ ನಾನು ಅಳವಡಿಸಿಕೊಳ್ಳಲು ಬಯಸುತ್ತೇನೆ. ಇಂತಹ ಸಮಕಾಲೀನ ಅರ್ಥೈಸುವಿಕೆಯಿಂದಾಗಿ ಪ್ರತಿಮಾತ್ಮಕತೆಯ ಹೊರೆಯನ್ನು ಕಡಿಮೆಗೊಳಿಸಿದಂತಾಗುತ್ತದೆ. ಜೊತೆಗೆ, ಅದರ ಮಾಂತ್ರಿಕ ಆವರಣದ ತೀವ್ರತೆಯನ್ನೂ ಸ್ವಲ್ಪ ಸಡಿಲಗೊಳಿಸಿದಂತಾಗುತ್ತದೆ. ಈ ಬಗೆಯ ಪಾರ್ಶ್ವವಾಯುಪೀಡಿತ ನಾಸ್ತಾಲಿಯಾವು ಇಂದು ಒಂದು ತುರ್ತಿನ ಅಗತ್ಯವಾಗಿದೆ. ಏಕೆಂದರೆ ಪ್ರತಿಮಾತ್ಮಕರು' ಈ ಮಾಂತ್ರಿಕತೆಯ ಮುಖೇನವೇ ಸೌಂದರ್ಯಶಾಸ್ತ್ರೀಯ ಆಯಾಮದ ಮೇಲಿನ ತಮ್ಮ ಪೂರ್ವಜರ ಸ್ವಾಮ್ಯತೆಯನ್ನು ಘೋಷಿಸಿಕೊಳ್ಳುತ್ತಾರೆ. ಆಕಾರಗಳ ನಡುವಣ, ಹೆಚ್ಚು ಪ್ರಜಾಪ್ರಭುತ್ವವಾದಿ ಸಂಬಂಧವು ಕಲಾಕೃತಿಯೊಂದರ ಅರ್ಥಪೂರ್ಣ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ, ಈ ಕ್ರಿಯೆ ಇಂದು ತುರ್ತಾಗಿ ನಡೆಯಬೇಕಾಗಿದೆ' ಗೀತಾ ಕಪೂರ್

ಕೆ.ಟಿ. ಶಿವಪ್ರಸಾದರ "ಟೈಗರ್ ಪೈಂಟಿಂಗ್" (೧೯೯೭- ಮುಖಪುಟ ಚಿತ್ರ ನೋಡಿ) ಎಂಬ ಕಲಾಕೃತಿಯನ್ನು ಅವರ ಇಲ್ಲಿಯವರೆಗಿನ ಸಾಧನೆಯ ಒಂದು ರೂಪಕವನ್ನಾಗಿ ಪರಿಗಣಿಸಬಹುದು.

ಕಲಾವಿದನೊಬ್ಬನ ನಾಲ್ಕಾರು ದಶಕಗಳ ಅಭಿವ್ಯಕ್ತಿಯ ಸಾರಸಂಗ್ರಹವನ್ನು ಕೇವಲ ಒಂದೇ ಒಂದು ಕೃತಿಯು ಹೀಗೆ ಹಿಡಿದಿರಿಸುವುದು ತೀರ ಅಪರೂಪ. ನಿರಂತರವಾಗಿ ಮೊದಲಿನಿಂದ ಕೊನೆಯವರೆಗೂ ಒಂದೇ ಶೈಲಿಯಲ್ಲಿ ಕೃತಿರಚನೆ ಮಾಡುವವರ ಕಥೆಯೇ ಬೇರೆ. ಅಂತಲ್ಲಿ ಆ ಕಲಾವಿದನ ಒಂದೇ ಒಂದು ಕೃತಿಯು ಆತನ ಇತರ ಎಲ್ಲಾ ಕೃತಿಗಳಿಗೆ 'ಸಂಕೇತ'ವಾದರೂ, ಅದು ಒಂದು 'ರೂಪಕ'ವಾಗಿ ಸಫಲವಾಗಲಾರದು. ಏಕೆಂದರೆ ಇಂತಹ ಸಂಕೇತವು ಒಂದು ಕಲಾಕೃತಿ-ಸರಣಿಯೊಂದರ ಹಾಗೂ ಆ ಕಲಾವಿದನ ಒಟ್ಟಾರೆ ಸಾಧನೆಯ ಇತಿಮಿತಿಗಳಿಗೂ ಸಂಕೇತವಾಗಿ ಉಳಿದುಬಿಡುವ ಅಪಾಯವಿದೆ. 'ಜೆಮಿನಿರಾಯ್ ಶೈಲಿ'ಯೆಂದು ಪ್ರಸಿದ್ಧವಾಗಿರುವ ಕೃತಿಯೊಂದು ಇಂತಹ 'ರೂಪಕ'ವಲ್ಲದ 'ಸಾಂಕೇತಿಕತೆ'ಗೆ ಒಂದು ಒಳ್ಳೆಯ ಉದಾಹರಣೆ.

ಶಿವಪ್ರಸಾದರ ಈ 'ಹುಲಿಚಿತ್ರ' ('ಟೈಗರ್ ಪೈಂಟಿಂಗ್) ಅಂತಹುದಲ್ಲ. ಈ ಕೃತಿಯ ಒಳಕ್ಕೆ ಅನೇಕ ರೀತಿಯಲ್ಲಿ ವೀಕ್ಷಕ ಪ್ರವೇಶಿಸಲು ಸಾಧ್ಯ. ಕಲಾವಿದರನ್ನು ಕುರಿತು ಕೃತಿನಿಷ್ಠವಾಗಿಯಷ್ಟೇ ಬರೆಯುವ ಒಂದು ಸಂಪ್ರದಾಯವು ಕನ್ನಡದ ದೃಶ್ಯ ಕಲಾಸಾಹಿತ್ಯದಲ್ಲಿದೆ. ಕೃತಿನಿಷ್ಠ ವಿವರವನ್ನು, ವಿಶ್ಲೇಷಣೆಯನ್ನು ಮಾಡಲಾಗದವರು ಕಲಾವಿದನ ಸಾಮಾಜಿಕ ಕಥೆ ಹೆಣೆಯುವುದು ಕನ್ನಡ ದೃಶ್ಯಸಾಹಿತ್ಯ ಚರಿತ್ರೆಯ ಇನ್ನುಳಿದ ಸ್ಥಾನವನ್ನು ಆಕ್ರಮಿಸುತ್ತದೆ. ಮೊದಲನೆಯ ಬರಹದ 'ಶೈಲಿ'ಯು ದೃಶ್ಯಕಲೆಯನ್ನು ವಿಶಾಲ ಸಾಂಸ್ಕೃತಿಕ ಅನುಭವದ ಅಂಗವಾಗಿ ನೋಡಲಿಚ್ಛಿಸದೆ, ನೋಡಲಾಗದವರು ರೂಪಿಸಿದ ಒಂದು ನಿರ್ಮಿತಿ (ಕನ್‌ಸ್ಟ್ರಕ್ಟ್). ಎರಡನೆಯದು ವಾಚ್ಯಾನುಭವದ

ಹಿನ್ನೆಲೆಯಲ್ಲಿಯಷ್ಟೇ 'ದೃಶ್ಯ'ವೊಂದನ್ನು ಗ್ರಹಿಸುವವರ ಅಸಹಾಯಕ ಶೈಲಿ. ಇವೆರಡರ ನಿಜ ಸಮಾಗಮವಾದಾಗಲೇ ಸಂಸ್ಕೃತಿಯ ಅನುಭವದ ಜೀವಂತ ಅಂಗವಾಗಿ ದೃಶ್ಯಕಲೆ ರೂಪಿತವಾಗುವುದು. ಬಹುಶಃ ಹೀಗಿನ್ನೂ ಆಗದಿರುವುದರಿಂದಲೇ ಕನ್ನಡದ ದೃಶ್ಯಕಲಾ ಸಾಹಿತ್ಯದ ಮೂಲಕ ಸ್ಪಷ್ಟಗೊಳ್ಳುತ್ತಿರುವ ಅನುಭವವನ್ನು ವಿಶಾಲ ಕನ್ನಡದ ಸಾಂಸ್ಕೃತಿಕ ಚರ್ಚೆಯು ನಿಕೃಷ್ಟವಾಗಿ ಪರಿಗಣಿಸಿರುವುದು. ಕಲಾಕೃತಿಯೊಳಗಿನಿಂದಲೇ, ಅದರ ನಿರ್ವಚನದ ಮುಖೇನವೇ, ಅದು ರೂಪುಗೊಂಡ ವಿಶಾಲ ಸಂದರ್ಭ ಮತ್ತು ಅದರ ನಿರ್ಮಾತೃವಿನ ಮನೋವ್ಯಾಪಾರವನ್ನು ಅರಿಯುವುದು ಒಂದು ಸಾಹಸಗಾಥೆ. ಆದ್ದರಿಂದಲೇ ಈ ಕೃತಿಯ ಮುಖೇನ, ಶಿವಪ್ರಸಾದರನ್ನು ಒಂದು ನಿಟ್ಟಿನಿಂದ ಅರ್ಥೈಸುವ ನನ್ನ ಪ್ರಯತ್ನ ಈ ಪುಸ್ತಕ.

ಈ 'ಹುಲಿಚಿತ್ರ'ವನ್ನು ನಾಲ್ಕಾರು ವಿಧದಲ್ಲಿ ವಿಶ್ಲೇಷಿಸುವುದು ಸಾಧ್ಯ. ಅಂತಹುದರಲ್ಲಿ ಆಯ್ದ ಮೂರು ವಿಧಾನಗಳನ್ನು ಇಲ್ಲಿ ನೀಡಲಾಗಿದೆ. ಶಿವಪ್ರಸಾದ್ ಕಲಾವಿದರಾಗಿ ರೂಪುಗೊಂಡ ಸಂದರ್ಭ ಹಾಗೂ ಹಿನ್ನೆಲೆಯಲ್ಲಿ ಇದ್ದ/ಇರುವ 'ದೃಶ್ಯ-ವಾಚ್ಯತೆ'ಯ ಒಂದು ಜ್ಞಾನಪ್ರಕಾರದ ವಿವಿಧ 'ವೀಕ್ಷಣಾಕ್ರಮ'ದ ಮೇಲೆಯೂ ಬೆಳಕು ಚೆಲ್ಲುವ ಒಂದು ಪ್ರಾಯೋಗಿಕ ನೋಟಕ್ರಮವಿದು.

(ಅ) ವಿಶ್ಲೇಷಣೆ ಒಂದು: 'ಹುಲಿಚಿತ್ರ'ದಲ್ಲಿ ಹುಲಿವೇಷದವನೊಬ್ಬ ಚಿತ್ರದ ಚೌಕಟ್ಟಿನ ಮುನ್ನೆಲೆಯಲ್ಲಿ ಉಗ್ರನಾಗಿ ನಿಂತಂತಿದ್ದಾನೆ. ಆತನ ಹಿಂದಿರುವ ಮಾಂಸದಂಗಡಿಯ ಮುಂದೆ ಮೇಕೆಗಳು ಕಾದಾಡುತ್ತಿವೆ. ಆ ಪ್ರಾಣಿಗಳ ಮನೋಭಾವಕ್ಕೂ ಹುಲಿವೇಷದವನ ರೋಷಾವೇಶಕ್ಕೂ ಇರುವ ಸಾಮ್ಯತೆಯು ಸುಲಭವಾಗಿ ಗುರುತು ಸಿಗುವಂತಹದ್ದು. ಜೊತೆಗೆ, ರಸ್ತೆ ದಾಟುವಾಗ ಅಚಾನಕವಾಗಿ ವಾಹನವೊಂದು ನುಗ್ಗಿ ಬರುವ ಸಂದರ್ಭದಲ್ಲಿ ಪಾದಚಾರಿಗಳು ಹಿಂದೆಗೆಯುವಂತೆ, ವೇಷಗಾರನು ಚಿತ್ರದ ಎಡಕ್ಕೆ ತನ್ನ ದೇಹವನ್ನು ಹಿಂತೆಗೆದುಕೊಳ್ಳುತ್ತಿದ್ದಾನೆ. ಹೀಗಾದಾಗ ಲಾಭವಾಗುತ್ತಿರುವುದು ನೋಡುತ್ತಿರುವ ಕಣ್ಣಿಗೇ. ಏಕೆಂದರೆ, ಆತ ಕೃಪೆ ತೋರಿ ಹಿಂದೆಗೆದುದರಿಂದಲೇ ಕ್ಯಾನ್ವಾಸಿನ ಮಧ್ಯಭಾಗದಲ್ಲಿ (ಹಿಂಬದಿಯಲ್ಲಿ) ಮೇಕೆಗಳ ಕುಸ್ತಿ ನಮಗೆ ಗೋಚರವಾಗುತ್ತಿರುವುದು. ಆದ್ದರಿಂದ ಹುಲಿವೇಷದವನ ಆವೇಶ ಮತ್ತು ಪ್ರಾಣಿಗಳ ವೈರತ್ವದ ಭಾವಗಳು ಪರಸ್ಪರ ಪೂರಕವಾಗಿದ್ದು, ವೀಕ್ಷಕನ ಕಣ್ಣಿಗೆ ಅತ್ಯಂತ ನಾಟಕೀಯ ಕ್ಷಣವೊಂದರ ದರ್ಶನವಾಗುತ್ತದೆ. (ಇದೊಂದು ಕೃತಿಯ ಭೌತಿಕ ವಿವರಗಳಿಗೆ ನಿಷ್ಠವಾದ ಫಾರ್ಮಾಲಿಸ್ಟ್ ವಿಮರ್ಶೆ)

(ಆ) ವಿಶ್ಲೇಷಣೆ ಎರಡು: ಈ ಹುಲಿವೇಷದವನು ಅಚಾನಕವಾಗಿ ಹಿಂದೆಗೆಯುತ್ತಿಲ್ಲ. ಬದಲಿಗೆ ತಾನೇ ಹುಲಿಯಾಗಿ, ತನ್ನ ಶಸ್ತ್ರದೊಂದಿಗೆ ಯಾರ ಮೇಲೋ ಆಕ್ರಮಣ ಮಾಡಲು ತಯಾರಾಗುತ್ತಿದ್ದಾನೆ. ಆ ಆಕ್ರಮಣವು ವೀಕ್ಷಕರಾದ ನಮ್ಮ ಕಡೆಗಲ್ಲ. ನಮ್ಮ ಬೆನ್ನಿನ ಹಿಂದೆ ಎಡಕ್ಕಿರುವ ಯಾವುದೋ ವ್ಯಕ್ತಿ-ವಸ್ತುವಿನ ಕಡೆಗೆ ಆತನ ಗಮನವಿದೆ. ಬಹುಶಃ ತೂಗು ಹಾಕಲಾಗಿರುವ ಮಾಂಸದ ಕೆಳಗೆ ಗಾಜಿನಲ್ಲಿ ಪ್ರತಿಫಲಿತವಾಗಿರುವ ಕಾರಿನ

ನಿಜರೂಪವು ನಮ್ಮಬೆನ್ನ ಹಿಂದಿದೆ. ಅದೇ ಅವನ ರೋಷಾವೇಶದ ಮೂಲವಾಗಿರಲೂಬಹುದು. ಹುಲಿವೇಷದವನನ್ನು ಅಸಡ್ಡೆಗೊಳಗಾದ ಜಾನಪದ ಕಲಾಪ್ರಕಾರಗಳಿಗೆ ಸಂಕೇತವಾಗಿಯೂ, ಕಾರನ್ನು ಯಾಂತ್ರೀಕರಣದ ಸಂಕೇತವಾಗಿಯೂ ಸುಲಭವಾಗಿ ಅರ್ಥೈಸಿ ಬಿಡಬಹುದು. ಸಮಾಜವಾದದೊಳಗೆ ಹಾಸುಹೊಕ್ಕಾಗಿರುವ ಇವುಗಳ ನಡುವಿನ ವೈರುಧ್ಯದ ನಿರಂತರ ಘರ್ಷಣೆಯ ಜನಪ್ರಿಯ ಕ್ಲೀಷೆಯನ್ನು ತನ್ಮೂಲಕ ಈ ಚಿತ್ರಕ್ಕೆ ಆರೋಪಿಸಿಯೂ ಬಿಡಬಹುದು.

ಆದರೆ ಈ ಗ್ರಹಣಕ್ರಮವನ್ನು ತೊರೆಯುವುದೂ ಅಷ್ಟು ಸುಲಭದ ಮಾತಲ್ಲ. ಉದಾಹರಣೆಗೆ, ಹಾಗೆ ಮಾಡಲಾಗದುದ್ದಕ್ಕೆ ಕೆಲವು ಬಲವಾದ ಸಾಕ್ಷಿಗಳು ಚಿತ್ರದೊಳಗೇ ಇರುವುದನ್ನು ಗಮನಿಸಬೇಕಾಗುತ್ತದೆ. ಹುಲಿವೇಷದವನ ಸಮಗ್ರ ದೇಹದ ಹೊರರೇಖೆಗಳು ಒಂದು ಕಟೌಟಿನ ರೀತಿ, ಚಿತ್ರದ ಇತರೆ ವಿವರಗಳಿಂದ ಬೇರ್ಪಟ್ಟಿದೆ. ಈ ಆಕಾರವು ಕಂಪ್ಯೂಟರ್ ಇಮೇಜ್ ಒಂದನ್ನು ಸುತ್ತಲಿನ ವಿವರದಿಂದ ಬೇರ್ಪಡಿಸಲಾಗುವಂತೆ ಭಿನ್ನಗೊಂಡು, ವೀಕ್ಷಕನೆಡೆಗೆ ಬರುತ್ತದೆ. ಅದಕ್ಕೆ ಪೂರಕವಾಗಿ ಆತನು ಮುಂದೆ ಚಾಚಿದ ಬಲ ಮುಂಗೈ ಇದೆ. ಅದು ಚಿತ್ರಿತ ಹಿನ್ನೆಲೆಗೂ, ನಾವು ನೋಡುತ್ತಿರುವ ವಸ್ತುತಃ ಚೌಕಟ್ಟಿಗೂ ನಡುವೆ ಇರುವ ಕಾಲ್ಪನಿಕ ಪದರವನ್ನು (ಇದ ರೆನಾಯಸಾನ್ಸ್ ನೈಜತೆಯ ಶೈಲಿಯಲ್ಲಿ ಡಾ-ವಿಂಚಿಯ ಸ್ಫುಮಾಟೋ ತಂತ್ರ ಎನ್ನುತ್ತಾರಲ್ಲಾ ಅದನ್ನು ಸರಿಸುಮಾರು ಹೋಲುತ್ತದೆ) ಒಡೆದು ಹಾಕಲು ಮಾಡುತ್ತಿರುವ ಪ್ರಯತ್ನದಂತಿದೆ.

ಯುರೋಪಿಯನ್ ಕಲಾವಿದ ಕರವಾಜಿಯೋನ ಚಿತ್ರವೊಂದರಲ್ಲಿ ಕ್ರೈಸ್ತ ಪಕ್ಕಕ್ಕೆ ತಿರುಗಿ ಎರಡೂ ಕೈಗಳನ್ನು ಹೊರಚಾಚಿದ್ದಾನೆ. ಎರಡೂ ತುದಿಗಳ ನಡುವೆ ಐದಡಿ ವ್ಯತ್ಯಾಸವಿದ್ದಾಗ್ಯೂ, ಎರಡೂ ಕೈಗಳು ಒಂದೇ 'ಅಳತೆ'ಯಾದಾಗಿ ಚಿತ್ರಿತಗೊಂಡಿವೆ! ಅಲ್ಲಿ ಕ್ರೈಸ್ತ ತನ್ನ ಕೈಯನ್ನು ಎಷ್ಟೇ ಹೊರಚಾಚಿದರೂ ಚಿತ್ರದ/ಚಿತ್ರಿತ ಪರದೆಯನ್ನು 'ಹರಿದು' ತನ್ನ ಭಕ್ತರಾದ ನೋಡುಗರನ್ನು (ವೀಕ್ಷಕನ ಮನೋಪರದೆಯನ್ನು) ತಲುಪಲಾರದ ಅಸಹಾಯಕತೆಯನ್ನು ಕರವಾಚಿಯೇ ಸೂಚಿಸುತ್ತಿದ್ದಾನೆ. ವ್ಯತಿರಿಕ್ತವಾಗಿ, ಶಿವಪ್ರಸಾದರ ಹುಲಿವೇಷದವನು ಈಗಲೋ ಆಗಲೋ ಕಾಲ್ಪನಿಕ ಪರದೆಯನ್ನು ಒಡೆದು ಹಾಕುವುದು ನಿಶ್ಚಿತ. ಅದು ಹುಲಿವೇಷದವನ ಉದ್ದೇಶವೂ ಸಹ. ಅದಕ್ಕೆ ಪೂರಕವಾಗಿ ಆತನ ಕೈಯಲ್ಲಿ ಹರಿತವಾದ ಅಸ್ತ್ರವಿದೆ. ಅದರ ಇರುವಿಕೆ ಮತ್ತು ಮುಂಗೈ ಹೊರಚಾಚುವಿಕೆಯ ಒಟ್ಟಾರೆ ಪ್ರಯತ್ನವು ವೀಕ್ಷಕನ ಮನೋಪರದೆಯ ಮೇಲೆ ಆಕ್ರಮಣ ಮಾಡುತ್ತಿದೆ. ತನ್ಮೂಲಕ ವೀಕ್ಷಕನನ್ನೇ ಈ ದೃಶ್ಯ ಘಟನೆಯಲ್ಲಿ ಸ್ವತಃ ಭಾಗಿಯಾಗುವಂತೆ ಪ್ರೇರೇಪಿಸುವ 'ದೃಶ್ಯಸಾಮರ್ಥ್ಯ'ವನ್ನು ಹೊಂದಿದೆ. ಈ ಕ್ಯಾನ್ವಾಸ್, ಅಂತೆಯೇ ಅವರ ಎಲ್ಲಾ ಕೃತಿಗಳು ಮತ್ತು ಭಾರತದ ಬಹುಪಾಲು ದೃಶ್ಯ ಕಲಾಕೃತಿಗಳು ನಗರೀಕೃತ ವೀಕ್ಷಕನಿಗಾಗಿಯೇ ಸೃಷ್ಟಿಗೊಳ್ಳುವುದರಿಂದ, ಈ "ಹುಲಿಚಿತ್ರ"ದೊಳಗಿನ ವೇಷಗಾರನು ನಮ್ಮ ಮೂಲಕ ನಗರೀಕರಣದ ಮೇಲೆ

ಕೆ.ಟಿ. ಶಿವಪ್ರಸಾದ್/೨

ದಾಳಿ ಮಾಡುತ್ತಿದ್ದಾನೆ. (ಇದೊಂದು ಕೃತಿನಿಷ್ಠ ವಿಮರ್ಶೆಯಲ್ಲದ, ಕಲೆಯ ಮೂಲಕ ಸಾಮಾಜಿಕ ಅತಂತ್ರತೆಯೊಂದನ್ನು ಗ್ರಹಿಸುವ ಎಡಪಂಥೀಯ ಒಲವುಳ್ಳ ವಿಮರ್ಶಾಕ್ರಮ)

(ಇ) ವಿಶ್ಲೇಷಣೆ ಮೂರು: ಈ ಚಿತ್ರ ಚೌಕಟ್ಟಿನ ಬಲಭಾಗದ ಎತ್ತರಕ್ಕೇರುವ ಬಾಗಿಲಿನಂತಹ- ಅವಕಾಶ, ಚಿತ್ರದ ನಿಜ ಚೌಕಟ್ಟು ಹಾಗೂ ಹುಲಿವೇಷದವನ ಎಡಕ್ಕಿರುವ ಕಂದು-ಕಪ್ಪನೆಯ ಭಾಗಗಳನ್ನು ಗಮನಿಸಿ. ಹಳದಿ ಬಣ್ಣದ, ಏಕವರ್ಣಿಯವೆನ್ನಿಸುವ (ಮೊನೋಕ್ರೋಮಿಶ್) ವೇಷಗಾರನ ಪರಿಣಾಮದೊಂದಿಗೆ ಕೂಡಿ, ಈ ಕಪ್ಪಾದ ಭಾಗಗಳನ್ನು ಹೊರತುಪಡಿಸಿದ ಚಿತ್ರಿತ ಭಾಗಗಳನ್ನೆಲ್ಲ ಒಟ್ಟಾಗಿ ಒಂದು 'ಕಟೌಟ್' ಎಂದು ಭಾವಿಸಬಹುದು. ಮುಂಗೈಯನ್ನು ಹೊರತುಪಡಿಸಿ ವ್ಯಕ್ತಿಯ ಸಮಗ್ರ ದೇಹವು ಚಪ್ಪಟೆಯೆನಿಸುತ್ತದೆ. ನಮ್ಮ ಸುತ್ತಲಿನ ಜನಪ್ರಿಯ ವ್ಯಕ್ತಿ ರಾಜಕಾರಣಿಗಳ ಕಟೌಟ್‌ಗಳೂ ಸಹ ಚಪ್ಪಟೆಯಾಗಿರುವಂಥವು. ಈ ಕೃತಿಯಲ್ಲಿ ಆತನನ್ನು ಹಿಡಿದಿರಿಸುವ ಎತ್ತರದ ಹಿನ್ನೆಲೆಯ ವರ್ಣಗಳೂ ಗಮನಾರ್ಹ, ಕಾಲಿನ ಭಾಗದ ಹಿನ್ನೆಲೆಯಾಗಿರುವ ಕೆಂಪು ಹಾಗೂ ಕುರಿಪಟ್ಟಲಿಗಳ ಹಿನ್ನೆಲೆಯಾದ ಬೂದು ಬಣ್ಣವು ಅಡ್ಡಕ್ಕೆ ನಿಂತ ಬಣ್ಣದ ತಗಡೂ ಹೌದು. ಅಥವ/ಮತ್ತು ಮಲಗಿರುವ ರಸ್ತೆಯೂ ಆಗಿರಬಹುದು. ಏಕೆಂದರೆ, ಕಾರಿನ ನೆರಳು ಬೀಳುತ್ತಿರುವ ಹಿನ್ನೆಲೆಯ ಬಣ್ಣವೂ ಇದರೊಂದಿಗೆ ಹೊಂದಿಕೊಂಡು, ಅದು ರಸ್ತೆ ಎಂಬ ವಾದವನ್ನು ಬಲಗೊಳಿಸುತ್ತದೆ.

ಒಂದರ್ಥದಲ್ಲಿ ಇಲ್ಲಿ ಬೂದು ಬಣ್ಣದ ನಿಜಾರ್ಥವು ಅಯೋಮಯವಾದುದಾಗುತ್ತದೆ. ವೇಷಗಾರನ ಕೈಲಿರುವ ಶಸ್ತ್ರದ ಚಿತ್ರಣ ರೀತಿಯೂ ಆತನ ಚರ್ಮದಂತಿದೆ. ಈ ನಿಟ್ಟಿನಿಂದ ಯೋಚಿಸಿದಾಗ ಆತನ ಮೈಯ ಚರ್ಮದ 'ಅರ್ಥ' ಹಾಗೂ ಶಸ್ತ್ರದ 'ಅರ್ಥ' ಎರಡೂ ಒಂದೇ ಆಗಬೇಕಾಗುತ್ತದೆ. ಇಳೇ ಬಿದ್ದ ಕುರಿಮಾಂಸವೂ ಒಮ್ಮೆ ತೂಗುಹಾಕಿದಂತೆನಿಸಿದರೆ ಮತ್ತೊಮ್ಮೆ ತ್ರಿಶಂಕುಸ್ಥಿತಿಯಲ್ಲಿ ಇದ್ದಂತೆನಿಸುತ್ತದೆ! ಅವು ಕೋಣೆಯೊಂದರ ಒಳಗೆ ಇದೆ ಎಂಬ ಅರ್ಥೈಸುವಿಕೆಯೂ ಅಷ್ಟೇನೂ ಸಮರ್ಪಕವಾದ ನಿರ್ಣಯವಾಗಲಾರದು.

ಹುಲಿ ವೇಷಗಾರನನ್ನು ಚಿತ್ರಿಸಿರುವ ರೀತಿಯು ಹಿನ್ನೆಲೆಯ ಚಿತ್ರಣದ ರೀತಿಗಿಂತಲೂ ಭಿನ್ನ. ವೇಷಗಾರನ ಮೇಲಿಂದ ನಿಜ ಚರ್ಮಕ್ಕೆ ಮತ್ತು ಚಿತ್ರಿತ ತೈಲವರ್ಣ ಚರ್ಮಕ್ಕೆ - ಎರಡಕ್ಕೂ ಬಿಸಿಲಿನ ನಾಟಕೀಯ ಸ್ಪರ್ಶವಿದೆ. ಆದ್ದರಿಂದಲೇ ನೆರಳು ಆತನ ಮೈಮೇಲೆ ಬಿದ್ದಿದೆ. ಇದನ್ನು ತೈಲವರ್ಣ ಚಿತ್ರಣಕ್ರಮದಲ್ಲಿ 'ಚಿರಸ್ಕುರೊ' ಎನ್ನುತ್ತೇವೆ. ಆತನನ್ನು ಹೊರತುಪಡಿಸಿ ಇನ್ನಿತರ ಯಾವ ವಸ್ತುವಿನ ಮೇಲೆಯೂ ಈ ಬಗೆಯ ನಾಟಕೀಯ ನೈಸರ್ಗಿಕ ನೆರಳು ಬೆಳಕಿನಾಟ ಕಂಡುಬರದು. ಒಟ್ಟಾಗಿ ಮೇಲಿನ 'ಇ' ಭಾಗದ ವಿವರಗಳು ಚಿತ್ರದ 'ಅ' ಮತ್ತು 'ಆ' ವಿವರಗಳಗಿಂತ ಭಿನ್ನ ಹಾಗೂ ಹೆಚ್ಚು ಅತಾರ್ಕಿಕವಾಗುತ್ತದೆ. ಆದ್ದರಿಂದಲೇ ಅದೊಂದು ಸೃಜನಶೀಲ ಕಟೌಟ್ ಸಹ ಹೌದು. ಈ ರೀತಿಯ ಗ್ರಹಿಕೆಯು ಜನಪ್ರಿಯ ದೃಶ್ಯ-ಪ್ರಚಾರ ಕಲೆಯ ಮೂಲಭೂತ ಲಕ್ಷಣವೂ ಹೌದು. (ಆಧುನಿಕ ಪಾಪ್ಯುಲರ್ ಮ್ಯೂರಲ್ ಸಂಪ್ರದಾಯ ಸತ್ವವನ್ನು ಸ್ಪರ್ಶಿಸುವ ಕ್ರಮವಿದು)

"ಹುಲಿಚಿತ್ರ"ವನ್ನು ಶಿವಪ್ರಸಾದರ ಇಲ್ಲಿಯವರೆಗಿನ ಸಾಧನೆಯ 'ರೂಪಕ'ವೆಂದೆ. ನಂತರ ಅದನ್ನು ವಿಶ್ಲೇಷಿಸುವ ಮೂರು ವಿಧಾನಗಳನ್ನು ರೂಪಿಸಿದ್ದೇನೆ. ಅಂದರೆ ಈ ಚಿತ್ರ ತನ್ನನ್ನೇ ಹಲವು ಬಗೆಯ ವಾಚ್ಯವಿಶ್ಲೇಷಣೆ

ಮತ್ತು ಕ್ರಮಗಳಿಗೆ ಬಿಟ್ಟುಕೊಡಲು ತಯಾರಾದಾಗ ಒಂದು ಮುಖ್ಯ ಅಂಶವನ್ನು ನಾವು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಈ ಕೃತಿಯನ್ನು ಏಕಪ್ರಕಾರವಾಗಿಯಷ್ಟೇ ಓದಲಾಗುವುದಿಲ್ಲವೆಂಬುದೇ ಆ ಅಂಶ. ಆದ್ದರಿಂದಲೇ ಸಾಮಾನ್ಯವಾಗಿ ವೀಕ್ಷಕರು ಇಂತಹ ಕೃತಿಗಳನ್ನು ಕಂಡಕೂಡಲೇ ಅವಸರವಸರವಾಗಿ ನಿರ್ಧರಿಸಿಬಿಡುವಂತೆ ಇದೊಂದು ಕೇವಲ 'ಸೋಷಿಯಲಿಸ್ಟ್-ರಿಯಲಿಸಂ' ಕೃತಿಯಲ್ಲ. ಈ ಕೃತಿಯ ಹಂದರವು ಸೋಷಿಯಲಿಸ್ಟ್ ನೈಜತೆಯನ್ನು ನಿಕೃಷ್ಟವೆಂದು ನಿರಾಕರಿಸದೆ, ಅದನ್ನು ತನ್ನ ವಿಶಾಲ ಹಂದರದ ಅನೇಕ ಸುಪ್ತ ಅನುಭವದೊಳಗಿನ ಒಂದು ಅಂಶವಾಗಿ ಸ್ವೀಕರಿಸುತ್ತದೆ ಕೂಡ.

ಕೆ.ಟಿ. ಶಿವಪ್ರಸಾದ್/೩

ಆದ್ದರಿಂದಲೇ ಈ ಕೃತಿಯು ಶಿವಪ್ರಸಾದ್ (ಜನನ: ೧೯೪೭) ಇಲ್ಲಿಯವರೆವಿಗೆ ಕಲಾವಿದರಾಗಿ ರೂಪುಗೊಂಡ ಸೌಂದರ್ಯಾತ್ಮಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮನೋವೈಜ್ಞಾನಿಕ ಹಂದರವನ್ನು ಗುರುತಿಸಲೂ ನೆರವು ನೀಡುತ್ತದೆ.

ಮೇಲೆ ವಿವರಿಸಲಾದ ಮೂರು ಬಗೆಯ ವಿಶ್ಲೇಷಣಾ ಕ್ರಮದಲ್ಲಿ ಒಂದು ಸಾಮ್ಯತೆ ಇದೆ. ಅದೇನೆಂದರೆ ಶಿವಪ್ರಸಾದ್ ತೈಲವರ್ಣವನ್ನು ಬಳಸುವ ಕ್ರಮ. ಇದೇ ಅವರ ಸಮಗ್ರ ಕೃತಿಗಳನ್ನು ಅನುಭವಿಸಲು ಪ್ರವೇಶಿಕೆ ನೀಡುವ ಪ್ರಥಮ ದೃಶ್ಯಾತ್ಮಕ ಸಾಧನ. ಮೊದಲ ವಿಶ್ಲೇಷಣೆಯಲ್ಲಿ, ಸೌಂದರ್ಯತ್ಮಕ ಅನುಭವದಲ್ಲಿ ವರ್ಣಗಳು ಅಮೂರ್ತ ರೀತಿಯಲ್ಲಿ ನಮ್ಮ ಮನಸ್ಸನ್ನು ಆಕ್ರಮಿಸುತ್ತದೆ. ಎರಡನೆಯದರಲ್ಲಿ ವರ್ಣವು ನೈಜ ಸಾಮಾಜಿಕ ಕಥನವೊಂದರ ಅಬ್ಬರಕ್ಕೆ ಪೂರಕವಾಗಿ ಮಾರ್ಪಾಡುಗೊಳ್ಳುತ್ತದೆ. ಮೂರನೆಯ ಕ್ರಮದಲ್ಲಿ, ವರ್ಣದೊಂದಿಗೆ ಇತರ ಎಲ್ಲ ದೃಶ್ಯರೂಪಕದ ಸಾಧನಗಳೆಲ್ಲ (ಆಕಾರಗಳು, ಸಂಯೋಜನೆ, ಮೈವಳಿಕೆ ಇತ್ಯಾದಿ) ಒಟ್ಟಾರೆಯಾಗಿಯೂ ಒಂದು ಸಾಂದ್ರ ಅನುಭವವನ್ನು ಕಟ್ಟಿಕೊಡಲು ಪ್ರಜ್ಞಾಪೂರ್ವಕವಾಗಿ ನಿರಾಕರಿಸುತ್ತದೆ.

ಇದಕ್ಕೆ ಕಾರಣ ಮೂರನೆಯ ಗ್ರಹಣಕ್ರಮವು ಮುಖ್ಯವಾಹಿನಿ ಕಲೆಯ ಪರಿಧಿಯ ಹೊರಕ್ಕೆ ಹೋಗಿ, ಜನಪ್ರಿಯ ಕಲೆ ಎಂಬ ಇನ್ನೂ ಅಷ್ಟೇನೂ ಪರಿಚಿತವಲ್ಲದ ಆಯಾಮವನ್ನು ಪ್ರವೇಶಿಸಿ ಬಿಡುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಈ ಕೃತಿಯು ಹಲವು ಅನುಭವಗಳನ್ನು ನೀಡುವ ಸಾಮರ್ಥ್ಯವಿದ್ದಾಗಲೂ ಈ ಎಲ್ಲಾ ಅನುಭವಗಳನ್ನೂ ಶಿವಪ್ರಸಾದ್ ಬಳಸುವ ತೈಲವರ್ಣವೇ (ಅದರ ಸಾಂದ್ರತೆ, ಬೆಳಕಿನೊಂದಿಗಿನ ಅದರ ಒಡನಾಟ ಇತ್ಯಾದಿ) ನಿರ್ದೇಶಿಸುತ್ತದೆ.

ಈ ಕೃತಿಯ ಹಲವು ಅನುಭವಗಳು ಪರಸ್ಪರ ವೈರುಧ್ಯಮಯ ಆಶಯ ಹೊಂದಿರುವಾಗಲೂ ಈ ಮಾತು ಸತ್ಯ. ಅಂದರೆ ಕೃತಿಯೊಂದು ವೈವಿಧ್ಯಮಯ ಅನುಭವ ನೀಡುವ ಅಪರೂಪದ ಅರ್ಹತೆ ಹೊಂದಿರುವಾಗಲೂ ಅವುಗಳಲ್ಲೆಲ್ಲ, ಭಿನ್ನ ಭಿನ್ನ ಸೇಂದ್ರೀಯ ಅನುಭವಕ್ಕೆ ಪೂರಕವಾಗಿ ತೈಲವರ್ಣವೆಂಬ ಭೌತಿಕ-ಕಲಾತ್ಮಕ ವಸ್ತು ಬಳಕೆಗೊಳ್ಳಲು ತಯಾರಾಗುತ್ತದೆ. ಶಿವಪ್ರಸಾದ್ ಮೂರು ದಶಕಗಳಲ್ಲಿ ತೈಲವರ್ಣವನ್ನು ರೂಢಿಸಿಕೊಂಡಿರುವ ಕ್ರಮದ ಫಲವಿದು. ಆದ್ದರಿಂದಲೇ ಕಲಾವಿದರ ಒಟ್ಟಾರೆ ಕೃತಿ ಸಮೂಹವನ್ನು ಮನಸ್ಸಿನಲ್ಲೇ ಚಿತ್ರಿಸಿಕೊಂಡಾಗ ಅವುಗಳಲ್ಲಿನ ಭೌತವರ್ಣಗಳು, ಒಂದು ಆದಿಭೌತಿಕ ಆಯಾಮವನ್ನು ಪ್ರವೇಶಿಸಿಬಿಡುವಂತಹ ಭಾವನೆ ನಮ್ಮಲ್ಲಿ ಉಂಟಾಗುತ್ತದೆ. ಮತ್ತು ಶಿವಪ್ರಸಾದರ ತೈಲವರ್ಣದ ಅನುಭವವು ಅವರದೇ ಜಲವರ್ಣದ ಒಂದು ಅನಿವಾರ್ಯ ಅಂಶವಾಗಿ ಕೃತಿಗಳಲ್ಲಿಯೂ ನೆನಪಾಗಿ ಉಳಿದು, ಸರ್ವವ್ಯಾಪಿ ಗುಣವನ್ನು ಪಡೆದುಕೊಳ್ಳುತ್ತದೆ.

೧

ಕಳೆದ ಮೂರು ದಶಕಗಳಲ್ಲಿ, ಮೂರು ಮುಖ್ಯ ಹಂತಗಳಲ್ಲಿ ಶಿವಪ್ರಸಾದರ ಕೃತಿಗಳು ಮಾರ್ಪಾಡುಗೊಂಡಿವೆ. ಶೈಲಿಯೂ ಬದಲಾಗಿದೆ. ಆದರೆ ಈ ಮೂರೂ ಶೈಲಿಗಳ ಅನುಭವಗಳು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ 'ಸಾರರೂಪಿ'ಯಾಗಿ ನಿರ್ದೇಶಿಸಲ್ಪಟ್ಟಿರುವುದು ೯೦ರ ದಶಕದ ಕೃತಿಗಳಲ್ಲಿಯೇ. ಆ ಉದ್ದೇಶವು ಈ ಕೆಳಕಂಡಿದೆ.

ಶಿವಪ್ರಸಾದರು ಮೊದಲಿನಿಂದಲೂ, ತಮ್ಮ ಕೃತಿಗಳಲ್ಲಿ ಸೋಷಿಯಲಿಸ್ಟ್-ರಿಯಾಲಿಸಂ ಎಂಬುದನ್ನು ಒಂದು ಮೋಟಿಫ್ ಆಗಿ ಬಳಸಿಕೊಂಡಿದ್ದಾರಷ್ಟೇ. ಅದು ಒಂದು ಆರಂಭಿಕ ನೆಪವೇ ಹೊರತು ಆತ್ಯಂತಿಕ ಉದ್ದೇಶ ಹಾಗೂ ಗುರಿಯಲ್ಲ. ತಮ್ಮ ಕಲಾಜೀವನದ ಪ್ರಾರಂಭಿಕ ವರ್ಷಗಳಲ್ಲಿ, (ಎಪ್ಪತ್ತರ ದಶಕದಲ್ಲಿ, ಸರಿಯಲಿಸಂ- ಶೈಲಿಯನ್ನು ಹೋಲುವಂತಹ ಕೃತಿ ರಚಿಸುತ್ತಿದ್ದ ಶಿವಪ್ರಸಾದ್ ನಂತರ ಪಾಶ್ಚಾತ್ಯ-ಫ್ರೆಂಚ್ ರಿಯಲಿಸ್ಟರನ್ನು ಹೋಲುವ ಕೃತಿಗಳನ್ನು ರಚಿಸಿದರು. ಇಲ್ಲಿ ಸರಿಯಲಿಸಂ ಹಾಗೂ ಫ್ರೆಂಚ್-ರಿಯಲಿಸಂ ಎಂಬುದೂ ಅವರ ಕೃತಿಗಳನ್ನು ನೆನಪು ಮಾಡಿಕೊಳ್ಳಲು ಸಹಾಯಕವಾಗುವ ಟರ್ಮಿನಾಲಜಿಗಳಷ್ಟೇ. ಅದಲ್ಲದೆ ಈ ಪಾಶ್ಚಾತ್ಯ ಶೈಲಿಗಳಿಗೂ ಶಿವಪ್ರಸಾದರ ಆ ಘಟ್ಟದ ಕೃತಿಗಳಿಗೂ ಆಂತರ್ಯದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಉದಾಹರಣೆಗೆ ಫ್ರೆಂಚರ ಕೃತಿಗಳು ಆಧುನಿಕತೆಯ

ಕೆ.ಟಿ. ಶಿವಪ್ರಸಾದ್/೪

ಆರಂಭಿಕ ಹಂತದ ಸುತ್ತಲಿನ ಜಗತ್ತಿನ ದಾಖಲೆಯಾಗದೆ, ಫೋಟೊಗ್ರಫಿ ತಂತ್ರದ ಕಲಾತ್ಮಕ ಸಾಧ್ಯತೆಯ ಅನುಪಸ್ಥಿತಿಯಲ್ಲಿ ಈ ದಾಖಲೆ ಸಾಧ್ಯವಾಯಿತು. ಈ ಅಂಶವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಅದಕ್ಕಿಂತ ಭಿನ್ನವಾಗಿ ಶಿವಪ್ರಸಾದರ ಕೃತಿಗಳಲ್ಲಿ ಕ್ಯಾಮೆರ ಮತ್ತು ತೈಲವರ್ಣ ಎರಡೂ ಸಹ ವಸಾಹತೋತ್ತರ ಸಂದರ್ಭದಲ್ಲಿ, ತಾವು ಮೂಡಿಬಂದ ನಾಡಿನಿಂದ (ಯೂರೋಪಿಯನ್-ಅಮೇರಿಕ) ಹೊರಗಣ ಭೌಗೋಳಿಕ ಪ್ರಾಂತ್ಯದಲ್ಲಿ ನೆಲೆಗೊಂಡಿರುವಂಥವು. ಹಾಗೂ ಅವರ ಅಭಿವ್ಯಕ್ತಿಯ ಅನಿವಾರ್ಯ ಭಾಗವಾಗಿ ಹೋಗಿದ್ದಂತಹವು. ಕ್ಯಾಮೆರ, ತೈಲಚಿತ್ರಣ ಕ್ರಮ ಇತ್ಯಾದಿ ಕಲೆಯ ನೈಜತೆಯನ್ನು ಉದ್ದೀಪಿಸುವ ಸಾಧನಗಳ ಬಗ್ಗೆ ಒಂದು ಅಲಿಖಿತ ದ್ವೇಷ ಇದ್ದ/ಇರುವ ಪರಿಸರದೊಳಗಿದ್ದುಕೊಂಡು ಶಿವಪ್ರಸಾದ್ ಇದೇ ಸಾಧನಗಳನ್ನು ಬಳಸಿ ಕೃತಿ ರಚಿಸಿದ ಪ್ರತಿರೋಧಿ ಬಂಡಾಯದ ಅಂಶವು ಗಮನಾರ್ಹವಾದುದು. ಕಲಾವಲಯದಲ್ಲಿದ್ದ ವಿಮರ್ಶಾಹೀನ ಪ್ರಮುಖ ನಂಬಿಕೆಗಳಲ್ಲೊಂದನ್ನು ಸೃಜನಾತ್ಮಕವಾಗಿ ಎದ್ದು ಕಾಣುವಂತೆ ಪ್ರತಿರೋಧಿಸಿದ್ದು ಶಿವಪ್ರಸಾದರ ಆರಂಭಿಕ ಕೃತಿಗಳ ಒಂದು ಮುಖ್ಯ ಅಂಶ.

ಪ್ರತಿಭಟನಾತಕ ಮೂಲಗುಣವೊಂದು ಆರಂಭದಿಂದಲೂ ಶಿವಪ್ರಸಾದರ ಸೃಜನಕ್ರಿಯೆಯ ಅನಿವಾರ್ಯ ಭಾಗವಾಗಿದ್ದುದು ಹೀಗೆ, ರೂಪಕವೊಂದನ್ನು ಬಳಸಿ ಹೇಳುವುದಾದರೆ ಈ ಕಲಾವಿದನ ನೈಜ ಆಕಾರಗಳ ಹಿನ್ನೆಲೆಯಲ್ಲಿ ನಿಸರ್ಗ ಇರುವ ಬದಲು ಗೋಡೆಯಂತಹ ಆಕಾರವೊಂದು ನಿಂತಿರುತ್ತಿತ್ತು. ಆ ಗೋಡೆಯು, ನಿರಂತರವಾಗಿ ತನ್ನ ಮುಂಭಾಗದಲ್ಲಿರುವ ಮಾನವಾಕಾರಗಳ ಕಡೆಗೇ ಕಣ್ಣಿನ ದೃಷ್ಟಿಯನ್ನು ಪದೇ ಪದೇ ತಿರುಗಿಸಿಬಿಡುತ್ತಿತ್ತು. ತೈಲವರ್ಣದ ಮಾನವಾಕಾರಗಳಿಗೆ ಈ ಹಂತದಲ್ಲಿ ಈ ರೀತಿಯ ಪ್ರಾಮುಖ್ಯತೆ ದೊರಕಲು ಕಾರಣ ಮುಂದಿನ ದಶಕಗಳ ಕೇಂದ್ರೀಕೃತ ಉದ್ದೇಶವೊಂದರ ಸಫಲತೆಗಾಗಿ, ಇದನ್ನು ಮುಂದೆ ವಿವರಿಸಲಾಗಿದೆ.

ಇಂತಹ ಪ್ರತಿಭಟನೆಯ ಸ್ವರೂಪವು ಆಗ ನಿಶ್ಚಿತವಾದುದಾಗಿರಲಿಲ್ಲ. ನಿರಂತರವಾಗಿ, ಕಾಲಕಾಲಕ್ಕೆ ಈ ಪ್ರತಿಭಟನೆಯ ಅಂಶವು ಶಿವಪ್ರಸಾದರ ಬೇರೆ ಬೇರೆ ಸರಣಿ ಚಿತ್ರಗಳಲ್ಲಿ ಛದ್ಮವೇಷಗಳಲ್ಲಿ ಮರುಕಳಿಸುತ್ತಿತ್ತು. ಆದರೆ ಕಳೆದ ಮೂರು ದಶಕಗಳಲ್ಲಿ ಈ ಕಲಾವಿದರ ಕಲೆಯು ಬೆಳೆದು ಬಂದ ಬಗೆಗಳನ್ನು ಒಂದು ಅತೀತ- ರೂಪಕದ ಮೂಲಕ ವಿವರಿಸಬಹುದು:

ಶಿವಪ್ರಸಾದರ ಒಟ್ಟಾರೆ ಕೃತಿ ಸಮೂಹವು ಮುಖ್ಯವಾಗಿ ತೈಲವರ್ಣ ಹಾಗೂ ಕೆಲವೊಂದು ಡ್ರಾಯಿಂಗ್ ಹಾಗೂ ಜಲವರ್ಣದ ಕೃತಿಗಳನ್ನು ಒಳಗೊಂಡಂತಹುದು. ಇವುಗಳನ್ನೆಲ್ಲ ಒಟ್ಟಾಗಿ ಒಂದೇ ಸರಣಿ ಚಿತ್ರದಂತೆ ಅಥವ ಒಂದು ನಿರ್ದಿಷ್ಟ ಆದಿ-ಅಂತ್ಯವಿರುವ ಸಿನಿಮಾದಂತೆ ಭಾವಿಸಿದರೆ, ಅಂತಹ ಒಂದು ನಿರ್ಮಿತಿಯು ಒಂದು ದೃಶ್ಯಕಥಾನಕದಂತೆ ಭಾಸವಾಗುತ್ತದೆ. ಮತ್ತು ಆ ಕಥನದ ವಿವರ ಈ ಕೆಳಕಂಡಂತೆ ಇರಲು ಸಾಧ್ಯ.

(ಅ) ತೈಲವರ್ಣ ಹಾಗೂ ಫೋಟೋಗ್ರಫಿಗಳು (ಇದನ್ನು ನಾಮಪದ ಹಾಗೂ ಕ್ರಿಯಾಪದ ಎಂಬೆರಡು ಅರ್ಥದಲ್ಲಿ ಇಲ್ಲಿ ಬಳಸಬೇಕು) ಪ್ರಮುಖ ಪಾತ್ರವಹಿಸಿರುವ ಮೊದಲನೆ ಹಂತದ ಕೃತಿಗಳಲ್ಲಿ ಶಿವಪ್ರಸಾದರಿಗೆ

ಆತ್ಮೀಯರಾದ ಚಿತ್ರಿತ ಗ್ರಾಮಾಂತರ ವ್ಯಕ್ತಿಗಳು ಹೆಚ್ಚಾಗಿ ಕಂಡುಬರುತ್ತಾರೆ. ಅವರು ಆಧುನಿಕತೆಯ ಸಂಕೇತವಾದ ಕ್ಯಾಮೆರದ ಕಡೆಗೆ ತಮ್ಮ ಅಸಮಾಧಾನವನ್ನು ಪ್ರಜ್ಞಾಪೂರ್ವಕವಾಗಿ ಸೂಚಿಸುತ್ತಿದ್ದಾರೆ. ಅಂದರೆ ಇಲ್ಲಿನ ಮಾನವಾಕಾರಗಳು ಬೆದರಿದ ದಿಟ್ಟ ನೋಟದಲ್ಲಿ ಕ್ಯಾನ್ವಾಸಿನ ಪ್ರೇಮನ್ನೇ ಕ್ಯಾಮೆರಾದ ಪ್ರೇಮ್ ಎಂದು ಭಾವಿಸಿ, ವೀಕ್ಷಕನನ್ನು ಸಂಕೇತಿಸುವ, ನಾಗರೀಕನನ್ನು ಪುನರ್ ಸಂಕೇತಿಸುವ ಛಾಯಾಗ್ರಾಹಕನನ್ನಾಗಿ ಭಾವಿಸಿಕೊಂಡು ದಿಟ್ಟಿಸುವಂತಿದೆ. ಯಾವುದೇ ಬಗೆಯ ಭ್ರಮಾತ್ಮಕ ದೃಶ್ಯಾವಳಿಗಳ ಮೂಲಕ ವೀಕ್ಷಕನಿಗೆ 'ಕೇವಲ' ಮನರಂಜನಾತ್ಮಕತೆಯನ್ನು ಮಾತ್ರ ದೊರಕಿಸಿಕೊಡುವುದಿಲ್ಲ ಈ ಚಿತ್ರಗಳು, ಚಿತ್ರಿತ ಮನುಷ್ಯಾಕಾರಗಳು ತಮ್ಮ ಸುತ್ತಮುತ್ತಲಿನ ಕ್ಯಾನ್ವಾಸಿನ ಉಳಿದ ಪ್ರದೇಶಗಳಲ್ಲಿ, ಆದಷ್ಟು ನಿಸರ್ಗವೇ ಮುಂತಾದ ಶುದ್ಧ ರೊಮ್ಯಾಂಟಿಕ್ ಅನುಭವಕ್ಕೆ ಪ್ರೇರಣೆ ನೀಡುವ ದೃಶ್ಯಗಳು ಮೂಡಿಬರದಂತೆ ತಡೆಹಿಡಿಯುತ್ತವೆ. ಕಣ್ಣಿನ ಗಮನವನ್ನು ತಮ್ಮೆಡೆಗೇ ತಿರುಗಿಸಿಕೊಂಡುಬಿಡುತ್ತವೆ.

ಕೆ.ಟಿ. ಶಿವಪ್ರಸಾದ್/೫

(ಆ) ಎರಡನೇ ಹಂತದಲ್ಲಿ, ಚಿತ್ರಿತ ಮನುಷ್ಯರು ತಾವಿರುವ ಹಿನ್ನೆಲೆಯೊಂದಿಗಿನ ತಮ್ಮ ತಾರ್ಕಿಕ, ಸಹಜ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳುತ್ತಾರೆ. ಕೊಲಾಜ್ ರೀತಿಯ ಹೊಸ ತೆರನಾದ, ಸಹಜವೆನ್ನಿಸುವ ಸಂಬಂಧವು ಚಿತ್ರದೊಳಗಿನ ಆಕಾರಗಳೊಂದಿಗೆ ಹಾಗೂ ಅವುಗಳ ಹಿನ್ನೆಲೆಯೊಂದಿಗೆ ಏರ್ಪಾಡಾಗುತ್ತದೆ. ಆದ್ದರಿಂದಲೇ ಒಂದು ಘಟ್ಟದ ನಂತರ ಆಕಾರಗಳು ನಿಜಜೀವಿಗಳನ್ನು ಸಂಕೇತಿಸುತ್ತವೆ ಎಂಬ ಅರ್ಥವನ್ನೂ ಸಹ ಕಳೆದುಕೊಂಡು ಬಿಡುತ್ತವೆ. ಅದಕ್ಕೆ ಬದಲಾಗಿ ಈ ಹಂತದ ಕೃತಿಸರಣಿಯಲ್ಲಿ ಆಕಾರಗಳು ಮನುಷ್ಯ ರೂಪದಲ್ಲಿದ್ದರೂ ಸ್ವತಃ ಒಂದು ಅಮೂರ್ತ ಬೇಡಿಕೆಯ ಸಂಕೇತಗಳಾಗಿ ಮತ್ತು ಸೂತ್ರಧಾರರಾಗಿ ರೂಪಾಂತರಗೊಳ್ಳುತ್ತಾರೆ.

(ಇ) ಇಷ್ಟೆಲ್ಲ ತಂತ್ರಗಳು ಪರಸ್ಪರ ಪೂರಕವಾಗಿ, ಮೂರನೆಯ ಹಂತದಲ್ಲಿ ಕೆಲಸ ಮಾಡುವುದು ಏಕೆಂದರೆ, ವೀಕ್ಷಕನ(ಳನ್ನು ಆತನ/ಆಕೆಯ ದೃಷ್ಟಿ ಹಾಗೂ ದೈಹಿಕ ಭಾಗವಹಿಸುವಿಕೆಯನ್ನು ಮೀರಿದ ರೀತಿಯಲ್ಲಿ ಕ್ಯಾನ್ವಾಸಿನ ಒಳಕ್ಕೆಳೆದುಕೊಂಡು ಬಿಡುವ ಸಲುವಾಗಿ! ಈ ನಿಟ್ಟಿನಿಂದ ಯೋಚಿಸುವಾಗ, ಶಿವಪ್ರಸಾದರ ಕ್ಯಾನ್ವಾಸುಗಳಲ್ಲೆಲ್ಲ ಕಂಡುಬರುವ ಎಲ್ಲ ಆಕಾರಗಳೂ ಸಹ ಬಯಲು ನಾಟಕದ ಸೂತ್ರದಾರಿಗಳಂತೆ ವರ್ತಿಸುತ್ತಾರೆ. ಇತ್ತೀಚಿನ ಸರಣಿಗಳಲ್ಲಿ ಅವರು ತೊಗಲುಬೊಂಬೆಗಳನ್ನು ಬಳಸುತ್ತಿರುವುದೂ ಈ ನಂಬಿಕೆಗೆ ಸಾಕ್ಷಿಯನ್ನು ಒದಗಿಸುತ್ತವೆ. ಅವರುಗಳ ಕರ್ತವ್ಯ ಏನಿದ್ದರೂ ವೀಕ್ಷಕನನ್ನು ಚಿತ್ರದ ಚೌಕಟ್ಟಿನ ಹೊಸಿಲನ್ನು ದಾಟಿಸಿ ಚಿತ್ರಲೋಕದೊಳಕ್ಕೆ ಎಳೆದುಕೊಳ್ಳುವುದು, ಅಥವಾ/ಮತ್ತು ಒಳಗಿನ ಸೌಂದರ್ಯಾತಕ ಲೋಕ ಹಾಗೂ ಹೊರಗಿನ ಭೌತಿಕ ಲೋಕವೆರಡನ್ನೂ ಒಂದು ಮಾಡಿಬಿಡುವುದು ಮತ್ತು ಅವುಗಳ ನಡುವಿನ ವ್ಯತ್ಯಾಸವನ್ನು ಅಳಿಸಿ ಹಾಕಿಬಿಡುವುದು. ತನ್ಮೂಲಕ ಶಿವಪ್ರಸಾದ್ ತಾವು ಸ್ವತಃ ಪಾಲ್ಗೊಂಡ ಸೋಷಿಯಲಿಸ್ಟ್, ದಲಿತ, ಬಂಡಾಯ ಚಳುವಳಿಗಳ

ಭಾಗವಹಿಸುವಿಕೆಗೊಂದು ದೃಶ್ಯ ಪರ್ಯಾಯವನ್ನು ರೂಪಿಸಿಕೊಡುತ್ತಾರೆ. ಆದ್ದರಿಂದಲೇ ಶಿವಪ್ರಸಾದ್ ನಮ್ಮ ಸಂದರ್ಭದ ಅಪರೂಪದ ರಾಜಕೀಯ ಪ್ರಜ್ಞೆಯ ಕಲಾವಿದ ಎನ್ನಿಸಿಕೊಳ್ಳುತ್ತಾರೆ. ಇದು ಅವರ ಮೂರು ದಶಕಗಳ ಸೃಜನಾತ್ಮಕ ಪ್ರಕ್ರಿಯೆಯ ಸಾರರೂಪದ ಒಂದು ಕಥಾನಕ. ಅವುಗಳನ್ನು ಮುಂದೆ ವಿವರಿಸಲಾಗಿದೆ.

೩

ಆರಂಭದಿಂದಲೂ ತೈಲವರ್ಣ ಮತ್ತು ಕ್ಯಾಮೆರವು ಶಿವಪ್ರಸಾದ್ ಸೃಜನಕ್ರಿಯೆಯ ಅನಿವಾರ್ಯ ಅಂಶಗಳು ಎಂದೆ. ಇವೆರಡೂ ಕ್ರಮಬದ್ಧವಾಗಿ, ಕೇವಲ ಒಂದು ಅಂಗೀಕೃತ ಸೃಜನ ಮಾಧ್ಯಮ ಹಾಗೂ ಒಂದು ದಾಖಲಾತಿಯ ಯಂತ್ರ ಎಂದಷ್ಟೇ ಸ್ವೀಕೃತವಾಗುವುದಿಲ್ಲ. ಒಂದರ್ಥದಲ್ಲಿ ಇವೆರಡರ ನಡುವಿನ ಸಂಘರ್ಷದ ಫಲಿತಾಂಶವೇ ಎಪ್ಪತ್ತರ ದಶಕದ ಶಿವಪ್ರಸಾದರ ಸೃಜನಕ್ರಿಯೆಯ ಕಥೆಯೂ ಹೌದು. ಐತಿಹಾಸಿಕ ಪ್ರಜ್ಞೆಯಿಂದ ಹೇಳುವುದಾದರೆ, ಕ್ಯಾಮೆರದ ಸಹಾಯ ಪಡೆಯದ ನೈಜ ಕೃತಿಗಳಲ್ಲಿ ಕಾಲ್ಪನಿಕ ಅಂಶಗಳು ವಿಸ್ಮೃತಿಯ ರೂಪದಲ್ಲಿ ತಲೆದೋರುತ್ತವೆ. ಸಮಕಾಲೀನ ದೃಶ್ಯಪ್ರಕಾರಗಳಲ್ಲೊಂದಾದ ಕ್ಯಾಮೆರವನ್ನು ಅತ್ಯುತ್ಕೃಷ್ಟ ದಾಖಲಾತಿಯ ಯಂತ್ರ'ವೆಂದು ಪರಿಗಣಿಸುವ ಫೋಟೋ-ರಿಯಲಿಸ್ಟ್ ಕೃತಿಗಳಲ್ಲಿ ಕಲಾವಿದನ ದೇಹಸ್ಪರ್ಶಗುರುತು ಸಂಪೂರ್ಣವಾಗಿ ಮಾಯವಾಗುತ್ತದೆ. ನೈಜತೆಯ ಗಡಿ ಮೀರಿದಾಗ ದೊರಕುವುದು ಅತಿ-ನೈಜ ಎಂದು ಬೌದ್ಧಿಕವಾಗಿ ಕರೆಸಿಕೊಳ್ಳುವ ಮತ್ತು ಸ್ವೀಕೃತವಾಗುವ ಅಮೂರ್ತ ಸ್ಥಿತಿಯಿದು. ಶಿವಪ್ರಸಾದರನ್ನು ತಪ್ಪಾಗಿ ಫೋಟೋ-ರಿಯಲಿರೊಂದಿಗೆ ಜೋಡಿಸುವ ವಿಮರ್ಶಕರಿಗೆ ಇದು ಅರ್ಥವಾಗದು.೧* ಅವರು ಕ್ಯಾಮೆರವನ್ನು ಒಂದು ಅನಿವಾರ್ಯ ದಾಖಲೆಯ-ಯಂತ್ರವಾಗಿ ಭಾವಿಸಿದರೆ ಶಿವಪ್ರಸಾದ್ ಅದೇ ಕ್ಯಾಮೆರವನ್ನು ಭಿನ್ನವಾಗಿ, ಒಂದು ನಿರ್ದಿಷ್ಟ ತಾತ್ವಿಕ ನೆಲೆಗಟ್ಟಿನಿಂದ ಬಳಸಿಕೊಳ್ಳುತ್ತ ಬಂದಿದ್ದಾರೆ. ಯಂತ್ರವೊಂದನ್ನು 'ಯಾಂತ್ರಿಕ' ಚೌಕಟ್ಟಿನಿಂದ ಬಿಡುಗಡೆಗೊಳಿಸಿ, ಸಾಮಾಜಿಕ ಸೌಂದರ್ಯಾತ್ಮಕ ಸಾಧನವನ್ನಾಗಿ ರೂಪಾಂತರಿಸುವ ವಿಭಿನ್ನ ಗುಣವಿದು.

ಸೌಕರ್ಯಕ್ಕಾಗಿ ಇವರ ಕೃತಿಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸಿದಾಗ ಮೊದಲನೆಯ ಹಂತದಲ್ಲಿನ ಕೃತಿಗಳು ಹೆಚ್ಚು 'ಭ್ರಮಾತ್ಮಕ' ಎಂದು ಭಾವಿಸಬಹುದು. ಮುಂದೆ ಸಾಧಿತವಾಗಬೇಕಾದ ಒಂದು ನಿರ್ದಿಷ್ಟ ಕಾರ್ಯೋದ್ದೇಶಕ್ಕಾಗಿ ಶಸ್ತ್ರಸಜ್ಜಿತಕ್ರಿಯೆಯೊಂದಕ್ಕೆ ಅಡಿಪಾಯ ಹಾಕಲಾಗುತ್ತಿರುವುದನ್ನು ಈ ಹಂತದಲ್ಲಿಯೇ, ಇಲ್ಲಿಯೇ ಗುರ್ತಿಸಬಹುದು. ತೈಲವರ್ಣವನ್ನು ನಯವಾಗಿ, ಬ್ರಷ್‌ನ ಗುರುತು ಉಳಿದರೂ ಸಪೂರವಾಗಿ ಸವರಿದಂತಹ

ಚಿತ್ರಣಕ್ರಮವನ್ನು ಶಿವ ಆಗ ಅನುಸರಿಸುತ್ತಿದ್ದರು. ಆ ಹಂತದಲ್ಲಿ ಈ ಕಲಾಕೃತಿಗಳಲ್ಲಿ ಎರಡು ಬಗೆಯ ಪ್ರಕ್ರಿಯೆ ನಡೆಯುತ್ತಿತ್ತು. ವೀಕ್ಷಕ ಚಿತ್ರವನ್ನು ಹಾಗೂ ಚಿತ್ರದೊಳಗಿನ ಆಕಾರಗಳು ಆ ಜಗತ್ತಿನಿಂದ ನಮ್ಮನ್ನು ಅರ್ಥೈಸುತ್ತಿದ್ದ ರೀತಿಯೇ ಆ ಎರಡು ಬಗೆಯ ಗ್ರಹಣ ಕ್ರಮಗಳು.

ಮೊದಲನೆಯದು ಸಹಜಕ್ರಿಯೆ. ಆದರೆ ಎರಡನೆಯದರಲ್ಲಿ, ಸೃಜನಲೋಕದೊಳಗಿನ ವ್ಯಕ್ತಿಗಳು/ಆಕಾರಗಳು ನವೀನ ರೀತಿಯ ಬಿಡುಗಡೆಯನ್ನು ಬೇಡುತ್ತವೆ. ಸೃಜನಲೋಕವನ್ನು ಒಂದು ಪರಿಮಿತಿಯೆಂದು ಭಾವಿಸಿ ಅದನ್ನು ಮೀರುವ ತವಕವಿದೆ ಅವರಲ್ಲಿ. ಅವರನ್ನು ಚಿತ್ರಿಸಿರುವ 'ರೀತಿಯಲ್ಲಿಯೇ ಇಂತಹ ಆಸೆಯನ್ನು ಅವುಗಳೊಳಕ್ಕೆ ಸೇರ್ಪಡೆ ಮಾಡಿದಂತಾಗಿದೆ.

ಈ ಮೊದಲ ಹಂತದ ಕೃತಿಗಳನ್ನು ನೋಡುವಾಗ ಇವುಗಳಲ್ಲೊಂದು ಬಗೆಯ ಮಾರುವೇಷದ ಆಹ್ಲಾದಕರ ವಾತಾವರಣವು ಕಂಡುಬರುತ್ತದೆ. ಗಫರ್ ಸಣ್ಣ ಟೊಮಾಟೊ ಗುಡ್ಡೆಗಳನ್ನು ಮಾರುವಾಗ, ವೀರಸ್ವಾಮಿ ಮೇಸ್ತ್ರಿ ಕ್ಯಾಮೆರಕ್ಕೆ ಫೋಸು ಕೊಡುವಾಗ ಮತ್ತು ಮೈಲಾರಲಿಂಗ ಅರ್ಚಕರು ಗುಂಪಾಗಿರುವಾಗಲೂ ಈ ಮಾತು ನಿಜ. ಅಂದರೆ ಗಫರನ ದಾರಿದ್ರ, ವೀರಸ್ವಾಮಿ ತಡೆಹಿಡಿದಿರಬಹುದಾದ ತನ್ನ ಒಡಲಾಳದ ಗಾಥೆ ಮತ್ತು ಅರ್ಚಕರ ಭಯಭೀತಗೊಳಿಸುವ ಗಂಭೀರ ಮೌನಕ್ಕೆ ಸರಿಸಮನಾದ ತೈಲವರ್ಣದ ಚಿತ್ರಣ 'ಶೈಲಿ' ಈ ಕೃತಿ ಸರಣಿಗಳಲ್ಲಿ ಎದ್ದು ಕಾಣುತ್ತದೆ. ಈ ಕೃತಿಗಳೆಲ್ಲವೂ ಅಕ್ಷರಶಃ ನೈಜ ಮಾನವಾಕಾರದಷ್ಟೇ ದೊಡ್ಡವಿದ್ದು, (ಲೈಫ್- ಸೈಜ್) ಅವುಗಳದೇ ಫೋಟೋ ಅಥವ ಸೈಡ್‌ಗಳನ್ನು ನೋಡುವಾಗ ಇಡೀ ಚಿತ್ರ-ಚೌಕಟ್ಟು ಚಿಕ್ಕದಾಗಿ ಸಂಗ್ರಹಗೊಳ್ಳುತ್ತದೆ. ಅಂದರೆ ಅವುಗಳ ಮೊನಚು ಗುಣವು(ಶಾರ್ಪ್‌ನೆಸ್)ತೀವ್ರವಾಗಿ, ಚಿತ್ರಿತ ಶೈಲಿಯ ಆಹ್ಲಾದವನ್ನು ದ್ವಿಗುಣಗೊಳಿಸುತ್ತದೆ. ಬಹುಪಾಲು ಮಾರಾಟವಾಗಿರುವ ಶಿವಪ್ರಸಾದರ ಈ ಹಂತದ ಕೃತಿಗಳನ್ನು ಈಗ ವೀಕ್ಷಿಸಲು ಪಾರದರ್ಶಿಕೆ ಅಥವ ಫೋಟೋಗಳೇ ಮೂಲ ಆಧಾರವಾಗಿವೆ ಕೂಡ. ಈ ಆಹ್ಲಾದಕತೆ'ಯು ನಮ್ಮ ಗಮನವನ್ನು ಬೇರೊಂದು ಕಾರಣಕ್ಕಾಗಿ ಸೆಳೆದುಕೊಳ್ಳುತ್ತದೆ. ಮೊದಲ ಹಂತದ ಕೃತಿಗಳಲ್ಲಿ ಚಿತ್ರಿತಗೊಂಡ ವ್ಯಕ್ತಿಗಳು ಕರ್ನಾಟಕದ ಪಶ್ಚಿಮಭಾಗದ, ಶಿವಪ್ರಸಾದರು ಹುಟ್ಟಿಬೆಳೆದ ಹಾಸನ ಜಿಲ್ಲೆಯ ಸುತ್ತಮುತ್ತಲಿನವರು, ಸಮಕಾಲೀನ ಆಧುನಿಕ, ಆಧುನಿಕ-ಪೂರ್ವಕಾಲದ ಕರ್ನಾಟಕದ ಕಲಾ ಇತಿಹಾಸದಲ್ಲಿ ತಮ್ಮ ಸಹಚರರನ್ನೇ ತಮ್ಮ ಕೃತಿಗಳ ಕೇಂದ್ರವಾಗಿರಿಸಿಕೊಂಡಿದ್ದ ಶಿವಪ್ರಸಾದರ ಕೃತಿಗಳಂತಹ ಉದಾಹರಣೆ ಮತ್ತೊಂದಿಲ್ಲ. ಆದ್ದರಿಂದ ಈ ಹಂತದ ಕೃತಿಗಳಿಗೊಂದು ಆತ್ಮಚರಿತ್ರಾತ್ಮಕವಾದ ಗುಣವೂ ಅನಾಯಾಸವಾಗಿ ದೊರಕಿಬಿಡುತ್ತದೆ. ಅವರೊಂದಿಗೇ, ಅವರುಗಳ ಸಲುವಾಗಿ ಹುಟ್ಟಿಕೊಂಡ ಚಳುವಳಿಗಳಲ್ಲಿ ಶಿವಪ್ರಸಾದ್ ಸ್ವತಃ ಪಾಲ್ಗೊಂಡಿದ್ದರೂ ಸಹ ಆ ಜನರನ್ನು ಸೃಜನಾತ್ಮಕವಾಗಿ ಅನಾವರಣಗೊಳಿಸಲು ಸೂಕ್ತವಾದ ಮಾಧ್ಯಮವೊಂದರ ಅಗತ್ಯ ಈ ಕಲಾವಿದರಿಗಿತ್ತು. ಅದಕ್ಕೆ ಪರಿಹಾರವಾಗಿ ಅವರಿಗೆ ಆಗ ಲಭ್ಯವಿದ್ದುದು ಮುಂಬಯಿಯ ಸರ್. ಜೆ.ಜೆ.ಕಲಾಶಾಲೆಯಲ್ಲಿ ಅವರು ಕಲಿತಾಗಿನ ತೈಲ-ನೈಜಚಿತ್ರಣ ಶೈಲಿ.

ಆದರೆ ಮೇಲೆ ಸೂಚಿಸಲಾದ ಕೃತಿಗಳಲ್ಲಿನ ಆಹ್ಲಾದವು ರೂಪುಗೊಂಡಿದ್ದು ಕೇವಲ ತೈಲವರ್ಣದ ಚಿತ್ರಣದ ರೀತಿಯ ಕಲಿಕೆಯಿಂದ ಮಾತ್ರವಲ್ಲ. ಫೋಟೋಗ್ರಫಿಯು ತೈಲಚಿತ್ರಣ ಶೈಲಿಯ ಆಂತರಿಕ ಭಾಗವಾಗಿಯೇ ಅವರ ಈ ಹಂತದ ಕೃತಿಗಳಲ್ಲಿ ಹಾಸುಹೊಕ್ಕಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ತೈಲವರ್ಣ ಹಾಗೂ ಫೋಟೋ ಎರಡೂ, ಒಟ್ಟಾಗಿ ಯೂರೋಪಿನ 'ತಾರ್ಕಿಕ ಯುಗ'ದ ಪರಿಣಾಮವಾಗಿ ಮೂಡಿಬಂದಿದ್ದು, ಶಿವಪ್ರಸಾದರ ಕೃತಿಗಳಲ್ಲಿ ಅರ್ಥಪಲ್ಲಟ ಹೊಂದುತ್ತವೆ. ಏಕೆಂದರೆ ಶಿವಪ್ರಸಾದರು ತಮ್ಮ ಕೃತಿಗಳಲ್ಲಿ ಉದ್ದೇಶಿಸಿರುವ ಜಾತಿ, ವರ್ಗ ಸಂಘರ್ಷ ಹಾಗೂ ಅವುಗಳಿಗಾಗಿರಬಹುದಾದ ಅನ್ಯಾಯದ ವಿರುದ್ಧ ದನಿಯೆತ್ತಿದ ಗುಂಪಿನ ಭಾಗವಾಗಿದ್ದರು. ಅವೆರಡೂ ಜಂಟಿ ಮಾಧ್ಯಮವನ್ನು ಬಳಸಬೇಕಾದ ಸಂದರ್ಭದಲ್ಲಿ ಒಂದು ಬಗೆಯ ತೀವ್ರ "ವರ್ಣಸಂಕರ'ವೇ ಅವರ ಕೃತಿಗಳಲ್ಲಿ ಉಂಟಾದುದಿದೆ. ಅಂದರೆ ಜಾತಿ ವ್ಯವಸ್ಥೆಯ ಹಿನ್ನೆಲೆಯಲ್ಲಿದ್ದ ಸಂಸ್ಕೃತಿಗೇ ಅಪರಿಚಿತವಾದ ಈ ಮಾಧ್ಯಮಗಳನ್ನು ಇದರ ಒಳಗಿನವನೇ ಆದ ಕಲಾವಿದನೊಬ್ಬ ಅಂತರಂಗೀಕರಿಸಿಕೊಳ್ಳುವುದಲ್ಲದೆ, ಅದನ್ನೇ ಒಂದು ರೀತಿಯ 'ಸೃಜನಾತ್ಮಕ ಶಸ್ತ್ರ'ವನ್ನಾಗಿಸಿ ಬಳಸಿಕೊಳ್ಳುವ ಕ್ರಮವೊಂದು ಇಲ್ಲಿದೆ. ಈ ಸೃಜನ-ಅಸ್ತ್ರವನ್ನು ಶಿವಪ್ರಸಾದ್, ಎಪ್ಪತ್ತರ ದಶಕದಲ್ಲಿ ಬಳಸಿಕೊಳ್ಳತೊಡಗಿದ್ದು ಒಂದು ಸಮಾಜೋ-ರಾಜಕೀಯ ಪ್ರತಿಭಟನೆಯನ್ನು ಸಶಕ್ತಗೊಳಿಸುವ ಸಲುವಾಗಿ.

ಕೆ.ಟಿ. ಶಿವಪ್ರಸಾದ್/೭

ಭೌತಿಕವಾದ ಎಲ್ಲ ಪ್ರತಿಭಟನೆಗಳಿಗೂ ಶಕ್ತಿ ದೊರಕುವುದು ಅಮೂರ್ತ ನೆಲೆಗಳಿಂದ. ರಾಜಕೀಯ ಮೆರವಣಿಗೆ, ಹೋರಾಟ, ಓಡಾಟ, ಇತ್ಯಾದಿ ದೈಹಿಕ ಚಟುವಟಿಕೆಗಳು ಭೌತಿಕವಾದ ಸಂಘರ್ಷವಾದರೆ, ಸೃಜನಾತ್ಮಕ- ಪ್ರತಿಭಟನೆಗಳಿಗೆ ಅಂತಹ ಒಂದು 'ಬಹಿರ್ಮುಖತೆ' ಎಂಬುದು ಬೇಗನೆ ದೊರಕುವುದಿಲ್ಲ. ಜನರಲ್ ಡಯಾಸ್‌ನನ್ನು ಮೆಕ್ಸಿಕೋ ದೇಶದಲ್ಲಿ ಕೆಡವಬೇಕಾದಾಗ ಅಲ್ಲಿ ಡಯಗೊ ರಿವೇರ, ಸಿಕ್ವೆರಸ್ ಮುಂತಾದ ಕಲಾವಿದರು ಅತಿ ಮಾನವಾಕಾರದ ಕಲಾಕೃತಿಗಳನ್ನು ರಚಿಸಿದ್ದರು. ಭಾರತದ ಸ್ವಾತಂತ್ರ್ಯ ಚಳುವಳಿಯ ಅಂಗವಾದ, ಹರಿಪುರ ಕಾಂಗ್ರೆಸ್ ಅಧಿವೇಶನಕ್ಕೆ ನಂದಲಾಲ್ ಬೋಸ್ 'ಹರಿಪುರ ಪೋಸ್ಟರ್'ಗಳನ್ನು ರಚಿಸಿದ್ದರು. ಇವೆರಡೂ ಬಹಿರ್ಮುಖ ರಾಜಕೀಯಾತ್ಮಕ' ಚಿತ್ರಗಳು. ಇಂತಹ ಬಹಿರ್ಮುಖಿ ಸೃಜನ ಪ್ರತಿಭಟನೆಗೆ ಜೋರು ಧ್ವನಿಯಿರುತ್ತದೆ. ಆದರೆ ಇಂತಹ ಕೃತಿಗಳಿಗೆ ಸೃಜನ ಹಾಗೂ ರಾಜಕೀಯಾತ್ಮಕ ಮಾನದಂಡಗಳೆರಡರಲ್ಲೂ ಮೆಚ್ಚುಗೆ ಪಡೆಯುವ ತಾಕತ್ತು ಇರಲಾರದು. ಆದ್ದರಿಂದಲೇ ಮೇಲಿನೆಡರು ಉದಾಹರಣೆಗಳು ಕಲೆಯ ಸಮಾಜಶಾಸ್ತ್ರೀಯ ಮಾನದಂಡದಲ್ಲಿ ಸ್ವೀಕೃತವಾದಷ್ಟು ಸೌಂದರ್ಯಶಾಸ್ತ್ರೀಯ ಮಾಪಕದಲ್ಲಿ ಮಾನ್ಯವಾಗಿಲ್ಲ. ಶಿವಪ್ರಸಾದರ ಕೃತಿಗಳು ಈ ಮಿತಿಗಳನ್ನು ಮೀರಲು ಕಾರಣ ಅವರಿಗೆ ಕಲಾ ಇತಿಹಾಸದೊಳಗಿನ ಸೃಜನ-ರಾಜಕಾರಣದ ಬಗ್ಗೆ ಇರುವ ವಿಸ್ತಾರ ಅರಿವು.

ಒಂದರ್ಥದಲ್ಲಿ ಶಿವಪ್ರಸಾದರದ್ದು ಅಂತರ್ಮುಖಿ ರಾಜಕೀಯಾತ್ಮಕ ಕೃತಿಗಳು. ಇವುಗಳಲ್ಲಿ ಸೌಂದರ್ಯಾನುಭೂತಿಯ ಒಳಗಿನಿಂದಲೇ ಪ್ರತಿಭಟನೆಯ ಸ್ವರೂಪವು ಕಂಡುಬರುತ್ತದೆ. ಇಂತಹ ಕೃತಿಗಳ ಅಸ್ತಿತ್ವದ ವಿರುದ್ಧ-ರಾಜಕಾರಣದಲ್ಲಿ ತೊಡಗಿರುವ ಶತ್ರು ಪಕ್ಷದವರಿಗೆ ಸಾಕ್ಷಿ ಪುರಾವೆಗಳು ಸುಲಭವಾಗಿ ದಕ್ಕುವುದಿಲ್ಲ.*2* ಇಂತಲ್ಲಿ ವೀಕ್ಷಕನಿಗೆ ಬಂಡಾಯದ ಕೂಗಾಟ ಚೀರಾಟಗಳಿಲ್ಲದೆ, ಪಿಸುಮಾತಿನ, ಬೌದ್ಧಿಕ ಸವಾಲೊಂದು ಎದುರಾಗುತ್ತದೆ. ಒಂದು ನಿರ್ದಿಷ್ಟ ಸಮಾಜವಾದಿ ಉದ್ದೇಶಕ್ಕಾಗಿ ಶಿವಪ್ರಸಾದ್ ಧ್ವನಿಗೂಡಿಸಿದ್ದಾಗಲೂ, ಸಾಮೂಹಿಕ ಧ್ವನಿಗಿಂತ ಭಿನ್ನವಾದ ವೈಯಕ್ತಿಕ 'ದೃಶ್ಯಧ್ವನಿ'ಯೊಂದನ್ನು ತನಗಾಗಿಯೇ ರೂಪಿಸಿಕೊಂಡಿದ್ದು ಕರ್ನಾಟಕದ ದೃಶ್ಯಕಲಾ ಚರಿತ್ರೆಯ ಒಂದು ಅಪೂರ್ವ ಪ್ರಸಂಗ ಕೂಡಾ ಹೌದು.

ಇಂತಹ ಅಪೂರ್ವ 'ಸೃಜನಾತ್ಮಕ ರಾಜಕಾರಣ'ದ ಸಫಲತೆಗಾಗಿ ಕಲಾವಿದ ಹೊರಗಿನವರ ಅನುಮತಿಗಾಗಿ ಕಾಯಬೇಕಾದ ಅಗತ್ಯತೆಯೂ ಇಲ್ಲ. ಮತ್ತು ಇಂತಹ ಫಂಕ್ಷನಲ್ ಅಲ್ಲದ, ಫಾರ್ಮಲ್ ಆದ ಸೃಜನಕ್ರಿಯೆಗೆ ಆ ಕ್ರಿಯೆಯೇ ಪ್ರತಿಫಲವೂ ಸಹ ಆಗಿರುತ್ತದೆ. ತದ್ವಿರುದ್ಧವಾಗಿ, ಶಿವಪ್ರಸಾದ್ ಕೃತಿಗಳಲ್ಲಿ ಹೆಚ್ಚು ಭೌತಿಕವಾದ ಸಾಮಾಜಿಕ ಪ್ರತಿಭಟನೆಯ ಫಲಿತಾಂಶ ಹೊಸ ಹೊಸ ರೂಪಗಳಲ್ಲಿ, ಕೊನೆ ಮೊದಲಿಲ್ಲದಂತೆ ನಿರಂತರವಾಗಿ ತಲೆ ಎತ್ತುವಂತಹುದು.

ಇಂತಹ ಅಪೂರ್ವ 'ವರ್ಣಸಂಕರ'ವನ್ನು ಶಿವಪ್ರಸಾದ್ ಹುಟ್ಟುಹಾಕಿದಾಗ ಅವರಿಗೆ ಮುಖ್ಯ ಶತೃವಾಗಿ ಗೋಚರಿಸಿದ್ದು, ಪಂಡಿತ ಪಾಮರರಿಬ್ಬರಲ್ಲಿ ಒಂದು ತೆರನಾದ ಅವಜ್ಞೆಯನ್ನು ಹುಟ್ಟುಹಾಕಿದಂತಹ 'ನೈಜಚಿತ್ರಣ' ಕ್ರಮ. ವಿವರಿಸಿ ಹೇಳುವುದಾದರೆ, ಈ ಮುನ್ನವೇ ಹೇಳಿದಂತೆ 'ಸೋಷಿಯಲಿಸ್ಟ್ ರಿಯಲಿಸಂ' ಎಂಬುದು ಅವರಿಗೆ ನೆಪಮಾತ್ರವಾಗಿತ್ತು. ಆದ್ದರಿಂದ ಎಷ್ಟು ನಯವಾಗಿ ವರ್ಣಮೇಳವನ್ನು ಹೊಂದಿಸಿದ್ದರೂ ಸಹ, ಮೊದಲನೆಯ ಹಂತದ ಕ್ಯಾನ್ವಾಸುಗಳಲ್ಲಿ, ಭೌತಿಕ ಪ್ರಪಂಚದ ಎಲ್ಲ ವಸ್ತುಗಳೂ ಏಕಪ್ರಕಾರವಾಗಿ ನೈಜತೆಯನ್ನು ಪಡೆದುಕೊಂಡಿರಲಿಲ್ಲ.

ನಾನು ಹೇಳುತ್ತಿರುವುದನ್ನು ಅರ್ಥ ಮಾಡಿಕೊಳ್ಳಲು ಒಂದು ಉದಾಹರಣೆಯನ್ನು ಪರಿಗಣಿಸಿ ನೋಡಿ. "ಮಾರಮ್ಮ ಮತ್ತು ರಾಮಾನಾಯ್ಕ" ಕೃತಿಯಲ್ಲಿ ರಾಮನಾಯ್ಕನ ಅಂಗಿ ಮತ್ತು ಮಾರಮ್ಮನ ಕೈಗಳಲ್ಲಿರುವ ಶಸ್ತ್ರಗಳಿಗಿಂತಲೂ ಮಾರಮ್ಮನ ಆಕಾರವು ಹೆಚ್ಚು ನೈಜವೆನಿಸುತ್ತದೆ. ಒಂದು ಚಿತ್ರದ ಒಳಗೇ ಕೆಲವು 'ಪ್ರದೇಶಗಳೇ' ಏಕೆ ಇನ್ನಿತರ ಪ್ರದೇಶಗಳಿಗಿಂತಲೂ ಹೆಚ್ಚು ನೈಜ ಎಂಬುದನ್ನಿಲ್ಲಿ ಚರ್ಚಿಸಬೇಕಾಗುತ್ತದೆ. ಹಳದಿ ಬಣ್ಣ ಬಳೆಯಲಾಗಿರುವ ಮರದ ಮಾರಮ್ಮನ ಛಾಯಾಚಿತ್ರವನ್ನು ಆಧರಿಸಿದ ಈ ಚಿತ್ರದಲ್ಲಿ ಹಲವು ತೆರನಾದ, ಹಲವು ಹಂತಗಳ ನೈಜತೆಗಳಿವೆ. ರಾಮನ ಬಟ್ಟೆಗಳಿಗೆ ಹೋಲಿಸಿದರೆ ಆತನ ಮುಖದ ನೈಜತೆ ತೀವ್ರವಾದುದು. ತ್ರಿಶೂಲ ಮುಂತಾದ ಶಸ್ತ್ರಗಳ ಚಿತ್ರಣಕ್ಕೆ ಹೋಲಿಸಿದರೆ ಮಾರಮ್ಮಳ ಮರದ ಮುಖದ ಮೇಲಿನ ಹಳದಿ ಬಣ್ಣವು ಬಿರುಕುಬಿಟ್ಟಿರುವುದರ ಚಿತ್ರಣವು ತೀವ್ರ ಭ್ರಮಾತ್ಮಕ ನೈಜತೆಯನ್ನು ಹೊಂದಿದೆ.

ಈ ಉದಾಹರಣೆಯ ಮೂಲಕ ನಾನು ಹೇಳಲು ಪ್ರಯತ್ನಿಸುತ್ತಿರುವುದೇನೆಂದರೆ ಶಿವಪ್ರಸಾದರ ಕೃತಿಗಳಲ್ಲಿ ನೈಜತೆಯನ್ನು ನಿರಾಕರಿಸುವ ಹುನ್ನಾರ ಸಾಧ್ಯವಾಗಿದೆ. ಹಾಗೂ ಅದನ್ನು ರೂಢಿಗತ ಅರ್ಥದಲ್ಲಿ ನೈಜಕಲೆಯ ಪರಿಕರಗಳನ್ನು ಉಪಯೋಗಿಸಿಕೊಂಡೇ ಹಾಗೆ ಮಾಡುತ್ತಿದ್ದಾರೆಂಬುದೊಂದು ವಿಶೇಷ. ಇದು ಈ ಕಲಾವಿದನ ಸ್ವಯಂ-ಲೇವಡಿಯ ಸಾಮರ್ಥ್ಯವನ್ನು ಸೂಚಿಸುತ್ತದೆ. ಈ ಶತಮಾನದಲ್ಲಿ ಭಾರತೀಯ ಕಲಾ ಇತಿಹಾಸದಲ್ಲಿ ನೈಜತೆಯ ನೆಲೆಯಲ್ಲಿ ಕೃತಿ ರಚಿಸಿದವರೆಲ್ಲರೂ, ನೈಜ ಸೃಜನತಂತ್ರಗಳನ್ನು (ಸರ್ ಜೆ.ಜೆ ಕಲಾಶಾಲೆಗಳಂತಹ ಕಡೆ ಕಲಿತವರು) ಅನುಮಾನಾತೀತವಾಗಿ, ನೇರವಾಗಿ ಬಳಸಿಕೊಂಡವರೇ. ತಾವು ಬಳಸುತ್ತಿರುವ ಸೃಜನಶೀಲ ನೈಜತೆಯ ತಂತ್ರದ ಬಗ್ಗೆ ಸ್ವಲ್ಪವೇ ಅನುಮಾನ ಬಂದರೂ ಅದನ್ನು ಸಾರಾಸಗಟಾಗಿ ನಿರಾಕರಿಸಿ, ಸಂಪೂರ್ಣವಾಗಿ ಬೇರೊಂದು ಸಂಸ್ಕೃತಿಯಿಂದ ರೂಪುಗೊಂಡ ದೃಶ್ಯ ಶೈಲಿಗಳಲ್ಲಿ ಕಲಾಕೃತಿಗಳನ್ನು ರಚಿಸಿದವರ ಇಡೀ ತಂಡವೇ ನಮ್ಮಲ್ಲಿದೆ. ಜೆಮಿನಿರಾಯ್, ಕೆ.ಸಿ.ಎಸ್. ಫಣಿಕ್ಕರ್ ಮುಂತಾದವರ ಕಲಾವೃತ್ತಿ ಜೀವನದ ಆರಂಭಿಕ ದಿನಗಳ ಅಕಾಡೆಮಿಕ್ ನೈಜ ಚಿತ್ರಗಳೊಂದಿಗೆ ಅವರದೇ ನಂತರ ಕಾಲದ ಕೃತಿಗಳನ್ನು ಹೋಲಿಸಿದಾಗ ಈ ನನ್ನ ಹೇಳಿಕೆ ಸ್ಪಷ್ಟವಾಗುತ್ತದೆ. ಭಾರತೀಯ ಕಲಾ ಇತಿಹಾಸದಲ್ಲಿ ಬೆಂಗಾಲ ಶಾಲೆಯ ಶೈಲಿ, ಚೋಳಮಂಡಲ ಕಲಾಶೈಲಿ ಎಂದು ಯಾವುದನ್ನು ನಾವು 'ಗುರ್ತಿಸುತ್ತೇವೆಯೋ ಅದು ರವಿವರ್ಮನ ಕೃತಿಯ ಮೂಲಕ 'ನೈಜ'ವೆನಿಸಿಕೊಳ್ಳುವ ಶೈಲಿಯನ್ನು ತಮ್ಮ ಶತ್ರು ಎಂದೇ ಭಾವಿಸಿದ್ದವು. ಇಂತಲ್ಲಿ ಕ್ರಮಬದ್ಧವಾಗಿ ಈ ಎರಡೂ ಶಾಲೆಗಳೊಂದಿಗೂ ಗುರ್ತಿಸಿಕೊಳ್ಳುವ ಜೆಮಿನಿರಾಯ್ ಹಾಗೂ ಫಣಿಕ್ಕರ್‌ರವರು ನೈಜದಿಂದ ನೈಜವಿರೋಧಿ ಶೈಲಿಗೆ ತಮ್ಮ ಅಭಿವ್ಯಕ್ತಿಯನ್ನು ಬದಲಾಯಿಸಿದರು. ಇವರದು ಯಾವುದೇ ಅಪರಾಧಿ ಭಾವವಿಲ್ಲದ ಪ್ರಜ್ಞಾಪೂರ್ವಕ ಪಕ್ಷಾಂತರ. ಈ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ಬೇರೆಯೇ ಒಂದು ಸುದೀರ್ಘ ವಿಶ್ಲೇಷಣೆಯ ಅವಶ್ಯಕತೆಯಿದೆ. ಆದರೆ ಈ ಸಂದರ್ಭದಲ್ಲಿ ಮುಖ್ಯವಾಗುವುದೇನೆಂದರೆ ತೋರಿಕೆಗೆ ನೈಜವೆನ್ನಿಸುವ ಶೈಲಿಯಲ್ಲಿ ಕೃತಿ ರಚಿಸುತ್ತಿರುವ ಕಲಾವಿದನೊಬ್ಬನಿಗೆ ಳಿಗೆ ಅದರ ಶಕ್ತಿಯ ಕುರಿತು ಅನುಮಾನ ಉಂಟಾದಾಗ, ಅದೇ ಶೈಲಿಯನ್ನು ಸಂಸ್ಕರಿಸಿದ ಉದಾಹರಣೆ ಭಾರತೀಯ ಕಲಾ ಇತಿಹಾಸದಲ್ಲೇ ಬೇರೊಂದು ಇದ್ದಂತಿಲ್ಲ. ಶಿವಪ್ರಸಾದ್ ತಮ್ಮ ಇಲ್ಲಿಯವರೆಗಿನ ಸೃಜನಶೀಲ ದಶಕಗಳಲ್ಲಿ ಸಾಧಿಸಿಕೊಂಡಿರುವುದು ಇದನ್ನೇ.

೪

ಚಿತ್ರಾಂಶಗಳ ಭಾಷೆಯಲ್ಲಿ ಹೇಳುವುದಾದರೆ, ಶಿವಪ್ರಸಾದರ ಮೊದಲ ಹಂತದ ಕೃತಿಗಳಲ್ಲಿ ನೈಜತೆ ಎಂಬುದು ಕ್ಯಾನ್ವಾಸಿನ 'ಮೇಲೆ' ಸಮಾನ ತೀವ್ರತೆಯಲ್ಲಿ ಹರಡಿದ್ದಾಗಿರಲಿಲ್ಲ. ಜಲಮೂಲವನ್ನು ಶೋಧಿಸುವಾತನ 'Y' ಆಕಾರದ ಕೊಂಬೆಯು ನಿರ್ದಿಷ್ಟ ಸ್ಥಳದಲ್ಲಿ, ಜಲವಿರುವ ಕಡೆ, ಗುರುತ್ವದ ತೀವ್ರತೆಯಿಂದಾಗಿ ಕೆಳಕ್ಕೆಳೆಯಲ್ಪಟ್ಟಂತಿರುತ್ತದೆ, ಈ ಕ್ಯಾನ್ವಾಸುಗಳಲ್ಲಿನ ನೈಜತೆಯ ಸ್ವರೂಪ. ಮೈಲಾರಲಿಂಗ ಸಂತನ ಹೊದಿಕೆಯ ಮೇಲೆ, ಮಾರಿದೇವಿಯ ಮುಖದ ಮೇಲೆ 'ರಂಗಪ್ಪ ಹೊದ್ದಿಸಿರುವ ಸೀರೆಯ ಮೇಲೆ, 'ತುಕ್ರ'ನು ಬಚ್ಚಿಟ್ಟುಕೊಂಡಿರುವ ಕಲ್ಪನೆ ಕೆತ್ತನೆ-ಇವೇ ಮುಂತಾದವು ಅಂತಹ ತೀವ್ರ 'ನೈಜ ಕೇಂದ್ರಗಳು'. ಆ ಕಾಲದ ಕೆಲವು ಕ್ಯಾನ್ವಾಸುಗಳ ಮೇಲೆ

ಇಂತಹ ಅತಿ-ನೈಜ ಕೇಂದ್ರಗಳು ಒಂದಕ್ಕಿಂತ ಹೆಚ್ಚಿದ್ದ ಉದಾಹರಣೆಗಳು ಇವೆ. ರಾಮನಾಯ್ಕನ ಮುಖವು ಮಾರಮ್ಮಳ ಮುಖದಷ್ಟೇ ತೀವ್ರವಾದುದು. ಮೊದಲ ಹಂತದ ಕ್ಯಾನ್ವಾಸುಗಳನ್ನು ಅನುಭವಿಸುವಾಗ ಕಣ್ಣಿನ ಗಮನವನ್ನು ಮೊದಲಿಗೆ ಈ ಅತಿ-ನೈಜ ಕೇಂದ್ರ'ಗಳು ಸ್ವಾಧೀನಪಡಿಸಿಕೊಂಡು ಬಿಡುತ್ತವೆ. ಒಂದರ್ಥದಲ್ಲಿ ಕ್ಯಾನ್ವಾಸಿನಾದ್ಯಂತ ಇರುವ ಭೌತ-ಜಗತ್ತನ್ನು ನೆನಪಿಸುವ ಎಲ್ಲ ವಿವರಗಳಿಗೂ ಈ ಕೇಂದ್ರವೇ ಮುಖ್ಯ ನಾಯಕನಿದ್ದಂತೆ, ಅಂದರೆ ಆ ಕ್ಯಾನ್ವಾಸ್ ಸರಣಿಯಲ್ಲಿ ಕಣ್ಣಿನ ದೃಷ್ಟಿ 'ವಿಕೇಂದ್ರೀಕರಣ'ವನ್ನು ಒಪ್ಪುವುದಿಲ್ಲ.

ದೃಷ್ಟಿ ಹಾಗೂ ದೃಶ್ಯಗ್ರಹಿಕೆಯನ್ನು ಕುರಿತು ಮನಃಶಾಸ್ತ್ರೀಯ ನೆಲೆಯಿಂದ ಬರೆದ ಪ್ರಮುಖ ಕಲಾ ಇತಿಹಾಸಜ್ಞರೆಲ್ಲರೂ (ಇ.ಎಚ್. ಗಾಂಬ್ರಿಲ್, ರುಡೊಲ್ಫ್, ಆ ಹಿಮ್ ಮುಂತಾದವರು) ಸಫಲ ಕಲಾಕೃತಿಗಳಲ್ಲಿ ಇಂತಹ ಕೇಂದ್ರಬಿಂದುಗಳ ಮಹತ್ವವನ್ನು ಕುರಿತು ಚರ್ಚಿಸಿದ್ದಾರೆ. ಶಿವಪ್ರಸಾದರ ಕೃತಿಗಳಲ್ಲಿನ ಈ ಕೇಂದ್ರಗಳಿಗೂ, ಅವರು ಕ್ಯಾಮೆರವನ್ನು ಕೇಂದ್ರೀಕರಿಸಿ ಸೆರೆಹಿಡಿದ ಮನುಷ್ಯರು ಪ್ರಜ್ಞಾಪೂರ್ವಕವಾಗಿ ಪ್ರಕಟಗೊಳ್ಳುವ ರೀತಿಯ ನಡುವೆ ಒಂದು ಅವಿನಾಭಾವ ಸಂಬಂಧವಿದೆ. ಅದನ್ನು ಇನ್ನೊಂದು ರೀತಿಯಲ್ಲಿ ಸ್ಪಷ್ಟಿಕರಿಸಬಹುದು.

ಶಿವಪ್ರಸಾದರ ಮೊದಲ ಹಂತದ ಕೃತಿಗಳಲ್ಲಿ ಎರಡು ಬಗೆಯ ವ್ಯಾಪಾರವು ವೀಕ್ಷಕ ಮತ್ತು



ವೀಕ್ಷಿತ (ಪೋಸ್ಟ್ ಮಾಡರ್ನ್ ವೀಕ್ಷಣಾಕ್ರಮವು ಇದನ್ನು 'ಸಿಗ್ನಿಫೈಯರ್' 'ಸಿಗಿಪೈಡ್' ಎಂದು ಗುರ್ತಿಸುತ್ತದೆ) ಆಕಾರಗಳ ನಡುವೆ ನಡೆಯುತ್ತದೆ. ಇದನ್ನೇ ನಾನು ಈ ಮುಂಚೆ 'ವೀಕ್ಷಕ ಚಿತ್ರವನ್ನು ಹಾಗೂ ಚಿತ್ರದೊಳಗಿನ ಆಕಾರಗಳು ಈ ಜಗತ್ತಿನ ನಮ್ಮನ್ನು ಅರ್ಥೈಸುತ್ತಿದ್ದ ರೀತಿಯ ಎರಡು ಭಿನ್ನ ಗ್ರಹಣಕ್ರಮಗಳು' ಎಂದು ವಿಂಗಡಿಸಿದ್ದೇನೆ. ಈ ಮುಂಚಿನ ಏಳು ಪ್ಯಾರಾಗಳಲ್ಲಿನ ವೀಕ್ಷಣೆಯ ವಿವರವು ವೀಕ್ಷಕನ ನಿಟ್ಟಿನಿಂದ ಮೂಡಿ ಬಂದಂತಹುದು. ಏಕೆಂದರೆ ಶಿವಪ್ರಸಾದ್ ಕಲಾವಿದರಾಗಿ ರೂಪುಗೊಂಡ ಸಂದರ್ಭದಲ್ಲಿ, 'ರೀಡರ್-ಓರಿಯಂಟೆಡ್' (ಇದನ್ನು 'ಪ್ರೇಕ್ಷಕಾಪೇಕ್ಷಣೆ' ಎಂದು ಓದಿಕೊಳ್ಳಿ) ಥಿಯರಿಯ ಅಪೂರ್ವ ಬಳಕೆಯಾದುದಿದೆ. ಸರಳಗೊಳಿಸಿ ಹೇಳುವುದಾದರೆ, ಶಿವಪ್ರಸಾದರ ಕೃತಿರಚನೆ ಹಾಗೂ ಅವರ ಜನಪರ ಚಳುವಳಿಗಳಲ್ಲಿ ಭಾಗವಹಿಸುವಿಕೆ – ಈ ಎರಡೂ ಬಗೆಯ ಸಾಮಾಜಿಕ ತೊಡಗಿಸುವಿಕೆಯಲ್ಲಿ ಅವರ ಸುತ್ತಲಿನ ಜನಸಮೂಹದ ಪ್ರಕ್ರಿಯೆ ಮುಖ್ಯವಾದುದು, ಹಾಗೂ ವೈವಿಧ್ಯಮಯವಾದುದು. (ಸೃಜನಾತ್ಮಕ ಹಾಗೂ ರಾಜಕೀಯ ನಿಲುವುಗಳು ಎಂದು ಇವುಗಳನ್ನು ವಿಂಗಡಿಸಬಹುದು.) 'ಜನಪರ' ನಿಲುವನ್ನು ಇಂದು ಕನ್ನಡದ ವಿಮರ್ಶಾ ಸಾಹಿತ್ಯವು 'ಮಾರ್ಕ್ಸಿಸ್ಟ್' ನಿಲುವು ಎಂದು ಸರಳೀಕರಿಸಿ ಅಣಕಿಸುವುದು ರೂಢಿಯಾಗಿಬಿಟ್ಟಿದೆ.

'ಸಮಾಜಕ್ಕಾಗಿ ಕಲೆ' ಎಂಬುದನ್ನು ಮುಗ್ಧವಾಗಿ ವ್ಯಾಖ್ಯಾನಿಸಿ, 'ಅದು ಅಸಾಧ್ಯ' ಎಂಬ ಒಂದು ಬಲವಾದ ಅಲಿಖಿತ ಒಪ್ಪಂದವು ಕನ್ನಡ ದೃಶ್ಯಕಲಾ ವಿಮರ್ಶಕರಲ್ಲಿ ರೂಪುಗೊಂಡುಬಿಟ್ಟಿರುವ ಮತ್ತೊಂದು ನಂಬಿಕೆ. ವಿಮರ್ಶಕ ವರ್ಗದಲ್ಲಿ ಸ್ವಲ್ಪ ಜಾಣರೆನಿಸಿಕೊಂಡವರು, "ಫೋಟೋಗ್ರಫಿ ಇರುವಾಗ ನೈಜ ಕಲೆಯ ಅವಶ್ಯಕತೆಯೇನು?" ಎಂಬಲ್ಲಿಗೇ ತಮ್ಮ ವಿಶ್ಲೇಷಣಾ ಶಕ್ತಿಯನ್ನು ತೆಳುಗೊಳಿಸಿಬಿಟ್ಟಿದ್ದಾರೆ. ವಾಲ್ಟರ್ ಬೆಂಜಮಿನ್‌ನ ಪ್ರಸಿದ್ಧ ಲೇಖನದಲ್ಲಿ ಸೂಚಿಸಿರುವ ಕಲಾಕೃತಿಗಳ 'ಪ್ರಭೆ' (aura)ಯ ಮಹತ್ವವನ್ನು ಕಲ್ಪಿಸಿಕೊಳ್ಳಲೂ ಆಗದ ಹವ್ಯಾಸಿ ವಿಮರ್ಶಕ ಗುಣವಿದು. ಆದ್ದರಿಂದ ಶಿವಪ್ರಸಾದರ ಒಟ್ಟಾರೆ ಕೃತಿಸಮೂಹವು ಈ ಬಗೆಯ ಅನೈತಿಕ ಆರೋಪಗಳಿಗೊಂದು ಗಂಭೀರ ಪ್ರತಿರೋಧ ಒಡ್ಡಿದಂತಾಗುತ್ತದೆ.

ಸಂಗ್ರಹಿಸಿ ಹೇಳುವುದಾದರೆ ಈ ಕೃತಿಗಳ ಆಸ್ವಾದನೆಯಲ್ಲಿ ವೀಕ್ಷಕನ ಪಾತ್ರವು ವಿಶೇಷ ಅರ್ಥವನ್ನು ಪಡೆದುಕೊಳ್ಳುತ್ತದೆ. ಸಿನೆಮ ಮತ್ತು ನಾಟಕವನ್ನು ಹೊರತುಪಡಿಸಿದ ದೃಶ್ಯಕಲಾ ಪ್ರಕಾರದಲ್ಲಿ ವೀಕ್ಷಕನನ್ನು ಕಲಾವಿದ ತನ್ನ ಅಭಿವ್ಯಕ್ತಿಯ ಗಂಭೀರ ವಲಯದೊಳಗೆ ಬಿಟ್ಟುಕೊಳ್ಳುವುದೇ ಇಲ್ಲ ಎಂಬುದು ಒಂದು ಮುಖ್ಯ ಆರೋಪ. ಶಿವಪ್ರಸಾದರ ಸುತ್ತಲಿನ ಕಲಾ ಸಂದರ್ಭದಲ್ಲಿ ಇಂತಹ ನಿರಾಕರಣೆಯು ಒಂದು ನಂಬಿಕೆ ಹಾಗೂ ಅಲಿಖಿತ ನಿಯಮದಿಂದ ಮೂಡಿಬಂದುದು. ಆದ್ದರಿಂದಲೇ ಶಿವಪ್ರಸಾದ್ 'ಸ್ವಜನಪರ' (ದೇಸಿ) ಕಲಾವಿದ ಸಮೂಹದ ಅತ್ಯುತ್ಕೃಷ್ಟ ಮಾದರಿ.*3*

ಮೊದಲ ಹಂತದ ಕೃತಿಗಳನ್ನು ನಾವು ವೀಕ್ಷಿಸುವಾಗ ಆ ಕೃತಿಗಳಲ್ಲಿ ಛಾಯಾಚಿತ್ರಣವು ವಹಿಸಿದ ಪಾತ್ರವನ್ನು ಅರ್ಥಮಾಡಿಕೊಂಡರೆ, ಕೃತಿಯೊಳಗಿನ ವ್ಯಕ್ತಿಗಳು ವೀಕ್ಷಕನೆಡೆಗೆ ಒಂದು ತೀಕ್ಷ್ಣ ಮಾಂತ್ರಿಕ ದೃಷ್ಟಿಯಿಂದ ಪ್ರತ್ಯುತ್ತರ ನೀಡುತ್ತಿರುವುದು ಕಂಡುಬರುತ್ತದೆ. ನಾವು ಅವರನ್ನು ನೋಡುವಾಗ, ಅವರ ಇರುವಿಕೆಯು ನಮ್ಮನ್ನು ಅತಂತ್ರರನ್ನಾಗಿಸುತ್ತದೆ. ಅದಕ್ಕೆ ಕಾರಣ, ಅವರು ನಮ್ಮನ್ನು 'ದೃಷ್ಟಿ'ಸುವ 'ದ್ವಿದಳ ಮಾದರಿ', ಸರಳವಾಗಿ ಹೇಳಬಹುದಾದರೆ ಅವರ ಕೃತಿಗಳೊಳಗಿನ ರಾಮನಾಯ್ಕ, ಸಾಕಮ್ಮ, ವೀರಸ್ವಾಮಿ ಮೇಸ್ತ್ರಿ ತುಕ್ರ, ರಂಗಪ್ಪ, ರಾಜಮ್ಮ, ನಸೀಮ್ ಇತ್ಯಾದಿ ವ್ಯಕ್ತಿಗಳೆಲ್ಲ ಕ್ಯಾನ್ವಾಸಿನ ಒಳಗಿನಿಂದ ನಮ್ಮನ್ನು ದಿಟ್ಟಿಸಿ ನೋಡುವ ರೀತಿಯು, ರಸ್ತೆ ಬದಿಯಲ್ಲಿ ಸಹಜವಾಗಿ ಜನರು ನಮ್ಮನ್ನು ನೋಡಿದಂತಿಲ್ಲ. ಅವರು ನಮ್ಮನ್ನು ತಮ್ಮವನೆಂದು ಭಾವಿಸಿಯೇ ಸಹಜವಾಗಿರಲು ಪ್ರಯತ್ನಿಸಿದರೂ, ನಮ್ಮ ಅವರ ನಡುವೆ ಯಾವುದೋ ಕಾಣದ ಶಕ್ತಿಯೊಂದು ಅವರನ್ನು ಬೆಚ್ಚಿಬೀಳಿಸುತ್ತಿರುತ್ತದೆ. ರೂಪಕದ ಭಾಷೆಯಲ್ಲಿ ಹೇಳುವುದಾದರೆ ಇದೊಂದು 'ಸೃಜನಭ್ರಮೆ'' (ಕ್ರಿಯೇಟಿವ್ ಹ್ಯಾಲುಸಿನೇಷನ್), ಕನ್ನಡದ ಜನಪ್ರಿಯ ಸಾಹಿತ್ಯದಲ್ಲಿ ಬರುವ ಅಮೂರ್ತ ಪ್ರೇತಗಳನ್ನು ಕಂಡಾಗಿನ ಅವಸ್ಥೆಗಳನ್ನಷ್ಟೇ ಈ ಚಿತ್ರಿತ ಮಾನವಾಕಾರಗಳ ದೃಷ್ಟಿಗೆ ಹೋಲಿಸಿ ಹೇಳಬಹುದು. ಏಕೆಂದರೆ ಕನ್ನಡದ ಮಟ್ಟಿಗೆ ಶಿಷ್ಟ ದೃಶ್ಯ ವಿಮರ್ಶೆಯಲ್ಲಿ ಅವರ ಈ ಚಿತ್ರಿತ ವ್ಯಕ್ತಿಗಳ ಮೆಲಾಂಕಲಿಕ್ ನೋಟಕ್ಕೆ ಸೂಕ್ತ ಪದವೆಂಬುದೇ ಇಲ್ಲ!

ಚಿತ್ರದೊಳಗಿನ ಮೆಲಾಂಕಲಿಕ್-ರೀತಿಯ ಅವರ ನೋಟದಲ್ಲಿ ಹೊರಗಿನ ಪ್ರಪಂಚದೆಡೆಗೆ ಒಂದು ಭೀತಿ ತುಂಬಿದೆ. ಅತ್ಯಂತ ಸಮೀಪದ ಹೋಲಿಕೆಯೊಂದನ್ನು ಕೊಡುವುದಾದರೆ, ಕ್ಯಾಮೆರಾವನ್ನು, ಅದೇನೆಂದು ತಿಳಿಯದಿರುವಾಗ, ಅದು ಊರಿನ ಬೀದಿಗೆ, ತನ್ನೆಡೆಗೆ ಮುಖ ಮಾಡಿ ನಿಂತಾಗ ಆಗುವ ಸಾಂಸ್ಕೃತಿಕ/ವೈಯಕ್ತಿಕ ಪಲ್ಲಟದ ಶಾಕ್ ಅವರ ನೋಟದಲ್ಲಿ ತುಂಬಿದೆ. ಮೇಲ್ವರ್ಗದ, ರಾಜಮಹಾರಾಜರ ಛಾಯಾಚಿತ್ರಗಳು ಮತ್ತು ಭಾವಚಿತ್ರಗಳಿಗೆ ವ್ಯತಿರಿಕ್ತವಾದ ಗುಣವಿದೆ ಇಲ್ಲಿ. ಅವರಾದರೋ ಭಾವಚಿತ್ರಗಳಲ್ಲಿ ತಮ್ಮ ತಮ್ಮ ಸಾಮಾಜಿಕ ಅಂತಸ್ತು ವರ್ಚಸ್ಸು ಹಾಗೂ ಸಂಪತ್ತನ್ನು ಪ್ರದರ್ಶನಕ್ಕಿಟ್ಟು ಬಿಟ್ಟಿರುತ್ತಾರೆ. 'ತೈಲವರ್ಣದ ಚೌಕಟ್ಟು' ಹೊರಗಿನ ಪ್ರಪಂಚಕ್ಕೆ ತೆರದ ಬಾಗಿಲು ಮತ್ತು ಅದರ ಮುಖೇನ ಎಲ್ಲರೂ ತಮ್ಮನ್ನು ನೋಡಿದಂತಾಗಲಿ ಎಂಬ ಅರ್ಥ ಹುದುಗಿರುತ್ತದೆ, ಅಂತಹ ಉದಾಹರಣೆಗಳಲ್ಲಿ. ಆದ್ದರಿಂದಲೇ ಅಂತಹ ಉದಾಹರಣೆಗಳಲ್ಲಿ ವರ್ಚಸ್ಸಿನ ಜನರ 'ಅಂತರಂಗ'ದ ನೋಟವೆಂಬುದು ಯಾವ ಭಾರತೀಯ ತೈಲ ಭಾವಚಿತ್ರಗಳಲ್ಲಿಯೂ ಸಾಮಾನ್ಯವಾಗಿ ಕಂಡುಬರುವುದಿಲ್ಲ. ಗೊತ್ತಿರುವ ಮಾಧ್ಯಮದ ಮುಖಾಂತರ ಗೊತ್ತಿಲ್ಲದ (ಅಂತರಂಗದ) ಮುಖವನ್ನು ತೋರಿಸಲಿಚ್ಛಿಸದ ದಾಖಲಾತಿ ಕೃತಿಗಳೇ ನಮ್ಮಲ್ಲಿ ಹೆಚ್ಚು. ಇಂತಹ ಸಾಮಾಜಿಕ ನಿಲುವೇ ತೈಲಮಾಧ್ಯಮದ ಮುಖಾಂತರ ಅಕಾಡೆಮಿಕ್ ಶಾಲೆಯ ವಿಕ್ಟೋರಿಯನ್ ಸೃಜನಶೈಲಿಯ ಅವಸಾನಕ್ಕೆ ಕಾರಣವಾದುದು. ಈ ಮಾದರಿಯ ಒಳಗಿನಿಂದಲೇ, ಜೆ.ಜೆ. ಕಲಾಶಾಲೆಯ ಪರಿಸರದಲ್ಲಿ (ಶಿವಪ್ರಸಾದ್ ೧೯೭೩ರಲ್ಲಿ ಕಲೆಯಲ್ಲಿ ಪದವೀಧರರಾದರು) ರೂಪುಗೊಂಡ ಶಿವಪ್ರಸಾದ್, ಇಂತಹ ಮೇಲ್ವರ್ಗದ ದೌರ್ಬಲ್ಯಾತ್ಮಕ ನಿಲುವಿನಿಂದ ಬಚಾವಾಗಲು ತಮ್ಮ ಬಣ್ಣದ ಪ್ಯಾಲೆಟ್ಟಿನ ಮೇಲೆ ತೈಲವರ್ಣ ಹಾಗೂ ಛಾಯಾಗ್ರಹಣ ತಂತ್ರವನ್ನು ವಿಶೇಷವಾಗಿ ಸಮೀಕರಿಸಿದ್ದು,

ಆದ್ದರಿಂದ ಮೊದಲ ಹಂತದ ಕೃತಿಯೊಳಗಿನ ಮಾನವ ಆಕಾರಗಳನ್ನು ನೋಡಿದಾಗ ಅವುಗಳು ನಮ್ಮನ್ನು ನೋಡುವ ಬದಲು ಅವರುಗಳು ಅವರ ಪ್ರಥಮ ವೀಕ್ಷಕ'ನಾದ ಕಲಾವಿದರನ್ನೇ ನೋಡಿದಂತಿರುತ್ತದೆ. ಮತ್ತೊಂದು ಬಗೆಯಲ್ಲಿ ಹೇಳುವುದಾದರೆ, ಒಳಗಿನ ವ್ಯಕ್ತಿ, ಹೊರಗಿನ ಕಲಾವಿದ ಮತ್ತು ಪ್ರೇಕ್ಷಕರ ನಡುವೆ ಒಂದು ಬಗೆಯ ಅವ್ಯಕ್ತ ಅಡ್ಡಗೋಡೆ ನಿರ್ಮಾಣವಾಗುತ್ತವೆ. ಚಿತ್ರಿತ ಆಕಾರಗಳು ನಿರಂತರವಾಗಿ ಈ ಗೋಡೆಗಳನ್ನು ಭೇದಿಸಿಕೊಂಡು ಹೊರಕ್ಕೆ ಬರಲು ಪ್ರಯತ್ನಿಸುತ್ತಿರುತ್ತವೆ. ದೃಶ್ಯಸರಣಿಯೊಂದನ್ನು ಕುರಿತು ಇಂತಹ, ಅಕ್ಷರಶಃ ಕಲ್ಪಿತ ಕಥೆ ಕಟ್ಟುವುದರಲ್ಲಿ ಒಂದು ಗಂಭೀರ ಕಾರಣವೂ ಅಡಕವಾಗಿದೆ.

ಮೊದಲ ಹಂತದ ಕೃತಿಗಳು ಒಂದರ್ಥದಲ್ಲಿ ಶಿವಪ್ರಸಾದರ ಸ್ವಯಂ-ಭಾವಚಿತ್ರಗಳಿದ್ದಂತೆ (ಸೆಲ್ಫ್ ಪೋರ್ಟ್ರೇಟ್), ಅಬ್ದುಲ್ ಗಫರನಿಗೆ ಟೊಮ್ಯಾಟೋ ಗುಪ್ಪೆಗಳಿದ್ದಂತೆ, ರಾಮನಾಯ್ಕನಿಗೆ ಮಾರಮ್ಮಳಿದ್ದಂತೆ, ಮೈಲಾರಲಿಂಗನ ಅರ್ಚಕರಿಗೆ ಢಮರುಗವಿದ್ದಂತೆ ಶಿವಪ್ರಸಾದರಿಗೆ 'ತೈಲವರ್ಣ ಬೆರೆತ ಛಾಯಾಚಿತ್ರಣ ತಂತ್ರ'. ವ್ಯಕ್ತಿ ಮತ್ತು ಆತನ ವೃತ್ತಿಗೆ ಪೂರಕವಾಗುವ ಶಸ್ತ್ರವು ನೇರವಾಗಿ ಕಾಯಕದ ಅವಸರದ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಐತಿಹಾಸಿಕವಾಗಿ, ಕೈಗಾರಿಕೀಕರಣದ ಮುಂಚಿನ ಅಥವ/ಮತ್ತು ಕೈಗಾರಿಕೀಕರಣದ ತವರಾದ ನಗರೀಕೃತ

ಪ್ರದೇಶದ ಪ್ರಭಾವಲಯದಿಂದ ಹೊರಗೆ ಬದುಕುತ್ತಿರುವವರ ವೃತ್ತಿಪರತೆಯ ಆತ್ಮೀಯತೆಗೆ ಸಾಕ್ಷಿಯಿದು. ನಗರೀಕರಣದಲ್ಲಿ ವ್ಯಕ್ತಿಯು ತನ್ನ ದೈನಂದಿನ ಕಾರ್ಯ ನಿಮಿತ್ತ ಬಳಸುವ ವಸ್ತುಗಳೊಂದಿಗೆ ಒಂದು ಅವಿನಾಭಾವ ಸಂಬಂಧ ಹೊಂದಿರಲಾರ. ಆದರೆ ಗಫರನ ಸಣ್ಣ ಟೊಮ್ಯಾಟೋ ಗುಪ್ಪೆಯೂ ಸಹ ಆತನಿಗೆ ಅತೀವ ಬೆಲೆಯುಳ್ಳದ್ದು. ಶಿವಪ್ರಸಾದ್ ಅಂತಹ ವ್ಯಕ್ತಿಯನ್ನು ಕುರಿತು ಒಂದು ಏಳಡಿ ಎತ್ತರದ ಕ್ಯಾನ್ವಾಸೊಂದನ್ನು ರಚಿಸುವಾಗ ಅವರು ಬಳಸುವ ಕೇವಲ ಬಿಳಿಯ ತೈಲವರ್ಣದ ಟ್ಯೂಬುಗಳ ಸಂಖ್ಯೆಯೇ ನೂರೈವತ್ತರಷ್ಟು, ಭೌತಿಕವಾಗಿ ಸಾಮಾನ್ಯವೆನ್ನಿಸಿಕೊಂಡು ಬಿಟ್ಟಿರುವ ಕಾಯಕಕ್ಕೆ ಇಲ್ಲಿ ಸೌಂದರ್ಯಶಾಸ್ತ್ರೀಯ ಅಸಮಾನ್ಯತೆಯನ್ನು ದೊರಕಿಸಿಕೊಡುವ ಪ್ರಯತ್ನವನ್ನು ಈ ಕಲಾವಿದ ಮಾಡಿದ್ದಾರೆ.

ಶಿವಪ್ರಸಾದರ ಕ್ಯಾನ್ವಾಸಿನೊಳಗಿನ ವ್ಯಕ್ತಿಗಳು, ಹೀಗೆ ಅವರ ಶಸ್ತ್ರಗಳೊಂದಿಗೆ ನಿರಂತರವಾಗಿ ಯಾವುದೋ ಕಾರ್ಯನಿಮಿತ್ತ ಸಿದ್ಧರಾಗಿರುವುದು ಮತ್ತು ಈ ಹಂತದ ಚಿತ್ರಗಳೆಲ್ಲ ಶಿವಪ್ರಸಾದರ ಆತ್ಮಚರಿತ್ರೆಯಂತಿರುವುದಕ್ಕೆ ಒಂದು ಕಾರಣವಿದೆ. ನೆನಪಿರಲಿ, ಇಲ್ಲಿರುವ ವ್ಯಕ್ತಿಗಳೆಲ್ಲರ ಶಸ್ತ್ರಗಳೆಲ್ಲ ಮಾರಕಾಸ್ತ್ರಗಳಲ್ಲ. ಆದರೆ ಅವರ ದೈನಂದಿನ ದುಡಿಮೆಗೆ ಅವು ಅನಿವಾರ್ಯ (ಗುಡಿಸಲು, ಮನೆ, ಗ್ಯಾರೇಜು, ವಠಾರ, ಹುಲಿವೇಷ, ಬಂದೂಕು, ಎತ್ತಿನ ಗಾಡಿ

ಕೆ.ಟಿ. ಶಿವಪ್ರಸಾದ್/೧೧

ಇತ್ಯಾದಿ) ಇದನ್ನು ಸರಳೀಕರಿಸಿ, ಬಡಜನರ ಕುರಿತು ಕರುಣೆಯಿಂದ ನಾನು ಹೇಳುತ್ತಿರುವ ಮಾತಲ್ಲ. ಸ್ವತಃ ಕಲಾವಿದರೇ ಇದನ್ನು ಹತ್ತಾರು ಛಾಯಾಚಿತ್ರಗಳಲ್ಲಿ ಸೆರೆಹಿಡಿದು, ಅದರ ಫೋಟೋಗಳಿಗಿಂತ ನೂರಾರು ಪಟ್ಟು ದೊಡ್ಡದಾಗಿ ಚಿತ್ರಿಸುವ ಶ್ರಮ ತೆಗೆದುಕೊಳ್ಳುತ್ತಾರೆ. ಆಯಾ ವಸ್ತುಗಳನ್ನು, ಆದಷ್ಟು 'ಅವುಗಳೇನು' ಎಂಬ ಅರ್ಥ ಮಾಯವಾಗದಂತೆ, ಸಾಕಷ್ಟು ಆರ್ಥಿಕದ್ರವ್ಯ ವ್ಯಯಿಸಿ ಚಿತ್ರಿಸುತ್ತಾರೆ. ಕರ್ನಾಟಕದ ಕಲಾವಿದರಲ್ಲಿ -- ಪ್ರಾಯೋಜಿತ ಕೃತಿಗಳನ್ನು (ಮ್ಯೂರಲ್ ಇತ್ಯಾದಿ) ಹೊರತುಪಡಿಸಿ - ವೈಯಕ್ತಿಕ ಕೃತಿಯೊಂದಕ್ಕೆ ಇಷ್ಟೊಂದು ದೀರ್ಘಾವಧಿ, ಹಣ ಎರಡನ್ನೂ ವ್ಯಯಿಸಿದಸುವ ಮತ್ತೊಬ್ಬ ಕಲಾವಿದನಿಲ್ಲ. ಆದ್ದರಿಂದಲೇ ಇದೊಂದು ಶಿವಪ್ರಸಾದರ ವಿಶಿಷ್ಟ ಸಾಮಾಜಿಕ ಬದ್ಧತೆಯೊಂದರ ಸಾಕ್ಷಿಯೂ ಹೌದು. ಮತ್ತು ಇಲ್ಲೊಂದು ಸ್ವಾರ್ಥದ ಅಂಶವೂ ಇಲ್ಲದಿಲ್ಲ. ತಾವು ಸೃಷ್ಟಿಸುವ ವ್ಯಕ್ತಿಗಳಲ್ಲಿ ತಮ್ಮನ್ನೂ ಅವರಿಗೇ ಆರೋಪಿಸುವ, ಅವರುಗಳ ಶಸ್ತ್ರಗಳಲ್ಲಿ ತಮ್ಮದೇ ವಿಶಿಷ್ಟ ಶಸ್ತ್ರವಾದ ತೈಲವರ್ಣ-ಛಾಯಾಚಿತ್ರಣವನ್ನು ಕಂಡುಕೊಳ್ಳುವುದು ಶಿವಪ್ರಸಾದರ ಮೂಲೋದ್ದೇಶ. ಇದು ಎಂಭತ್ತರ ದಶಕದ ಆರಂಭದವರೆಗಿನ ಅವರ ಕೃತಿಗಳ ಒಂದು ಪಕ್ಷಿನೋಟ.

ಈಗ ತಮ್ಮ ಐವತ್ತರ ಪ್ರಾಯದಲ್ಲಿರುವ ಕೆ.ಟಿ. ಶಿವಪ್ರಸಾದ್ ಸೃಜನಕ್ರಿಯೆಯ ಕಳೆದೊಂದು ದಶಕವು ಮಹತ್ತರ ಬದಲಾವಣೆಗಳನ್ನು ಕಂಡಂತಹ ವರ್ಷಗಳು. ಅವರ ಸಾಮಾಜಿಕ-ರಾಜಕೀಯ ಚಳುವಳಿ, ಜೀವನ ಶೈಲಿ ಮತ್ತು ಕಲಾಕೃತಿಗಳ ರಚನಾವಿಧಾನಗಳು ಪರಸ್ಪರ ಪ್ರಭಾವ ಬೀರಿದ ಘಟ್ಟ. ಅವುಗಳನ್ನು ಈಗ ಅರ್ಥೈಸುವಾಗ ಒಬ್ಬ ಆಗಿಹೋದ ವಯೋವೃದ್ಧ ಕಲಾವಿದ ಅಥವ ಕೃತಿರಚನೆಯ ಅಭ್ಯಾಸವನ್ನು ಈಗಾಗಲೇ ತೊರೆದುಬಿಟ್ಟಿರುವ ಕಲಾವಿದರನ್ನು ಸಮಗ್ರವಾಗಿ ಗ್ರಹಿಸಿದಂತೆ ಅರ್ಥೈಸಲಾಗದು. ಲಿಯನಾರ್ಡೋ-ಡ ವಿಂಚಿ, ಕೆ. ವೆಂಕಟಪ್ಪನಂತಹವರು ತಮ್ಮ ಜೀವಿತಾವಧಿಯ ಅಂತಿಮ ದಿನಗಳಲ್ಲಿ ಕಾರಣಾಂತರದಿಂದ ಸೃಜನಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ನಿರಾಕರಿಸಿದ್ದರು. ತದ್ವಿರುದ್ಧವಾಗಿ ಶಿವಪ್ರಸಾದ್ ಕಲಾಸೃಷ್ಟಿಯ ನಿಟ್ಟಿನಿಂದ ಇನ್ನೂ ಜೀವಂತವಿರುವ ಕಲಾವಿದ. ಅಷ್ಟೇ ಅಲ್ಲ, 'ನೈಜಕಲಾ ಪ್ರಕಾರ'ವೆಂದು ಯಾವುದನ್ನು ನಾವು ಸರಳವಾಗಿ, ಸಹಜವಾಗಿ ಗುರ್ತಿಸುತ್ತೇವೆಯೋ ಅದರ ಒಡಲೊಳಗಿನಿಂದಲೇ ಅದರ ನಿರ್ವಚನದ, ರೂಪಾಂತರದ ಮತ್ತು ಅದು ರೂಪುಗೊಂಡ ಸಾಂಸ್ಕೃತಿಕ ಸಂದರ್ಭದ ಇತರ ಪೂರಕ ಪರಿಶೋಧಿತ ಮಾಧ್ಯಮಗಳನ್ನು ಬೆಸುಗೆ ಹಾಕಲು ಪ್ರಯತ್ನಿಸುತ್ತಿರುವಂತಹವರು. ಇತ್ತೀಚಿನ ವರ್ಷಗಳು ಅವರ ಅಂತಹ ಪ್ರಯತ್ನದ ಅತ್ಯುತ್ಕೃಷ್ಟ ಕಾಲವೂ ಹೌದು. ಆದ್ದರಿಂದ ಅವರ ಕೊಡುಗೆಯನ್ನು ಕುರಿತು ಯಾವುದೇ ಬಗೆಯ ನಿರ್ಣಯಾತ್ಮಕ ಗುಣಗಳನ್ನು ಈ ನನ್ನ ಬರಹಗಳಲ್ಲಿ ಗುರ್ತಿಸುವ ಅಗತ್ಯತೆಯೂ ಇಲ್ಲ. ಇಲ್ಲಿಯವರೆಗಿನ ಅವರ ಕೃತಿ ಸಮೂಹಕ್ಕೆ ಒಂದು ತಾತ್ವಿಕ ನೆಲೆಗಟ್ಟನ್ನು ದೊರಕಿಸಿಕೊಡುವ ಒಂದು ಪಾರ್ಶ್ವಿಕ ಪ್ರಯತ್ನವೇ ಈ ಪುಸ್ತಕ.

ಶಿವಪ್ರಸಾದರ ಕಲಾವೃತ್ತಿಯ ಒಂದು ಗಮನಾರ್ಹ ಅಂಶವೆಂದರೆ ಅದು ಕೇವಲ ಸೌಂದರ್ಯಾತ್ಮಕ ನೆಲೆಯಲ್ಲಷ್ಟೇ ಸ್ಪಷ್ಟಗೊಳ್ಳದಿರುವುದು. ಕಲಾವೃತ್ತಿಯನ್ನು ಒಂದು ಒಟ್ಟಾರೆ ಜೀವನಾನುಭವದ' ಅನಿವಾರ್ಯ, ಆದರೆ ಭಾಗಶಃ ಅಂಗಗಳಾಗಿ ಸ್ವೀಕರಿಸಿದವರು ಅತಿ ವಿರಳ. ಅಪರೂಪಕ್ಕೊಮ್ಮೆ ಆರ್.ಎಸ್. ನಾಯ್ಡು, ರುಮಾಲೆ ಚೆನ್ನಬಸವಯ್ಯನಂಥವರ ಜೀವನ ಹಾಗೂ ಕಲಾವೃತ್ತಿಗಳು ಹೀಗೆ ಬೆಸೆದುಕೊಂಡಿವೆ. ಇದರ ಸೂಕ್ಷ್ಮ ಸುಳಿವು ನಮಗಿದ್ದಾಗ್ಯೂ ಅವರುಗಳ ಕುರಿತ ಸಂಶೋಧನೆ ಇನ್ನೂ ಆಗಿಲ್ಲ. ಒಂದರ್ಥದಲ್ಲಿ ಅವರು ಇತಿಹಾಸದ ಪುಟಗಳೊಳಕ್ಕೆ ಸೇರ್ಪಡೆಯಾಗುವ ಮುನ್ನವೇ ಕಳೆದು ಹೋಗಿಬಿಟ್ಟಿದ್ದಾರೇನೋ ಎಂಬ ಭಯವೂ ಕಾಡದಿರದು.

'ಸೌಂದರ್ಯಾತ್ಮಕ' ನೆಲೆಯಲ್ಲಿ ಕಲೆಯನ್ನು ಸ್ವೀಕರಿಸಿದವರದೇ ಆಧುನಿಕ ಭಾರತೀಯ ಕಲಾ ಇತಿಹಾಸದ ಸಂದರ್ಭದಲ್ಲಿ ಹೆಚ್ಚು ಆಧಿಪತ್ಯ. ಅದಕ್ಕಿಂತ ಭಿನ್ನವಾಗಿ ಕಲೆಯನ್ನು ಸ್ವೀಕರಿಸಲು ಪ್ರಯತ್ನಿಸಿದವರು ಸಮಾಜಕ್ಕಾಗಿ ಕಲೆ' ಎಂಬ ಸರಳೀಕೃತ ಮಾರ್ಕ್ಸ್‌ವಾದಿ ನೆಲೆಯವರು ಎಂಬ ಒಂದು ಗಂಭೀರವಾದ ಆರೋಪವೂ ಇಲ್ಲದಿಲ್ಲ. ತೀರ ಇತ್ತೀಚೆಗಷ್ಟೇ ಕೆಲವು ಮಾರ್ಕ್ಸಿಸ್ಟ್ ಒಲವಿನ ಕಲಾವಿದರನ್ನು (ಸೋಮನಾಥ ಹೋರರಂತಹವರ ಕ್ರಿಯಾಶೀಲತೆಯನ್ನು) ಸೌಂದರ್ಯಶಾಸ್ತ್ರೀಯ ನೆಲೆಯಿಂದ ಗ್ರಹಿಸುವ ಪ್ರಯತ್ನಗಳಾಗುತ್ತಿವೆ. ಆದರೆ ಜೆ. ಸ್ವಾಮಿನಾಥನ್,

ಕೆ.ಜಿ. ಸುಬ್ರಹ್ಮಣ್ಯನ್‌ರಂಥವರು ಕಲಾವೃತ್ತಿ ಹಾಗೂ ತಮ್ಮ ಬದುಕಿನ ಇತರ ಆಗುಹೋಗುಗಳನ್ನು ತಾಳೆ ಹಾಕಿಕೊಂಡು, ಒಂದಿಲ್ಲದೆ ಮತ್ತೊಂದಿಲ್ಲವೆಂದು ಬೊಟ್ಟು ಮಾಡಿ ಸೂಚಿಸುವ ಅದ್ಭುತ ಕ್ರಮ ಅಪರೂಪದ್ದು. ಇಂಥವರನ್ನು ಸುಲಭವಾಗಿ 'ವರ್ಗೀಕರಿಸಲು ಅವಸರಿಸುವ ಕಲಾಸಾಹಿತ್ಯವು ಲೇವಡಿಯ ವಸ್ತುವಾಗಿಬಿಡುತ್ತದೆ. ನಾನು ಹೇಳುತ್ತಿರುವುದನ್ನು ಮತ್ತೊಂದು ರೀತಿಯಲ್ಲಿ ಸ್ಪಷ್ಟಪಡಿಸಬಹುದು. ಕೆ.ಜಿ. ಸುಬ್ರಹ್ಮಣ್ಯನ್ ಹಲವು ದಶಕಗಳ ಕೃತಿಗಳನ್ನು ಸಮಗ್ರವಾಗಿ, ಅವರದೇ ಬರಹಗಳ ನೆರವಿನಿಂದ ಗ್ರಹಿಸುವಾಗ ಅವರ ಒಟ್ಟಾರೆ 'ಕಲೆ-ಬದುಕು' ಎಂಬ ನಿರ್ಮಿತಿಯನ್ನು ಗ್ರಹಿಸಬಹುದು. ಅವರ ಮನೆಯ ಅಂಗಳದಲ್ಲಿನ ಗಿಡ, ಹುಳು ಹುಪ್ಪಟೆಗಳು ಕ್ರಮೇಣ ಒಂದು ಸ್ವಯಂಪೂರ್ಣ ಪ್ರಪಂಚ'ವಾಗಿ ಹೋಗುತ್ತದೆ. ಅಲ್ಲಿ ಗಿಡಮರಗಳೇ ದಟ್ಟಾರಣ್ಯಗಳಾಗಿ, ಹುಳು ಹುಪ್ಪಟೆಗಳೇ ಅನಾದಿ ಕಾಲದಿಂದ ಜೀವಿಸಿ ಬಂದ ಪ್ರಾಣಿ ಸಂಕುಲಗಳಾಗಿ ಮಾರ್ಪಡುತ್ತವೆ. ಇವೆಲ್ಲವನ್ನೂ ಅವರ ಇತ್ತೀಚಿನ ದಶಕಗಳ ಕೃತಿಗಳಲ್ಲಿ ಗ್ರಹಿಸಬಹುದಾಗಿದೆ ಎಂಬುದು ಬೇರೆಯೇ ಒಂದು ನೀಳತೆ.

ಶಿವಪ್ರಸಾದರ ಕೃತಿ ಸಮೂಹವು ಬೇರೊಂದು ಬಗೆಯಲ್ಲಿ, ಇಂತಹ ಸ್ವಯಂಪೂರ್ಣ ಜಗತ್ತನ್ನು ತಮ್ಮ ಕೃತಿ ಚೌಕಟ್ಟಿನೊಳಗಿನಿಂದಲೇ ಸೃಷ್ಟಿಸಿಕೊಡುತ್ತದೆ. ಮತ್ತು ಅದಕ್ಕೆ ಬೇಕಾದ ಶಕ್ತಿಯನ್ನು ಅವರು ಪ್ರಜ್ಞಾಪೂರ್ವಕವಾಗಿ ತಾವು ಆಯ್ದುಕೊಂಡು ಸಾಮಾಜಿಕ ಜೀವನ ಶೈಲಿಯಿಂದಲೇ ದೊರಕಿಸಿಕೊಂಡಿದ್ದಾರೆ. ಇದನ್ನು ಮುಂದೆ ವಿವರಿಸಲಾಗಿದೆ.

ಮಾನವ ಹಾಗೂ ಆತನ ಮೂಲಭೂತವಾದ ಅವಶ್ಯಕತೆಗಳ ಪೂರೈಕೆಗಾಗಿ ತಾನೇ ತಯಾರಿಸಿಕೊಂಡ ಶಸ್ತ್ರಗಳು ಆಧುನಿಕಪೂರ್ವ ಯುಗದಲ್ಲಿ ಪರಸ್ಪರ ಸಾರ್ವತ್ರಿಕವಾಗಿ ಆತ್ಮೀಯವಾಗಿದ್ದವು. ಆಧುನಿಕತೆಯು ಮೊದಲು ಮಾಡಿದ ಕೆಲಸವೆಂದರೆ ಅವುಗಳ ನಡುವಣ ಆತ್ಮೀಯತೆಯನ್ನು ಒಡೆದು ಹಾಕಿದ್ದು, ಶಿವಪ್ರಸಾದ್ ಕಲಾಸೃಷ್ಟಿಗಾಗಿ ಬಳಸುವ 'ತೈಲವರ್ಣ-ಜಲವರ್ಣ-ಕ್ಯಾಮೆರ' ಎಂಬ ಸಮ್ಮಿಶ್ರಣ ಶಸ್ತ್ರಕ್ಕೂ ಅವರ ಕೃತಿಯೊಳಗೇ ರಾಮಾನಾಯ್ಕ, ಹುಲಿವೇಷದವ, ಮೈಲಾರಲಿಂಗ ಅರ್ಚಕರು ಕ್ರಮಬದ್ಧವಾಗಿ ಹೊಂದಿರುವ ಮಾರಮ್ಮ ದೇವಿ, ಹುಲಿಯ ಚರ್ಮ, ಡಮರುಗಗಳಂತಹ ಚಿತ್ರಗಳಿಗೂ ಒಂದು ತೆರನಾದ ಅವಿನಾಭಾವ ಸಂಬಂಧವಿದೆಯೆಂದೆ. ಆದ ಕಾರಣದಿಂದಲೇ ಇವರ ಸೃಷ್ಟಿಗಳೆಲ್ಲ 'ಸ್ವಯಂ-ಭಾವಚಿತ್ರಗಳು' ಎಂದೂ ಗುರ್ತಿಸಿದೆ. ಆದರೆ ಇವೆರಡರ ನಡುವೆ ಒಂದು ಸಣ್ಣ ವ್ಯತ್ಯಾಸವಿದೆ. ಫೋಟೋಗ್ರಫಿಯನ್ನು ನೈಜತೆಯ ದಾಖಲಾತಿಯ ಯಂತ್ರವೆಂದಷ್ಟೇ ಇಲ್ಲಿ ಬಳಸಿಕೊಳ್ಳಲಾಗಿಲ್ಲ. ಅದನ್ನು ಶಿವಪ್ರಸಾದ್ ಬಳಸುವ ಒಂದು ಕ್ರಮವಿದೆ. ಅದರ ಮುಂದುವರೆದ ರೂಪಗಳ (ನೆನಪು' - ಯಂತ್ರದಿಂದ ಹಿಡಿದು ಇಂಟರ್‌ನೆಟ್‌ನ ಸೌಂದರ್ಯದವರೆಗೂ) ಪರಿಚಯ ಅಷ್ಟೇನೂ ಇಲ್ಲದ, ನಗರದಿಂದ 'ಮಾನಸಿಕವಾಗಿಯಾದರೂ ದೂರವಿರುವ, ಸಾಮಾನ್ಯರಲ್ಲಿ ಸಾಮಾನ್ಯರಾದ ಜನಸಮುದಾಯವನ್ನು ಗುರ್ತಿಸಲು ಇದನ್ನು ಬಳಸಲಾಗಿದೆ. ಅಂದರೆ ಬೆಂಗಳೂರಿನಂತಹ ಸಿಲಿಕಾನ್ ನಗರದಲ್ಲೂ ಈ ಮಂದಿ ಕಂಡುಬರಬಹುದು. ಆದರೆ ನಿಜಾರ್ಥದಲ್ಲಿ ಮಾನಸಿಕವಾಗಿ ಈ ಜನ ಇಲ್ಲಿಗೆ ಸೇರಿದವರಲ್ಲ. ಇಂತಲ್ಲಿ ನಗರೀಕರಣದ ವೈಭವವೆಲ್ಲವೂ ಈ ಜನರಿಗೆ ತಮ್ಮ ಬದುಕಿನ ಅವಿಭಾಜ್ಯ ಅಂಗವಲ್ಲದೆ, ತಮ್ಮ ಜೀವನದಲ್ಲೊಮ್ಮೆ (ಒಮ್ಮೆಯಾದರೂ ಎಂದರೂ ಸರಿಯೇ)

ಅನುಭವಿಸಬೇಕೆಂದುಕೊಳ್ಳುವುದು ಐಶಾರಾಮದ ಬಯಕೆಯಾಗಿರುತ್ತದೆ. ಮತ್ತೊಂದು ನಿಟ್ಟಿನಿಂದ ಗ್ರಹಿಸುವುದಾದರೆ ನಗರೀಕರಣವು ಇವರಿಗೆ ನಿರಂತರ ಅವ್ಯಕ್ತ/ಅಮೂರ್ತ ಭೀತಿ'ಯ ಸಂಕೇತವೂ ಆಗುತ್ತದೆ.

ಶಿವಪ್ರಸಾದರ ಕೃತಿಯೊಳಗಿನ ವ್ಯಕ್ತಿಗಳ ಚಿತ್ರಗಳು ಚಿತ್ರದ ಚೌಕಟ್ಟಿನ ಮೂಲಕ ವೀಕ್ಷಕನನ್ನು ನೋಡುವುದು ಇಂತಹ ಭೀತಿಯುಕ್ತ ಕಣ್ಣುಗಳಿಂದಲೇ. ಇಲ್ಲಿ ಶಿವಪ್ರಸಾದರ ಅಸ್ತ್ರವು, ಅದರ ಮೂಲಕ ಚಿತ್ರಿತವಾದ ಕಲೆಯ ಒಳಗಿನ ವ್ಯಕ್ತಿಗಳ ಶಸ್ತ್ರಗಳಿಗಿಂತ ಭಿನ್ನಗೊಳ್ಳುತ್ತದೆ. ಅವರ ಆಯುಧಗಳು ಭೌತಿಕ ಅಗತ್ಯಕ್ಕಾದರೆ ಶಿವಪ್ರಸಾದರು ಅದನ್ನೇ ಕಲೆಯೆಂಬ ಆದಿಭೌತಿಕ ಬಯಕೆಯ ಪೂರೈಕೆಗಾಗಿ ಬಳಸುತ್ತಾರೆ. ಆದರೆ ಹಾಗೆ ಮಾಡುವಾಗಲೂ ಅವರು ಕ್ಯಾಮೆರವನ್ನು ಒಂದು ಭೌತಿಕತೆಯ-ದಾಖಲಾತಿಯ ಯಂತ್ರ ಎಂಬುದನ್ನಾಗಲೀ ಅಥವ ಮೂರ್ತ ವ್ಯಕ್ತಿಗಳನ್ನು ಚಿತ್ರಿಸುತ್ತಲೇ ಹಾಗೆ ಮಾಡಬೇಕೆಂಬ ಹಠವನ್ನು ಮಾತ್ರ ತೊರೆಯುವುದಿಲ್ಲ. ಆದ್ದರಿಂದಲೇ ಶಿವಪ್ರಸಾದರ ಕೃತಿಗಳಲ್ಲಿ ಅಮೂರ್ತತೆ ಎಂಬ ಅಂಶ ಮೂರ್ತದ ಒಳಗೇ ಅವಿರ್ಭವಿಸಿದೆಯೇ ಹೊರತು ಮೂರ್ತ- ಅಮೂರ್ತವೆಂಬ ಪಾಶ್ಚಾತ್ಯ ಕಲಾ ಇತಿಹಾಸದ ಭಿನ್ನತೆಯ ಹೊಡೆತಕ್ಕೆ ಸಿಕ್ಕಿ ಹಾಕಿಕೊಳ್ಳುವುದಿಲ್ಲ.

ಕೆ.ಟಿ. ಶಿವಪ್ರಸಾದ್/೧೩

ಶಿವಪ್ರಸಾದ್ ಕ್ಯಾಮೆರವನ್ನು ತೈಲವರ್ಣದ ಅಂತರ್ಗತ ಭಾಗವಾಗಿಸುವಾಗ ಈ ಎರಡೂ ಕಲಾತ್ಮಕ ಮಾಧ್ಯಮಗಳ ಶುದ್ಧತೆ, ಐತಿಹಾಸಿಕ ಬೆಳವಣಿಗೆ ಮುಂತಾದ ಕಲ್ಪನೆಗಳನ್ನು ಛಿದ್ರಗೊಳಿಸುತ್ತಾರೆ. ಉದಾಹರಣೆಗೆ ಇವರ ಎರಡನೇ ಹಂತದ ನಂತರದ ಕಲಾಕೃತಿಗಳು ತೈಲವರ್ಣ ಅಥವಾ ಕ್ಯಾಮೆರಾದ 'ಶುದ್ಧ' ಸಾಧ್ಯತೆಗಳ ಚೌಕಟ್ಟಿನಿಂದ ಹೊರಬರುತ್ತವೆ. ಆದ್ದರಿಂದಲೇ ಲಿಯನಾರ್ಡೊ ಡ ವಿಂಚಿ, ಮಾರ್ಸೆಲ್ ಡುಶಾಂಪರ ಕೃತಿಗಳಲ್ಲಾಗುವಂತೆ ಶಿವಪ್ರಸಾದರ ಕೃತಿಗಳು, ಯಂತ್ರಗಳು ಹಾಗೂ ಯಂತ್ರೀಕರಣದ ವೈಜ್ಞಾನಿಕ ಗುಣವನ್ನು ತೀರ ವೈಯಕ್ತಿಕರಣಗೊಳಿಸಿ ಬಿಡುತ್ತವೆ.

ಕಳೆದೆರಡು ದಶಕದ ಶಿವಪ್ರಸಾದರ ಕೃತಿಗಳಲ್ಲಿ ಆದ ಒಂದು ಮುಖ್ಯ ಭೌತಿಕ ಬದಲಾವಣೆ ಎಂದರೆ, ಸಪೂರವಾದ ಕುಂಚದ ಚಿತ್ರಣಕ್ರಮವು ಒಂದು ತಾತ್ವಿಕ ಆದರ್ಶದ ಪೂರೈಕೆಯ ಸಲುವಾಗಿ ಒರಟಾದ ಮೆತ್ತನೆಯ ರೀತಿಗೆ (ಇದನ್ನು 'ಥಿಕ್ ಇಂಪಾಸ್ಟೋ' ಎನ್ನುತ್ತಾರೆ) ರೂಪಾಂತರ ಹೊಂದಿದ್ದು, ತೀರ ಅತೀತಕ್ಕೆ ಹೋಗಿ ಹೇಳಬಹುದಾದರೆ ಇವರ ಈ ಬಗೆಯ ಚಿತ್ರಣಕ್ರಮವು ಮೊದಲಿಗೆ ಸಮತಟ್ಟಾದ ಕ್ಯಾನ್ವಾಸಿನ ಮೇಲೆ ಮೂಡಿದಂತಿದ್ದರೆ ಈಗ ಒರಟಾಗಿ ಉತ್ತಲಾದ 'ಬಣ್ಣದ ಹೊಲ'ದ (ಕಲರ್ ಫೀಲ್ಡ್) ಮೇಲೆ ಚಿತ್ರರಚನೆ ಮಾಡಿದಂತೆನಿಸುತ್ತದೆ. ಅಥವ ಪಾರದರ್ಶಿಕೆಯೊಂದರ ಮೂಲಕ ನೈಜವೆನ್ನಿಸುವ ಚಿತ್ರವೊಂದನ್ನು ಒರಟು

ಬಂಡೆಗಳು ಮೇಲೆ ಹಾಯಿಸಿದಾಗ ಕಾಣುವಂತಾಗುತ್ತದೆ. ದೃಶ್ಯವನ್ನು ವಿವರಿಸಲು ಕನ್ನಡದಲ್ಲಿರುವ ಭಾಷೆಯ ಬಡತನದ ಕಾರಣಕ್ಕಾಗಿ ಈ ಬಗೆಯ ಮೇಲಿನ ಒರಟು ವಿವರಣೆಯು ಅನಿವಾರ್ಯವಾಗಿದೆ.

ಈ ಮೇಲೆ ವಿವರಿಸಲಾದ ಶೈಲಿಯ ನಿರ್ವಹಣೆಯ ಬದಲಾವಣೆಯ ಮುಖಾಂತರ ಶಿವಪ್ರಸಾದ್ ಕಲೆ ಮತ್ತು ನಿಜ ಬದುಕು ಇವೆರಡರ ಸಮ್ಮಿಶ್ರಣದ ವೈಯಕ್ತಿಕವಾದ 'ಸ್ವಯಂಪೂರ್ಣ ಜಗತ್ತೊಂದರ' ಸೃಷ್ಟಿಯ ಕಡೆಗೆ ಒಂದು ದಾಪುಕಾಲು ಹಾಕಿದಂತಾಯಿತು. ಅಂದರೆ ಈ ಹಂತದ ಚಿತ್ರಗಳನ್ನು ಮೊದಲಿನ ಸಪೂರ ಚಿತ್ರಗಳೊಂದಿಗೆ ಅಕ್ಕಪಕ್ಕ ಇರಿಸಿ ಗ್ಯಾಲರಿಯೊಂದರಲ್ಲಿ ವೀಕ್ಷಿಸಿದರೆ ಅವುಗಳ ನಡುವಿನ ವ್ಯತ್ಯಾಸಗಳನ್ನು ಗಮನಿಸಬಹುದು. ಈ ಅನುಭವದ ಸಂಕೀರ್ಣತೆಯನ್ನು ಮತ್ತೊಂದು ರೀತಿಯಲ್ಲಿ ವಿವರಿಸಬಹುದು. ಇಂತಹ ಎರಡು ಕಲಾಕೃತಿಗಳು ಈ ಪುಸ್ತಕದಲ್ಲಿಯೇ ಪ್ರಕಟವಾಗಿವೆ. ಈ ಅಸಲಿ ಕೃತಿಯ ಫೋಟೋ/ಪಾರದರ್ಶಿಕೆ ಮುಖಾಂತರ ಆಫ್‌ಸೆಟ್ ಪ್ರಿಂಟಿನ ಮೂಲಕ ಮೂರನೇ ಹಂತದ ನೈಜತೆಯಾಗಿ ತೀಕ್ಷ್ಯ ಕಣ್ಣಿಗೆ ಗೋಚರಿಸುತ್ತವೆ.

ಶಿವಪ್ರಸಾದರ ಆರಂಭಿಕ ಸಪೂರ ಚಿತ್ರಗಳನ್ನು ಇಲ್ಲಿನ ಛಾಯಾಚಿತ್ರಣವು ಹಿಡಿದಿರಿಸಿದಷ್ಟು ಅನಾಯಾಸವಾಗಿ, ಇಂಪಾಸ್ಟ್-ಚಿತ್ರಗಳನ್ನು ಹಿಡಿದಿರಿಸಲಾಗಿಲ್ಲ. ಏಕೆಂದರೆ ಕಣ್ಣನೋಟಕ್ಕೆ ಮೂಲಭೂತ ಅಗತ್ಯ ಬೆಳಕು. ಕ್ಯಾಮೆರ ಈ ಎರಡನೆಯ ಕೃತಿಯನ್ನು ಸೆರೆಹಿಡಿಯುವಾಗ ಬೆಳಕು ಎಡದಿಂದ ಅಥವ ಬಲದಿಂದ ಬಿದ್ದಂತೆಲ್ಲಾ ಆ ಕೃತಿಯು ನಮ್ಮ ದೃಷ್ಟಿಗೆ ಗೋಚರವಾಗುವ ಎರಡು ಬಗೆಯಲ್ಲಿ, ಆ ಚಿತ್ರವು ನಮ್ಮಲ್ಲಿ ಉದ್ದೀಪಿಸಬಹುದಾದ ಎರಡು ಭಿನ್ನ ರೀತಿಯ ಭಾವನೆಗಳು ಅಡಕವಾಗಿವೆ. ಈ ಫೋಟೋಗಳನ್ನು ಮರೆತು ಅಸಲಿ ಕೃತಿಗಳನ್ನು ಅಕ್ಕಪಕ್ಕ ಇಟ್ಟು ನೋಡಿದಾಗಲೂ ಗ್ಯಾಲರಿಯಲ್ಲಿ ಏರ್ಪಡಿಸಲಾಗಿರುವ ಬೆಳಕಿನ ಪ್ರಖರತೆ ಮತ್ತು ಅದರ ದಿಕ್ಕನ್ನು ಆಧರಿಸಿ ಆ ಒಂದೇ ಅಸಲಿ ಕೃತಿಯ ಭಾವನೆಗಳು ವ್ಯತ್ಯಸ್ಥಗೊಳ್ಳುತ್ತವೆ. ಈ ವ್ಯತ್ಯಸ್ಥಿಕರಣವನ್ನು ಶಿವಪ್ರಸಾದ್ ತಮ್ಮ ಕೃತಿಗಳ ಆವರಣದೊಳಗೇ ಪ್ರಜ್ಞಾಪೂರ್ವಕವಾಗಿ ದುಡಿಸಿಕೊಂಡಿದ್ದು ಒಂದು ಅಪೂರ್ವ ಘಟನೆ. ಇಂತಹ ಬೆಳಕಿನ ವ್ಯತ್ಯಾಸದಿಂದ ಉಂಟಾದ ಒಂದೇ ಕೃತಿಯ ಎರಡು ಅನುಭವವು ನೈಜತೆಯ ಏಕತೆಯನ್ನು ನಾಶಗೊಳಿಸುತ್ತದೆ. ಅರ್ಥಾತ್ ನೈಜತೆಯೊಳಗೆ ಅಡಕವಾಗಿರುವ ವೈಜ್ಞಾನಿಕತೆ ಹಾಗೂ ವೈಚಾರಿಕತೆಯ ವಸಾಹತು ದೃಷ್ಟಿಕೋನವನ್ನು ನಿರ್ವೀರ್ಯಗೊಳಿಸುತ್ತದೆ.

ಈ ಒಂದು ನಿರ್ವೀರ್ಯತೆ ಹಲವಾರು ರೀತಿಯಲ್ಲಿ ಉಂಟಾಗುತ್ತದೆ. ಅಥವ ಅಂತಹ ನೈಜತೆಯೊಳಗಿನ ಏಕಶಿಲಾ ವಿಕ್ಟೋರಿಯನ್ ಗುಣವನ್ನು ಹಲವಾರು ಕಲಾತ್ಮಕ-ನಿರ್ಮಿತಿಗಳ ಪ್ರಾಯೋಗಿಕ ಅನ್ವಯದ ಮುಖೇನವೇ ಶಿವಪ್ರಸಾದ ಛಿದ್ರಗೊಳಿಸುತ್ತಾರೆ. ತನ್ಮೂಲಕ ಉಂಟಾಗುವ 'ಫಲಿತಾಂಶ'ವನ್ನು ಸ್ವದೇಶೀಯ/ಸ್ವಜನಪರ ಮತ್ತು ವಸಾಹತೋತ್ತರ ಅನುಭವವನ್ನು ಕಟ್ಟಿಕೊಡಲು ಬಳಸಿಕೊಳ್ಳುವುದು, ಅದೂ ಮಾರ್ಕ್ಸಿಸಂನ ಸೀಮಿತ ದೃಷ್ಟಿಕೋನವನ್ನು

ಮೀರಿ ಹಾಗೆ ಮಾಡುವುದು ಒಂದು ಅನನ್ಯ ಸಾಧನೆ. ಅದನ್ನು ಶಿವಪ್ರಸಾದ್ ಈ ಕೆಳಕಂಡಂತೆ, ಮೂರು ರೀತಿಯಲ್ಲಿ ಸಾಧಿಸಿಕೊಳ್ಳುತ್ತಾರೆ.

(೧) ತೈಲವರ್ಣದಲ್ಲಿ ರಚಿಸಿದ ಕೃತಿಗಳಲ್ಲಿನ ವ್ಯಕ್ತಿಗಳನ್ನು ಹಲವೊಮ್ಮೆ ಕಾಲಾನಂತರದಲ್ಲಿ, ಶಿವಪ್ರಸಾದ್ ಪುನರ್ ಚಿತ್ರಿಸುತ್ತಾರೆ. ಉದಾಹರಣೆಗೆ "ಹುಲಿವೇಷದವನ ಚಿತ್ರಗಳನ್ನು ಹತ್ತಾರು ವರ್ಷಗಳಿಂದ ಭಿನ್ನ ಭಂಗಿಗಳಲ್ಲಿ, ಮಾಧ್ಯಮಗಳಲ್ಲಿ (ಜಲವರ್ಣ, ಚಾರ್‌ಕೋಲ್ ಡ್ರಾಯಿಂಗ್ ಇತ್ಯಾದಿ) ಮರುಚಿತ್ರಿಸಲಾಗಿದೆ. ಚೀನಿ ದೇಶದ ಶಾಸ್ತ್ರೀಯ ಚಿತ್ರಣದ ರೀತಿಯನ್ನು ಹೋಲುವ ಇಂತಹ ಒಂದು ಭಿನ್ನ ಸೃಜನಕ್ರಮವು ವೀಕ್ಷಕನ ನೆನಪನ್ನು ಸೃಜನತೆಯ ಶಕ್ತಿಯನ್ನೂ ಪರೀಕ್ಷಿಸಿ ಬಯಲಿಗೆಳೆದಂತಾಗುತ್ತದೆ. ಅಂದರೆ ವೀಕ್ಷಕನ ಜೀವಿತಾವಧಿಯ ಹಲವು ಹಂತಗಳಲ್ಲಿ ಹಿಂದೊಮ್ಮೆ ನೋಡಿದ ವಸ್ತು, ವ್ಯಕ್ತಿಯೊಂದನ್ನು ನೆನಪಿಸಿಕೊಂಡರೆ ಅದು ಒಂದೇ ರೀತಿಯಲ್ಲಿ (ಬಣ್ಣ ಅಳತೆ ಇತ್ಯಾದಿ) ನಮಗೆ ನೆನಪಾಗದು. ಇದು 'ಫೋಟೋಗ್ರಫಿಕ್ ಮೆಮೊರಿ' ಎನ್ನುತ್ತೇವಲ್ಲ ಅದಕ್ಕೆ ವಿರುದ್ಧವಾದುದು. ವಿಶೇಷವೆಂದರೆ ಈ ಛಾಯಾಚಿತ್ರಕವಾದ ನೆನಪು ಯಾವ ಮೂಲದಿಂದ ಜನಿಸಿತೋ ಅದೇ ಕ್ಯಾಮೆರವನ್ನು, ಶಿವಪ್ರಸಾದ್, ಅದರ ವಿರುದ್ಧ ಉದ್ದೇಶಕ್ಕಾಗಿ ತಮ್ಮ ಕೃತಿಗಳಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಕ್ಯಾಮೆರ ಎಂಬ ಐರೋಪ್ಯ ಪ್ರಜ್ಞೆಯ ಯಂತ್ರವನ್ನು ಪೌರ್ಶ್ಚಾತ್ಯ ಅಭ್ಯಾಸವೊಂದಕ್ಕೆ ಪೂರಕವಾಗಿ ಅದೂ ವೈಜ್ಞಾನಿಕ-ಯಾಂತ್ರಿಕವಲ್ಲದ ರೀತಿಯಲ್ಲಿ ಮಾರ್ಪಡಿಸಿಕೊಳ್ಳಲಾಗುತ್ತಿದೆ ಇಲ್ಲಿ.

(೨) "ರಂಗಮ್ಮ" "ಹುಲಿವೇಷ"ದವ ಮುಂತಾದವರನ್ನು ತೈಲವರ್ಣದಲ್ಲಿ ಮೂಡಿಸಿದ ನಂತರ, ಅವರನ್ನೇ ಜಲವರ್ಣದ ಮಾಧ್ಯಮದಲ್ಲೂ ಚಿಕ್ಕ ಅಳತೆಯಲ್ಲಿ ರಚಿಸಿದಾಗ, ಇಂತಹ ರಚನೆಗಳು ವೀಕ್ಷಕನ/ಳ ದೃಷ್ಟಿಯ ಅಳತೆಯ ಏಕಾಗ್ರತೆಯನ್ನೂ ಹೆಚ್ಚು ಬೇಡುತ್ತದೆ. ಉದಾಹರಣೆಗೆ "ರಂಗಮ್ಮ" ಮೂಲತಃ ಎತ್ತರದ ತೈಲವರ್ಣ ಕೃತಿ. ನಂತರ (೧೯೯೭ರಲ್ಲಿ ಬೆಂಗಳೂರಿನ ರೆನಾಯಸಾನ್ಸ್ ಗ್ಯಾಲರಿಯಲ್ಲಿ ಪ್ರದರ್ಶಿತ) ಅದೇ ವ್ಯಕ್ತಿಯನ್ನು ಅಡ್ಡವಾಗಿ ಚಿತ್ರಿಸಿದಾಗ ವ್ಯಕ್ತಿ ಆಕೆಯೇ ಆಗಿದ್ದು, ಹಿಂದಿನ ತೈಲವರ್ಣದ ಅದೇ ವ್ಯಕ್ತಿಯ ನೆನಪನ್ನು ತಂದರೂ ಸಹ ಆಕೆಯನ್ನು ಕಲಾತ್ಮಕವಾಗಿ ಹಿಡಿದಿರಿಸುವ 'ಚೌಕಟ್ಟು' ಬದಲಾಗುವುದು ಬೇರೇನನ್ನೋ ಸೂಚಿಸುತ್ತದೆ. ಸಿನಿಮಾವೊಂದನ್ನು ಥೇಟರಿನಲ್ಲಿ ನೋಡುತ್ತಿರುವಾಗ ಬಾಗಿಲು ತೆರೆದುಕೊಂಡರೆ ಬೆಳಕು ಸಣ್ಣದಾಗಿ ಒಳಬಂದಾಗ ಆಗುವಂಥ ತಡಬಡಿಕೆ "ರಂಗಮ್ಮಳ ಎರಡೂ ಕೃತಿಗಳನ್ನು ಒಟ್ಟಿಗೆ ನೋಡುವಾಗ ಆಗುತ್ತದೆ. ಅಥವಾ ಸಿ.ಡಿ ಮತ್ತು ವಿಡಿಯೋ ಚಿತ್ರವನ್ನು ನೋಡುವಾಗ ಒಂದೆಡೆ ಅದು ಫ್ರೀಜ್ ಆಗುವಾಗಿನ ರಸಹೀನತೆಯನ್ನು ಶಿವಪ್ರಸಾದರ ರಂಗಮ್ಮನ ಕೃತಿಗಳಲ್ಲಿ 'ಕಲಾತ್ಮಕ'ವಾಗಿ ಹಿಡಿದಿರಿಸಲಾಗಿದೆ.

ಇಲ್ಲಿ ನಾವು ಯಾವುದನ್ನು ಸಹಜ ಗ್ರಹಿಕೆಯ ಕ್ರಮವೆಂದು - ಅದೂ ಸೃಜನಕಲೆಯನ್ನು ಗ್ರಹಿಸುವಾಗ - ಭಾವಿಸುತ್ತೇವೆಯೋ ಅಂಥ 'ಸಹಜತೆಯನ್ನೆ' ಸುಳ್ಳಾಗಿಸಲಾಗುತ್ತಿದೆ. ಚಿತ್ರವೊಂದರ ಚೌಕಟ್ಟನ್ನು ನೋಡನೋಡುತ್ತಲೇ ಅದು ಚಿತ್ರದ ಒಂದು ಭಾಗವೇ ಎಂದು ಅರಿತಾಗ ಆಗುವ ಗ್ರಹಣಪಲ್ಲಟದ ವಿಧಾನವಿದು.

ಕ್ಯಾಮೆರವನ್ನು ಅದರ ವೈಜ್ಞಾನಿಕ ಕಾರ್ಯಕ್ಷಮತೆಯಿಂದ ದೂರಗೊಳಿಸಿ ತೈಲಚಿತ್ರದೊಳಕ್ಕೆ ಸೆಳೆದುಕೊಂಡಾಗ ಇಂತಹ ಗ್ರಹಣ ಪಲ್ಲಟವೂ ತೀವ್ರಗೊಳ್ಳುತ್ತದೆ.

(೩) ಮೂರನೆಯ ಕಲಾತ್ಮಕ ತಂತ್ರವಾಗಿ ಶಿವಪ್ರಸಾದ್ ಕೆಲವು ದೃಶ್ಯಗಳನ್ನು ಪುನರ್ ವಿಂಗಡಿಸುತ್ತಾರೆ. ಇಲ್ಲವೇ ಅವರು ಒಂದೇ ಆವೃತ್ತಿಯನ್ನು ಅಲ್ಪಸ್ವಲ್ಪ ವ್ಯತ್ಯಾಸಗೊಳಿಸಿ ರಚಿಸುತ್ತಾರೆ. (ಜಲವರ್ಣದ ರಂಗಮ್ಮ ತೈಲವರ್ಣದ ರಂಗಮ್ಮಳಿಗಿಂತಲೂ ಭಿನ್ನವೆನಿಸುವಂತೆ) ಅಥವ ಒಂದು ನಿರ್ದಿಷ್ಟ ಕ್ಯಾನ್ವಾಸಿನ ಒಂದಷ್ಟು ಚಿತ್ರಗಳನ್ನೇ ರೂಪಾಂತರಿಸಿ ಬಿಡುತ್ತಾರೆ. ವರ್ಷಾಂತರಗಳಲ್ಲಿ ಕಣ್ಣಿಗೆ ಮತ್ತು ಸಾಮಾನ್ಯರ ಅಭಿರುಚಿಗೆ ಹೆಚ್ಚು ಹಿ ತವಾಗುವ ಸಪೂರ ಚಿತ್ರಣಕ್ರಮದಿಂದ ಒರಟಾದ ಉತ್ತಿ ಕೆತ್ತಿದಂತಹ ಥಿಕ್ ಇಂಪಾಸ್ಟೋ ತಂತ್ರಕ್ಕೆ ತಮ್ಮ ಚಿತ್ರಣ 'ಕ್ರಮ'ವನ್ನು ಬದಲಾಯಿಸಿದ್ದು, ಕೃತಿಯೊಳಗಿದ್ದ ಆಕಾರಗಳನ್ನು ಅಂತೆಯೇ ಉಳಿಸಿಕೊಂಡು, ಕೇವಲ ಅದರ ಆಯಾತಾಕಾರದ ಚೌಕಟ್ಟನ್ನು 'ಎತ್ತರ'ದಿಂದ 'ಅಗಲ'ಕ್ಕೆ ರೂಪಾಂತರಿಸಿದ್ದು, ತನ್ಮೂಲಕ ಒಳಗಿನ ಅದೇ ವ್ಯಕ್ತಿಯ ಬಗ್ಗೆ 'ಭಿನ್ನ ಗ್ರಹಿಕೆ'ಯನ್ನು ಸೃಜಿಸಿದ್ದು ನಿತ್ಯಜೀವನದಲ್ಲಿ ಒಮ್ಮೆ ನೋಡಿದರೆ



ನಾವು ಮತ್ತೆ ಮತ್ತೆ ನೋಡುವಂತೆ ಆಕಾರಾದಿ ನೆನಪುಗಳನ್ನು ಸೃಷ್ಟಿಸಿದ್ದು; ಒಂದೇ ದೃಶ್ಯವನ್ನು, ಅದರ ಪುನರ್-ಚಿತ್ರಣದ ಮೂಲಕ ಅದರ ಸಂಯೋಜನೆಯನ್ನು ಬದಲಾಯಿಸಿದ್ದು; ಮತ್ತು ಕೆಲವೊಮ್ಮೆ (ಉದಾಹರಣೆಗೆ ಪೊನ್ನಮ್ಮ ಒಂದೇ ಕ್ಯಾನ್ವಾಸಿನ ಸಂಯೋಜನೆಯನ್ನು ಅನೇಕ ವರ್ಷಗಳ ನಂತರ, ಅದರ ಕೆಲವೊಂದು ಅಂಶಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಭಿನ್ನವಾದ, ಭಾರತೀಯವೆನಿಸಿ ವೈಯಕ್ತಿಕವೆನಿಸುವ ಸಹಜ ನೈಜ' ದೃಶ್ಯಸರಣಿಗಳನ್ನು ರೂಪಿಸಿಕೊಟ್ಟ ಬಗೆಯೇ ಈ ರೂಪಾಂತರದ ಮುಖ್ಯ ಅಂಶಗಳು. ಈ ರೂಪಾಂತರವು ಒಂದು ನಿರ್ದಿಷ್ಟ ಉದ್ದೇಶದ ಸಾಧನೆಗಾಗಿ ಎಂದು ಈ ಮೊದಲೇ ಸೂಚಿಸಿದ್ದೇನೆ. ಈ ಕ್ರಮವು ದಶಕದಾದ್ಯಂತ ವ್ಯವಸ್ಥಿತವಾಗಿ ಮಾಡಿಕೊಳ್ಳಲಾದ ಯೋಜನೆಯೋ ಅಥವ ತಾನಾಗಿ ಬದಲಾವಣೆಗೊಂಡ ಅಪ್ರಜ್ಞ ನಿರ್ಮಿತಿಯೋ ಎಂದು ನಿರ್ಧರಿಸುವುದು ಕಷ್ಟದ ಕೆಲಸ. ಆದರೆ ಒಂದಂಶವಂತೂ ನಿಜ, ಶಿವಪ್ರಸಾದ್ ತಮ್ಮ ಜೀವನಕ್ರಮಕ್ಕೆ ಹೊಂದಿಸಿಕೊಳ್ಳುವ ಸಲುವಾಗಿ ಮಾರ್ಪಡಿಸಿದ ಸೃಜನಾತ್ಮಕ- ರೂಪಾಂತರವಿದು ಎಂಬ ವಿಷಯದಲ್ಲಿ ಯಾವುದೇ ಅನುಮಾನವಿರದು.

ಮೇಲಿನ ಅಂಶವನ್ನು ಮತ್ತೊಂದು ರೀತಿಯಲ್ಲಿ ಸ್ಪಷ್ಟಪಡಿಸಬಹುದು. ಇಲ್ಲಿಯವರೆಗೂ ನನ್ನ ಬರವಣಿಗೆಯ ಅಭ್ಯಾಸಬಲದಿಂದಲೋ ಏನೋ, ಹೆಚ್ಚಾಗಿ ಕೆಲವು ನಿರ್ದಿಷ್ಟ ಕೃತಿಗಳೊಳಗಿನ ಆಂತರೀಕ ವಿವರಗಳ ಮುಖಾಂತರವೇ ಅವುಗಳನ್ನು ಇತರ ಕಲಾಕೃತಿ ಸರಣಿ ಸಮೂಹಕ್ಕೆ ಸಂಕೇತವನ್ನಾಗಿ ಬಳಸಿಕೊಂಡು,

ಶಿವಪ್ರಸಾದರ ಸೃಜನಕ್ರಿಯೆಯ ಹಿಂದಿನ ಕೆಲವು ಮೂಲಭೂತ ಒತ್ತಡಗಳನ್ನು ಗುರ್ತಿಸಲು ಪ್ರಯತ್ನಿಸಿದ್ದೇನೆ. ಇನ್ನು ಮುಂದೆ ಈ ಅಭ್ಯಾಸದೊಂದಿಗೆ ಬೇರೊಂದು ರೀತಿಯಲ್ಲಿ ಶಿವಪ್ರಸಾದರ ಕೃತಿಗಳನ್ನು ಅರ್ಥೈಸಲು ನೆರವಾಗುವ ಸಾಂಸ್ಕೃತಿಕ ಸಂದರ್ಭದ ಮುಖಾಂತರವೂ ನನ್ನ ಪ್ರಯತ್ನವನ್ನು ಮುಂದುವರೆಸುತ್ತಿದ್ದೇನೆ. ಅರ್ಥಾತ್ ಈ ಕೃತಿಸರಣಿಯ ಅಭ್ಯಾಸಬಲವಾದ 'ವಸ್ತುನಿಷ್ಠ ದಾಖಲಾತಿ ಕ್ರಮದಿಂದ ಭಿನ್ನವಾಗಿ ಅರ್ಥೈಸುವ ಪ್ರಯತ್ನ ನನ್ನದು. ಯಾವುದೇ ಕಲಾವಿದನ ಬಗ್ಗೆ ಪರಿಚಯ ನೀಡುವ ಒಂದು ವಸ್ತುನಿಷ್ಠ ಕ್ರಮವೆಂಬುದು ಇರಲಾರದು. ಅಂತಹ ಪರಿಚಯಾವಳಿಯು ಬರಹಗಾರನ ಒಂದು ಇಚ್ಛಿತ 'ನಿರ್ಮಿತಿ' ಎಂಬುದೇ ಈ ಬರಹದ ಮುಖ್ಯ ಹಿನ್ನೆಲೆ ಕೂಡ.

೬

ಶಿವಪ್ರಸಾದರ ಈವರೆಗಿನ ಕೃತಿಗಳನ್ನು ಅರ್ಥೈಸಲು ಒಂದು ಲಿಖಿತ ನಿರ್ಮಿತಿಯ ಅಗತ್ಯವಿದೆ. ಅಕಾಡೆಮಿಕ್ ಶಿಸ್ತಿಗೆ ವಿರೋಧಿಯಾಗಿ ಮೊದಲ ನೋಟಕ್ಕೆ ಕಂಡುಬರುವ ಈ ಲಿಖಿತ ನಿರ್ಮಿತಿಯು ನಿಜವಾಗಿಯೂ ಒಂದು ಬಗೆಯ ಅಕಾಡೆಮಿಕ್ ಶಿಸ್ತೇನೇ, ದೃಶ್ಯಕಲೆಯನ್ನು ಕುರಿತ ಒಂದು ಶೈಕ್ಷಣಿಕ ಶಿಸ್ತಿನ ಬರಹದ ದ್ರವ್ಯ ಇಲ್ಲದಿರುವುದರಿಂದಲೇ, ಕರ್ನಾಟಕವೇ ಏಕೆ ಸಮಗ್ರ ಭಾರತದ ದೃಶ್ಯ ಕಲಾಚರಿತ್ರೆಯೆಂಬುದು ಗರಿಷ್ಠ ಪಕ್ಷ ಆಯ್ದ ಕೆಲವರ, ಕೆಲವು ಪಂಥಗಳ 'ಹೀರಾಯಿಕ್ ನರೇಟಿವ್' ಆಗಿರುವುದು. ಆದ್ದರಿಂದಲೇ ಶಿವಪ್ರಸಾದ್‌ನ್ನು ಅರ್ಥ ಮಾಡಿಕೊಳ್ಳಲು ಈ ಮೇಲಿನ ಎಚ್ಚರದೊಂದಿಗೆ, ಸಿನಿಮಾ ಭಾಷೆಯನ್ನು ಬಳಸಿ ಹೇಳುವುದಾದರೆ 'ಲಾಂಗ್ ಶಾಟ್' ಮತ್ತು 'ಕ್ಲೋಸಪ್'ನ ಸಮನ್ವಯದ ಅಗತ್ಯವಿದೆ. ಸ್ವತಃ ಕಲಾತ್ಮಕ-ಛಾಯಾಗ್ರಹಣದ ಶಿಸ್ತನ್ನು ರೂಢಿಸಿಕೊಂಡಿರುವ ಇವರು, ಇದನ್ನು ಅನುಮೋದಿಸಿಯಾರು.

ಶಿವಪ್ರಸಾದರ ಕೃತಿಸಮೂಹದ ಒಟ್ಟಾರೆ ಮಾಪನ ತೆಗೆದುಕೊಂಡರೆ, ಅಲ್ಲಿ, ತೀರ ಇತ್ತೀಚಿನ ವರ್ಷಗಳಲ್ಲಿ ಮೂರನೆಯ ಹಂತದ ಕಲಾಕೃತಿಗಳಲ್ಲಿ ಅತಿ ವೇಗದ ಬದಲಾವಣೆಗಳು ಕಂಡುಬರುತ್ತವೆ. ಇಲ್ಲಿಯವರೆಗಿನ ಇವರ ಕೃತಿಗಳ ಪದರೂಪದ ವಿವರವನ್ನು ಆಧರಿಸಿ, ಇವುಗಳನ್ನು ಒಂದು ಕಥನದಂತೆ ವಾಚಿಸುವುದಾದರೆ ಇವುಗಳ ಸಪೂರ ಚಿತ್ರಣ ಶೈಲಿಯಿಂದ ಒರಟು ಶೈಲಿಗೆ ಬದಲಾದ ಘಟ್ಟವು ಅತ್ಯಂತ ಮಹತ್ವ ಪೂರ್ಣವಾದುದು. ಮೊದಲಿಗೆ, ಅವುಗಳ ಮೇಲ್ಪದರದ ದೃಶ್ಯಾಕರ್ಷಣೆಯ ಶಕ್ತಿ ಕ್ಷೀಣಗೊಂಡಿತು. ಈ ಅಂಶವು ಕೃತಿಗಳ ಆಂತರಿಕ ತರ್ಕಕ್ಕೆ ಯಾವುದೇ ಊನ ಮಾಡದಿದ್ದರೂ ಸಹ ಮೇಲ್ಪದರದ ಇಂದ್ರಿಯಗೋಚರ 'ಆಕರ್ಷಕ' ಗುಣವೇ ಪ್ರಧಾನ ಪಾತ್ರವಹಿಸುತ್ತದೆ. ಅಂದರೆ ಇದೇ ಕಾರಣಕ್ಕಾಗಿ ಇವರ ಇತ್ತೀಚಿನ ಕಲಾಕೃತಿಗಳಿಗೆ ಕಲೆಯ ಮಾರುಕಟ್ಟೆಯಲ್ಲಿ ಪೆಟ್ಟುಬೀಳುವ ಸಾಧ್ಯತೆ ಇತ್ತು. ಮುಂಬಯಿಯಲ್ಲಿ ಹಲವು ವರ್ಷಗಳ ಕಾಲ ಕಲಾವಿದರು,

ಕಲಾಸಂಗ್ರಹಕಾರರೊಂದಿಗೆ ಒಡನಾಡಿದ್ದ ಶಿವಪ್ರಸಾದರಿಗೆ ಇದು ತಿಳಿಯದಿದ್ದ ವಿಷಯವೇನಲ್ಲ. ಜೊತೆಗೆ ಇವರು ಇಂಪಾಷ್ಟೋ ತಂತ್ರ ಬಳಸತೊಡಗಿದ್ದರಿಂದ ಕಲಾಸಾಮಗ್ರಿ, ಬಣ್ಣ, ಸಮಯದ ವೆಚ್ಚವೂ ದ್ವಿಗುಣಗೊಂಡದ್ದಿದೆ. ಕಲಾವಸ್ತುಗಳ ರಸಾಯನಶಾಸ್ತ್ರವು ಖಂಡಿತವಾಗಿಯೂ ಅದರ ಸೃಜನಾತ್ಮಕ ಆಯಾಮವನ್ನು ಪ್ರಭಾವಿಸುವುದಿದೆ. ಎಷ್ಟೋ ಬಾರಿ ದಟ್ಟ ಬಣ್ಣ ಬಳೆದ ಮೂರು ದಿನಗಳ ನಂತರ ಹೆಬ್ಬೆಟ್ಟಿನಿಂದ ಶಿವಪ್ರಸಾದ್ ಬಣ್ಣಗಳನ್ನು ಇಂಚುಗಳಷ್ಟು ದೂರ ಆಚೆ ಈಚೆ ಸರಿಸಿ ವ್ಯತ್ಯಸ್ಥಗೊಳಿಸಿದ್ದಿದೆ. ಇಂಪಾಷ್ಟೋ ತಂತ್ರದಿಂದಾಗಿ ಇವರ ಕೃತಿಗಳಲ್ಲಿ ಒಂದು ನಿರಂತರವಾದ "ವೀಕ್ಷಣಾ-ಪಲ್ಲಟ' ಉಂಟಾಯಿತು. ಮುಂಚಿನ ಸಪೂರ ಚಿತ್ರಗಳಲ್ಲಿದ್ದಂತಲ್ಲದೆ ಇವುಗಳನ್ನು ತೀರ ಹತ್ತಿರದಿಂದ ಮತ್ತು ದೂರದಿಂದ ನೋಡಿದಾಗ ಎರಡು ಪರಸ್ಪರ 'ಭಿನ್ನ' ಅನುಭವಗಳನ್ನೇ ನೀಡುತ್ತವೆ. ಅಂದರೆ ಉಬ್ಬುಶಿಲ್ಪದ ಗುಣ ಈ ಕ್ಯಾನ್ವಾಸುಗಳಿಗಿವೆ. ಬೆಳಕಿನ ದಿಕ್ಕನಾಧರಿಸಿ ಸುಮಾರು ಅರ್ಧ ಇಂಚಿನಷ್ಟು ಹೊರಚಾಚಿರುವ ವರ್ಣಮೇಳದ ನೆರಳು ನಿರಂತರ ಮಾರ್ಪಟ್ಟು, ಮತ್ತೊಂದು ರೀತಿಯ ವರ್ಣಸಂಕರಕ್ಕೂ ದಾರಿಮಾಡಿಕೊಡುತ್ತವೆ. ಉದಾಹರಣೆಗೆ, ಹಳದಿ ಬಣ್ಣದ ಉಬ್ಬಿನ ಬಣ್ಣದ ಪ್ರದೇಶದ ನೆರಳು ನೀಲವರ್ಣದ ಸಪೂರ ಹಿನ್ನೆಲೆಯ ಮೇಲೆ ಬಿದ್ದಾಗ ಅಲ್ಲಿ ಕಂಡುಬರುವುದು ಕೇವಲ ಹಸಿರು ಬಣ್ಣದ ನೆರಳಲ್ಲ. ಅದರೊಂದಿಗೆ ಸ್ವಲ್ಪ ಹಳದಿಯ ಪ್ರತಿಫಲನವೂ ಸೇರಿದ್ದು ಹಳದಿಯು ನೀಲಿಯೊಂದಿಗೆ ಬೆರೆತು ಹಸಿರಿನ ವರ್ಣಛಾಯೆಗಳಾಗಿರುವುದು (ಟೋನ್ಸ್) ದೂರಕ್ಕೆ ಕಂಡು ಬರುತ್ತವೆ. ಸ್ವತಃ ಬಣ್ಣದ ಪ್ರದೇಶಗಳಾಗಿರುವುದು ಮತ್ತು ಉಬ್ಬುಗೆತ್ತನೆಯಂತಿರುವುದರಿಂದ ತನ್ನ ಮೇಲೆ ಬೀಳುವ ಸಹಜ/ಕೃತಕ ಬೆಳಕನ್ನಾಧರಿಸಿ ಉಂಟಾಗುವ ಅನೈಚ್ಛಿಕ ನೆರಳುಗಳನ್ನು ತನ್ನ ಚಿತ್ರ ಮೈದಾನದ' (ಪಿಕ್ಚರ್ ಫೀಲ್ಡ್) ಅನಿವಾರ್ಯ ಅಂಗವನ್ನಾಗಿಸಿಕೊಳ್ಳುವುದು ಈ ಇಂಪಾಷ್ಟೋ ತಂತ್ರದ ಮೂಲಭೂತ ಲಕ್ಷಣ. ಮುಂದೆ ಓದುವಾಗ, ಶಿವಪ್ರಸಾದರ ಇತ್ತೀಚಿನ ಕೃತಿಗಳು ಹೇಗೆ 'ವರ್ಣದ ಅಂಗಳ'ಗಳಾಗುತ್ತವೆಂದು ಸೂಚಿಸುವಾಗ ಈ ಮೇಲಿನ ವಿವರಗಳನ್ನು ನೆನಪಿಗೆ ತಂದುಕೊಳ್ಳಬೇಕಾಗುತ್ತದೆ. ಅದು ನಂತರದ ಮಾತು.

೬

ಸಪೂರ ಇಂಪಾಸ್ಟೋ ತಂತ್ರಕ್ಕೆ ಶಿವಪ್ರಸಾದರ ಚಿತ್ರಣ ಶೈಲಿಯು ಬದಲಾದಾಗ ತಾವಿಚ್ಛಿಸದ ಬೆಳಕಿನಾಟವನ್ನೂ ಕ್ಯಾನ್ವಾಸಿನೊಳಗಿನ ಜಗತ್ತು ಸ್ವೀಕರಿಸಬೇಕಾಗಿ ಬಂದುದು ಒಂದು ಅನಿವಾರ್ಯ ಸಂಗತಿಯಾಗಿತ್ತು. ಕಲಾ ಇತಿಹಾಸದ ಲೆಕ್ಕದಲ್ಲಿ ತೈಲವರ್ಣದ ತಾತ್ವಿಕ ಅಂತ್ಯದ ನಂತರ, ಅದರ ನಿಶ್ಚಿತ ಸೌಂದರ್ಯಶಾಸ್ತ್ರೀಯ ಮಿತಿ ಮೀರಿದಾಗ ಆರಂಭಗೊಳ್ಳುವ ಕಲಾಪ್ರಕಾರದ ಗುಣಲಕ್ಷಣವಿದು. ಆದರೆ ಆ ಲಕ್ಷಣವು, ಶಿವಪ್ರಸಾದರ ಕೃತಿಗಳ ತೈಲವರ್ಣವೆಂಬ ಶಿಷ್ಟ ಮಾಧ್ಯಮದೊಳಗೇ ಕಂಡುಬರುವುದೊಂದು ವಿಶೇಷ. ಇವೆಲ್ಲವನ್ನೂ ಮುಂದೆ ವಿವರಿಸಲಾಗಿದೆ. ಇಲ್ಲಿ "ಹುಲಿಚಿತ್ರ"ದ ಹುಲಿ ಮಾನವನನ್ನು ಮತ್ತೆ ನಾವು ನೆನಪು ಮಾಡಿಕೊಳ್ಳುವುದು ಅತ್ಯಗತ್ಯವಾಗಿದೆ. ಇಂಪಾಲ್ಟೊ ತಂತ್ರದಲ್ಲಿ ರಚಿಸಲಾದ ಕೆಲವು ಆಕೃತಿಗಳು ಒಂದು ಗೋಡೆಯ ಮೇಲೆ ರಚಿಸಲಾದಂತಿರುತ್ತವೆ ಎಂಬ ಒಂದು ಉಪಮೆಯನ್ನು ಈ ಹಿಂದೆ ಸೂಚಿಸಿದ್ದೇನೆ. ಇಂಪಾಷ್ಟೋ ತಂತ್ರದಲ್ಲಿಯೇ ರಚಿಸಲಾಗಿರುವ 'ಹುಲಿವೇಷದವನ ಚಿತ್ರದಲ್ಲಿ ಈ ಅಂಶವು ಸ್ಪಷ್ಟ. ಹುಲಿವೇಷದವನು ಹಳದಿ ಏಕವರ್ಣಿಯ

ತೈಲಚಿತ್ರದ ಉಬ್ಬುಗೆತ್ತನೆಯ ಮೇಲೆ ಚಿತ್ರಿಸಿದಂತಿದ್ದಾನೆ. ಆತನ ಮುಖದ ಸಮೀಪದೃಷ್ಟಿ ಇದನ್ನು ಸ್ಪಷ್ಟಪಡಿಸುತ್ತದೆ. ಆತನನ್ನು 'ಅರ್ಥ' ಮಾಡಿಕೊಳ್ಳುವ ದೃಷ್ಟಿಯಿಂದ ಗ್ರಹಿಸುವುದಾದರೆ ಹುಲಿವೇಷವು ಆತನಿಗೆ ಒಂದು ಅಂಗಿಯಂತಹ ಮೈಮೇಲಿನ 'ಹೊದಿಕೆ'ಯಲ್ಲ. ಬದಲಿಗೆ ಅದು ಆತನ ಚರ್ಮಕ್ಕೇ ಅಂಟಿಕೊಂಡ ಎರಡನೇ ಚರ್ಮ. ಆತನನ್ನು ನಿರೂಪಿಸುವ ತೈಲವರ್ಣವು ಮೂರನೆಯ ಚರ್ಮವೆಂದುಕೊಳ್ಳೋಣ. ಏಕೆಂದರೆ ಆತ ಚಿತ್ರ ಚೌಕಟ್ಟಿನೊಳಗಿರುವ ಎಲ್ಲ ವಸ್ತು-ಆಕಾರಗಳಿಗಿಂತಲೂ ನಮಗೆ ಸಮೀಪದಲ್ಲಿದ್ದಾನೆ. ಆದ್ದರಿಂದ ತನ್ನ ಹಿಂದಿರುವ ವರ್ಣಮಯ ದೃಶ್ಯಪರದೆ, ನಮ್ಮ ಮತ್ತು ವೀಕ್ಷಕರ ನಡುವಿನ ಕಾಣದ ಪರದೆಯನ್ನು ಹರಿದು ಹಾಕಲು ಪ್ರಯತ್ನಿಸುತ್ತಿದ್ದಾನೆ. ಹಿನ್ನೆಲೆಯು ತೈಲವರ್ಣಮಯವಾಗಿರುವುದು ಆತನ ಏಕವರ್ಣಿಯತೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಆತನನ್ನೂ ಕಟೌಟ್ ಎನ್ನಿಸುವಂತೆ ಚಿತ್ರಿಸಲಾಗಿದೆ. ಹಿನ್ನೆಲೆ ಮತ್ತು ವೀಕ್ಷಕರ ನಡುವಿನ ಅಗೋಚರ ಪರದೆಯನ್ನು ಹರಿಯುವ ಆತನ ಪ್ರಯತ್ನಕ್ಕೆ ಎರಡು ಕಾರಣಗಳಿವೆ. ಒಂದು: ಪರದೆ ಸರಿಸಿ ವೀಕ್ಷಕನನ್ನು ಚಿತ್ರಜಗತ್ತಿನೊಳಕ್ಕೆ ಎಳೆದುಕೊಳ್ಳುವ ಯತ್ನ ಅಥವಾ/ಮತ್ತು ಎರಡು: ಸ್ವತಃ ಆತನೇ ಚಿತ್ರಜಗತ್ತಿನಿಂದ ನೈಜಜಗತ್ತಿಗೆ ಧುಮುಕಿಬಿಡುವ ಹುನ್ನಾರು.

ಕೆ.ಟಿ. ಶಿವಪ್ರಸಾದ್/೧೭

ಶುದ್ಧ ಭಾರತೀಯ/ಕನ್ನಡದ ಜನಸಾಮಾನ್ಯರ ಅನುಭವವೊಂದನ್ನು ಬಳಸಿ ಹೇಳುವುದಾದರೆ ಶಿವಪ್ರಸಾದ್ ಈ ಹಂತದ ಪ್ರತಿ ಕಲಾಕೃತಿಯಲ್ಲಿಯೂ ಕಂಡುಬರುವ ಒಂದು ಅಥವ ಎರಡು ಮಾನವಾಕಾರಗಳು ಬಯಲು ನಾಟಕಗಳ 'ಸೂತ್ರಧಾರ'ನಂತಹ ಪಾತ್ರವನ್ನು ವಹಿಸುತ್ತವೆ. ಕಣ್ಣಿಗೆ ಅವು ಮಾರ್ಗದರ್ಶಿಯಾಗಿರುತ್ತವೆ. ರೂಢಿಗತ ಅರ್ಥದಲ್ಲಿ ನಾಟಕವೊಂದರಲ್ಲಿ ಸೂತ್ರದಾರನ ಸ್ವಗತಗಳಿಗೆ (ಸಾಲಿಲೋಕ್) ವಿಶೇಷ ಅರ್ಥವಿರುತ್ತದೆ. ಆತ ನಾಟಕದ ಆಂತರ್ಯದ ಕಥನದಲ್ಲಿ ಕರಗಿಹೋಗುವುದಿಲ್ಲ. ಆಗಾಗ ವೀಕ್ಷಕನನ್ನು ನಾಟಕದ ಓಟದ ಕಡೆಗೆ, ಅದರ 'ನೈಜ'ವೆನಿಸುವ ಮಾಯಾಗುಣದ ಬಗ್ಗೆ ನಮಗೆ ತಿಳಿಹೇಳುತ್ತ, ಅದೇ ಕ್ಷಣದಲ್ಲಿ ಕಲೆಯ ಭ್ರಮಾತ್ಮಕ ಲೋಕದಿಂದ ಹೊರಕ್ಕೆಳೆಯುತ್ತಿರುತ್ತಾನೆ. ನೈಜ ನಾಟಕದೊಳಗಿನ ಪಾತ್ರಧಾರಿಗಳಿಗಿರುವ ಕಾಲದೇಶದ ಬಂಧನ 'ಸೂತ್ರಧಾರ'ನಿಗಿಲ್ಲ. ಒಂದರ್ಥದಲ್ಲಿ 'ಮಾತೇ ಜ್ಯೋತಿರ್ಲಿಂಗ'ವಾಗಿರುವ ನಮ್ಮ ಲಿಖಿತ ಹಾಗೂ ವಾಚ್ಯ ಸಂದರ್ಭದಲ್ಲಿ ಅವಾಚ್ಯ ಗುಣದ ದೃಶ್ಯಕಲೆಗಳಿಗೆ ಮಾರ್ಗಸೂಚಿಯೊಂದರ/ಯೊಬ್ಬನ ಅವಶ್ಯಕತೆ ಎಂದಿನಿಂದಲೂ ಇದ್ದುದ್ದೇ. ಮಾತು ಅಭಿನಯ, ದೃಶ್ಯ ಎಲ್ಲವೂ ಆಗಿರುವ ಸೂತ್ರಧಾರನು, ಸಾಹಿತ್ಯವು ಎಲ್ಲೆಲ್ಲಿ ದೃಶ್ಯಕಲೆಯನ್ನು ಗ್ರಹಿಸಲು ಸೋತಿತೋ ಅಲ್ಲೆಲ್ಲಾ ಮೈದಾಳಿ ಬಂದಿರಬೇಕು. ಪ್ರಭಾವಕಾರಿ ಅಭಿವ್ಯಕ್ತಿ ಮಾಧ್ಯಮವೊಂದರ ಬಾಹುಳ್ಯವಿದ್ದಾಗ್ಯೂ ಅವು ನಿರ್ವಹಿಸಲಾಗದ ಕರ್ತವ್ಯಗಳನ್ನು ಇನ್ನಿತರ ನಿಕೃಷ್ಟ ಮಾಧ್ಯಮಗಳು ಪೂರೈಸಲು, ಆಂತರೀಕವಾಗಿಯೇ ಕೆಲವು ಉಪಾಯಗಳನ್ನು ಕಂಡುಕೊಳ್ಳುತ್ತವೆ. ಸಾಹಿತ್ಯದ ಬಾಹುಳ್ಯವಿರುವ ನಮ್ಮ ಸಂದರ್ಭದಲ್ಲಿ 'ಸೂತ್ರಧಾರ'ನ ವ್ಯಕ್ತಿತ್ವವು ಮೂಡಿಬರಲು ಈ ಹಿನ್ನೆಲೆ ಒಂದು ಬಲವಾದ ಕಾರಣ.

ಶಿವಪ್ರಸಾದ್ ಬೇರೊಂದು ಕಾರಣಕ್ಕಾಗಿ ತಮ್ಮ ಅಭಿನಯರಹಿತ ದೃಶ್ಯ ಮಾಧ್ಯಮ'ದಲ್ಲಿ (ಇದನ್ನು 'ನಾನ್ ಪರ್ಫಾರ್ಮಿಂಗ್ ವಿಜ್ಯುಯಲ್ ಆರ್ಟ್ಸ್' ಎನ್ನುತ್ತೇವೆ.) ಸೂತ್ರಧಾರ ವ್ಯಕ್ತಿತ್ವವನ್ನು ಅನೇಕ ಸಲ ರೂಪಿಸುತ್ತಾರೆ. ಈಗಾಗಲೇ ನಾನು ವಿವರಿಸಿರುವುದನ್ನು ಮತ್ತೆ ನೆನಪಿಸುವುದಾದರೆ, ಈ ಮೂರನೆಯ ಹಂತದ ಅವರ ಆಕಾರಗಳು ಥಿಕ್ ಇಂಪಾಸ್ಟೋ ತಂತ್ರದ್ದು. ಅಂದರೆ, "ಹುಲಿಚಿತ್ರ"ದ ಮುಖದಲ್ಲಿ ಕಾಣುವಂತೆ, ಆತನ ಮುಖದ ಚಿತ್ರವನ್ನು ಹಳದಿ ತೈಲವರ್ಣದ ಮೆತ್ತನೆಯ 'ಮೇಲೆ' ಬರೆದಂತಿದೆ -- ಗ್ರಾಫಿಟಿ ಚಿತ್ರಗಳಲ್ಲಿರುವಂತೆ (ಗೋಡೆ ಬರಹಗಳಂತೆ). ಆತನ ಮೈಮೇಲಿನ ಪಟ್ಟೆಗಳನ್ನು ಶಿವಪ್ರಸಾದ್ ಬಳಿಯುವಾಗ ಒಂದು ಅಪರೂಪದ - ಸಾಮಾನ್ಯವಾಗಿ ಕಲಾವಿದರು ಹೆಚ್ಚು ತಲೆಕೆಡಿಸಿಕೊಳ್ಳುವ, ಆದರೆ ನಮ್ಮ ಕಲಾ ಇತಿಹಾಸಕಾರರನ್ನು ಹೆಚ್ಚು ಬಾಧಿಸದ - ಪ್ರಸಂಗ ಉಂಟಾಗುತ್ತದೆ. ಹುಲಿವೇಷದವನ ರೇಖಾಚಿತ್ರವನ್ನು ಮೊದಲು ರಚಿಸಿ ನಂತರ ಅದರೊಳಕ್ಕೆ ಹುಲಿವೇಷದವನ 'ಚರ್ಮ'ವನ್ನು ಬಳಿಯಲಾಯಿತೇ? "ಚರ್ಮವನ್ನು ಬಳಿಯಲಾಯಿತೇ' ಎಂದು ಕೇಳುವಾಗ, ಇಂತಹ ಸಂದರ್ಭವನ್ನು ವಿವರಿಸುವಾಗಿನ ಕನ್ನಡ ಭಾಷೆಯ ದೋಷ ಹಾಗೂ ಸಂಕಷ್ಟ ಮತ್ತೊಮ್ಮೆವ್ಯಕ್ತವಾಗುತ್ತದೆ. ಆದರೆ ಈ ದೋಷಯುಕ್ತ ವಾಕ್ಯದಲ್ಲಿಯೂ ಅರ್ಥವಿಲ್ಲದೇ ಇಲ್ಲ. ಹುಲಿವೇಷದ ವ್ಯಕ್ತಿಯ ನಿಜಚರ್ಮದ 'ಮೇಲೆ', ಹುಲಿಚರ್ಮದ ದೃಶ್ಯ ಮೂಡಿಸಲು ಬಣ್ಣವನ್ನು ಉಪಯೋಗಿಸಲಾಗಿದೆ ಎಂದು ಈ ಕೃತಿಗೆ ಆಧಾರವಾದ, ಶಿವಪ್ರಸಾದರೇ ಸೆರೆಹಿಡಿದ ಫೋಟೋಗಳಿಂದ ಹೇಳಬಹುದು. ಆದರೆ ಅದನ್ನು ಒಂದು ಶಾಸ್ತ್ರೀಯ ಅರ್ಥದಲ್ಲಿ ಪೈಂಟಿಂಗ್ ಆಗಿ ರೂಪಾಂತರಿಸುವಾಗ "ಕಲಾವಿದ 'ಚರ್ಮ'ದ ದೃಶ್ಯರೂಪವನ್ನು ಬಳಿದರು" ಎಂಬುದು ಅರ್ಥಮಾಡಿಕೊಳ್ಳಲು ಸ್ವಲ್ಪ ತೊಡಕಿನ ಪದಪುಂಜ, ಕಲಾತ್ಮಕ ಚಟುವಟಿಕೆಯ ಅಪರೂಪದ ಗುಣ ಮತ್ತು ಈ ಕಲಾವಿದ ಕೃತಿ ರಚಿಸುವ ವಿಧಾನದಿಂದಾಗಿ ಇಂತಹ ತೊಡರು ಉಂಟಾಗಿದೆ. ಸಾಮಾನ್ಯವಾಗಿ ನೈಜವೆನ್ನಿಸುವ ಚಿತ್ರವೊಂದು ಮೂಡುವುದು ಹಲವಾರು ಹಂತಗಳಲ್ಲಿ, ಚಿತ್ರಿಸಲಾಗಿರುವ ತೆಳು ತೈಲವರ್ಣದ ಹಲವು ಪದರಗಳಿಂದ. ಕ್ಲಾಸಿಕಲ್ ಅರ್ಥದ ಮಾತಿದು. ಅಂದರೆ ಕ್ಯಾನ್ವಾಸಿನ ಚೌಕಟ್ಟಿನ ಪ್ರತಿ ಇಂಚಿಂಚೂ ಕ್ರಮೇಣ ಮೂಡಿಬರುತ್ತದೆ. ಅಂತಲ್ಲಿ ಕಂಡುಬರುವ ಮನುಷ್ಯಾಕಾರ ಮತ್ತು ಅದರ ಹಿನ್ನೆಲೆಯ ವಿವರಗಳು ಪರಸ್ಪರ ಗಾಢವಾದ ಸಂಬಂಧದೊಂದಿಗೆ ಮೂಡಿ ಬಂದಿರುತ್ತವೆ. ಇಂಗ್ಲೆಂಡಿನ ಜೊಷ್ವಾ ರೆನಾಲ್ಡ್, ಗೇನ್ಸ್ ಬರೋರ ಪ್ರಸಿದ್ಧ ಸೌಂದರ್ಯಶಾಸ್ತ್ರೀಯ ವಾಗ್ವಾದವು ಇದಕ್ಕೊಂದು ಅತ್ಯುತ್ತಮ ಉದಾಹರಣೆ. 'ನೀಲಿ ಬಣ್ಣವನ್ನು ಹಿನ್ನೆಲೆಯಲ್ಲಿ ಮಾತ್ರ ಬಳಸಬೇಕೆಂದು, ಮುನ್ನೆಲೆಯಲ್ಲಿ ಅದು ನಿಷಿದ್ಧವೆಂದೂ' ಹೆಚ್ಚು ವೈಚಾರಿಕತೆಯ ಪಕ್ಷಪಾತಿಯಾದ ರೆನಾಲ್ಡ್ ಹೇಳಿದಾಗ ಆತನಿಗೆ ಸಡ್ಡು ಹೊಡೆದ ಗೇನ್ಸ್ ಬರೋ "ಬಾಯ್ ಇನ್ ಬ್ಲೂ ಜಾಕೆಟ್" ಎಂಬ ಕೃತಿ ರಚಿಸಿ, ನೀಲಿ ಬಣ್ಣವು ಮುನ್ನೆಲೆಯಲ್ಲಿಯೂ ಸಲ್ಲುತ್ತದೆಂದು ಸಾಧಿಸಿದ. ಇಬ್ಬರ ಕಲಹದ ಉದ್ದೇಶ ಮತ್ತು ಫಲಿತಾಂಶಗಳೇನೇ ಇರಲಿ, ಈ ಘಟನೆಯು ಪಾಶ್ಚಾತ್ಯ ಅರ್ಥದಲ್ಲಿ ನೈಜಕಲೆಯ ಸಂದರ್ಭದಲ್ಲಿ

ಆಕಾರ-ಹಿನ್ನೆಲೆಗಳ ಅನಿವಾರ್ಯ ಕೊಂಡಿಯ ಬಗ್ಗೆ ಒತ್ತು ನೀಡುತ್ತದೆ. ಶಿವಪ್ರಸಾದ್ ಚಿತ್ರರಚಿಸುವ ವಿಧಾನವು ಈ ನೈಜತೆಯ ತಾರ್ಕಿಕತೆಯನ್ನು ನಿರಾಕರಿಸುತ್ತದೆ. ತನ್ಮೂಲಕ ಅದರ ಅಧಿಪತ್ಯವನ್ನು ಮುರಿಯುತ್ತದೆ.

ಹುಲಿವೇಷದವನು ರೇಖಾಚಿತ್ರದೊಳಕ್ಕೆ ಹಳದಿ ಬಣ್ಣವನ್ನು ತುಂಬುವಾಗ, ಅದು ಸಂಪೂರ್ಣಗೊಂಡಾಗಲೂ ಅದರ ಸುತ್ತಲಿನ ಕ್ಯಾನ್ವಾಸ್ ಬಿಳಿಯದಾಗಿದೆಯೇ, ಅಪೂರ್ಣವಾಗಿ ಇರುತ್ತದೆ. ಸಂಕ್ಷಿಪ್ತಗೊಳಿಸಿ ಹೇಳುವುದಾದರೆ, ಬೈಂಜಟಿನ್ ಭಿತ್ತಿಚಿತ್ರ ಜೋಡಣೆಯ ಕ್ರಮವನ್ನು ಈ ಕ್ರಮವು ಹೆಚ್ಚು ನೆನಪಿಸುತ್ತದೆ. ಅಲ್ಲಿ ಬಣ್ಣದ ಕಲ್ಲುಗಳನ್ನು (ಇದನ್ನು 'ಥೆಸ್ಸೇ' ಎನ್ನುತ್ತಾರೆ) ಒಂದರ ಪಕ್ಕದಲ್ಲಿ ಒಂದನ್ನು ಒದ್ದೆ ಗಾರೆಗೆ ಒತ್ತುವಾಗ, ಅದೊಂದು ತಾಂತ್ರಿಕ ಅನಿವಾರ್ಯತೆಯಾಗಿತ್ತು, ಆಧುನಿಕ ಕಲಾವಿದ ಹೆನ್ರಿ ಮಥಿಸ್ ಇದರಿಂದ ಪ್ರಭಾವಗೊಂಡಾಗಲೂ ಭಿತ್ತಿಚಿತ್ರ ಪರಂಪರೆಯ ಒಳಗಿನಿಂದಲೇ ಆ ತಂತ್ರಗಾರಿಕೆಯ ಏಸ್ತೆಟಿಕ್ ಅನ್ನು ಸ್ವೀಕರಿಸಿದರು. ಆದರೆ ಶಿವಪ್ರಸಾದರಿಗೆ ಇದೊಂದು ಹೊಸಬಗೆಯ ಪ್ರತಿಮಾ ನಿರ್ಮಾಣದ ಅನಿವಾರ್ಯ ತಂತ್ರವಾಯಿತು. ಇದನ್ನೆ ಈ ಹಿಂದೆ 'ನಾಟಕದ ಆತಕ್ಕೆ ಸೇರಿಯೂ ಹೊರಗುಳಿಯಬಲ್ಲ, ನಾಟಕಕ್ಕೂ ಪ್ರೇಕ್ಷಕನಿಗೂ ನಡುವೆ ಪುನರಾವರ್ತಿತ ಸಂಬಂಧಗಳನ್ನು ರೂಢಿಸಬಲ್ಲ' ಸೂತ್ರಧಾರನೊಂದಿಗೆ ಹೋಲಿಸಿದ್ದು, ಮತ್ತು ಈ ಹೋಲಿಕೆಯು ಕೇವಲ 'ಸಂಕೇತ'ಗಳ ಮಟ್ಟದಲ್ಲೇ ಉಳಿದುಬಿಡುವುದಿಲ್ಲ ಎಂಬುದನ್ನು ಗಮನಿಸಬೇಕು.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಶಿವಪ್ರಸಾದರ ಇತ್ತೀಚಿನ ಕೃತಿಗಳೊಳಗಿನ ಆಕಾರಗಳ ಮುಖೇನವೇ ಅವರ ಹಿಂದಿನ ಕೃತಿಸರಣಿಗಳನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಿದೆ. ಸಪೂರವಾಗಿದ್ದ ಅವರ ಚಿತ್ರಣಶೈಲಿಯು - ಆರ್ಥಿಕ ಮತ್ತು ಸೌಂದರ್ಯಾತ್ಮಕ ಅನುಕೂಲಗಳನ್ನು ಬದಿಗಿರಿಸಿಯೇ ಥಿಕ್ ಇಂಪಾಸ್ಟೋ ತಂತ್ರಕ್ಕೆ ಬದಲಾದಾಗಲೇ ಮೂಲಭೂತ ರೂಪಾಂತರ ಹೊಂದಿದ್ದು, ಅವರ ಚಿತ್ರಿತ ಮನುಷ್ಯಾಕಾರಗಳಲ್ಲಿಯೂ "ಹುಲಿಚಿತ್ರ"ವನ್ನು ಉದಾಹರಣೆಯನ್ನಾಗಿಸಿಕೊಂಡು, ಮತ್ತು ನೆಪಮಾಡಿಕೊಂಡು ವಿವರಿಸಲಾಗಿರುವ ಗುಣಲಕ್ಷಣಗಳೆಲ್ಲ - ಸಹಜವಾಗಿ ಇವರ ಕೃತಿಗಳಲ್ಲಿಯೂ ಕಂಡುಬರುವಂತಹವು. ಮೊದಲ ಹಂತದ ಕೃತಿಗಳಲ್ಲಿ ಈ ಆಕಾರಗಳು ತಮ್ಮ ಹಿನ್ನೆಲೆಯಲ್ಲಿ ಮೂಡಿರುವ 'ಚಿತ್ರಿತ ಹಿನ್ನೆಲೆಯ ಜಗತ್ತಿಗೆ ಸೇರಿದವು. ಆದರೆ ಕ್ರಮೇಣ, ಚಿತ್ರಣಶೈಲಿಯ ಬದಲಾವಣೆಯಿಂದಾಗಿ, ಅಂತಹ ಬದಲಾವಣೆಯೂ ಕಣ್ಣಿನ ವೀಕ್ಷಣಾಕ್ರಮದ ಮೇಲೆ ಬೀರಿದ 'ಪಲ್ಲಟ'ದ ಒತ್ತಡಗಳಿಂದಾಗಿ ಕಲಾಕೃತಿಗಳು ಒಂದು ಬೇರೆಯದೇ ಆದ ನಿರ್ದಿಷ್ಟ ತಾತ್ವಿಕ ಚೌಕಟ್ಟನ್ನು ಬೇಡುತ್ತವೆ.

ಇಲ್ಲಿಯವರೆಗೂ ವಿವರಿಸಿರುವಂತೆ, ಇತ್ತೀಚಿನ ವರ್ಷಗಳಲ್ಲಿನ ಶಿವಪ್ರಸಾದರ ಕೃತಿಗಳಲ್ಲಿನ ಮುಖ್ಯ ಆಕೃತಿಗಳು 'ಸೂತ್ರಧಾರ'ರ ಪಾತ್ರವನ್ನು ನಿರ್ವಹಿಸುತ್ತವೆ. ಪ್ರತಿ ಚಿತ್ರದಲ್ಲಿಯೂ ಒಂದೆರಡು ಆಕಾರಗಳಿರುವುದು ಮತ್ತು ಅನೇಕ ಆಕಾರಗಳ ಸಮೂಹವೊಂದರ (ಹಲವಾರು ಮನುಷ್ಯಾಕಾರಗಳಿರುವ) ಅನುಪಸ್ಥಿತಿಯು ಈ 'ಸೂತ್ರಧಾರ'ನ ವ್ಯಕ್ತಿತ್ವವನ್ನು ಬಲಗೊಳಿಸುತ್ತದೆ. ಕಲಾಭಿವ್ಯಕ್ತಿಯ/ಕಲಾನುಭವದ ರೂಢಿಗತ ಚೌಕಟ್ಟಿನ ಹೊರಗೂ ಜನಸಮೂಹದೊಂದಿಗೆ ಬೆರೆವ ಬದುಕನ್ನು ರೂಢಿಸಿಕೊಂಡಿರುವ ಶಿವಪ್ರಸಾದ್, ತಮ್ಮ ಚಿತ್ರಗಳಲ್ಲಿ ಸಾಮಾಜಿಕ ಜೀವನದ ನೈಜ ಚಿತ್ರಣವನ್ನು ಮೂಡಿಸದಿರುವುದು ಮೇಲ್ನೋಟಕ್ಕೆ ವೈರುಧ್ಯಮಯವೆನ್ನಿಸುತ್ತದೆ. ಮಾರ್ಕ್ಸಿಸಂನ

ಸರಳೀಕೃತ ಅರ್ಥೈಸುವಿಕೆಗೆ ಇವರು ಸಿಕ್ಕಿ ಹಾಕಿಕೊಳ್ಳದಿರುವುದಕ್ಕೆ ಇದೊಂದು ಸಾಕ್ಷಿ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ದೃಶ್ಯಭಾಷೆಯ ಸಾಧ್ಯತೆಗಳ ಅನ್ವೇಷಣೆಯ ಮುಖೇನವೇ, ಇತ್ತೀಚೆಗೆ ಶಿವಪ್ರಸಾದರು ತಮ್ಮ ಮಾನವಾಕಾರಗಳನ್ನು ಮೆಟಾಫರ್/ಸಂಕೇತವಾಗಿ ರೂಪಾಂತರಿಸಿಬಿಟ್ಟಿದ್ದಾರೆ. ಆದುದರಿಂದಲೇ ನಾನು ನಿರೂಪಿಸಲು ಪ್ರಯತ್ನಿಸುತ್ತಿರುವುದೇನೆಂದರೆ ಶಿವಪ್ರಸಾದರ ಕೃತಿಗಳಲ್ಲಿನ ದೃಶ್ಯಕಥನ-ರೂಪಕದಲ್ಲಿನ ಮಾನವರು ಮಾನವರೇ ಅಲ್ಲ, ಅವರೊಂದು 'ರೂಪಕ'!

೮

ಸಾಂಕೇತಿಕವಾಗಿ ಹೇಳುವುದಾದರೆ ಶಿವಪ್ರಸಾದರು ತಮ್ಮದೇ ಹಳೆಯ ಕೃತಿಗಳಲ್ಲಿನ ಮುಖ್ಯ ಮಾನವಾಕಾರಗಳ ಮುಖೇನವೇ 'ಸೂತ್ರಧಾರ'ನೊಬ್ಬನನ್ನು ಸೃಷ್ಟಿಸಿರುವುದು. 'ಕಲೆಯ ಒಳಗೊಂದು ಕಲೆ'ಯನ್ನು ಸೃಷ್ಟಿಸುವ ಕ್ರಮವಿದು. ಅಂದರೆ ನಮ್ಮ ಪುರಾಣದ ಮುಖ್ಯಕಥೆಗಳ ಒಳಗೇ ಬರುವ ಉಪಕಥೆಗಳಂತಹವು ಇವು.

ಕೆ.ಟಿ. ಶಿವಪ್ರಸಾದ್/೧೯

'ಚಿತ್ರಿತ ಜಗತ್ತಿಗೂ ನಿಜ ಜಗತ್ತಿಗೂ ನಡುವೆ ವ್ಯತ್ಯಾಸವಿಲ್ಲ'ವೆಂಬ ನಂಬಿಕೆಯಿಂದ ಮಾತ್ರ ಸಾಧ್ಯವಾಗುವ "ನಿರ್ಮಿತಿ'ಯಿದು. ಈ ನಂಬಿಕೆಯು ರೊಲಾಂಡ್ ಬಾರ್ಥ್ ಹೇಳುವ 'ಪಠ್ಯದ (ಇದನ್ನು 'ಚಿತ್ರ'ಎಂದು ಓದಿಕೊಳ್ಳಿ) ಹೊರಗೆ ಪ್ರಪಂಚವಿಲ್ಲ' ಎಂಬುದಕ್ಕೆ ಸಂವಾದಿಯಾಗಿದೆ. ಮತ್ತು ಇದಕ್ಕೆ ಸಾಕ್ಷಿಯೋ ಎಂಬಂತೆ ಈ ಕಲಾವಿದ ಹೊರಗೂ ನೈಜಜಗತ್ತಿನೊಳಗಿನ ಸಾಮಗ್ರಿಗಳ ಜೊತೆಜೊತೆಗೇ, ಈಗಾಗಲೇ ಚಿತ್ರಿತವಾಗಿರುವ ಜಗತ್ತಿನಿಂದಲೂ ತಮ್ಮ ಅಭಿವ್ಯಕ್ತಿ ದ್ರವ್ಯವನ್ನು, ಆಕಾರವನ್ನು ಹುಡುಕಿಕೊಳ್ಳುತ್ತಾರೆ. ಚಿತ್ರ ಮತ್ತು ಸಮಾಜ ಇವೆರಡರ ನಡುವೆ ವ್ಯತ್ಯಾಸವನ್ನು ಗುರ್ತಿಸುವ ರೂಢಿಗತ ಕ್ರಮಕ್ಕೆ ವಿರುದ್ಧವಾದ ನಿಲುವಿದು. ಈ ಮೇಲಿನ ಅಂಶವನ್ನು ಮತ್ತೊಂದು ರೀತಿಯಲ್ಲಿ ಸ್ಪಷ್ಟಪಡಿಸಬಹುದು.

ಒಬ್ಬ ವ್ಯಕ್ತಿಯನ್ನು ನೆನಪಿನಿಂದ ಚಿತ್ರಿಸುವುದು ಒಂದು ಕ್ರಮ. ಆತನ ನೆನಪಿನ ವಿವರವು ಗರಿಷ್ಠವಾಗಿರಲೆಂದು ಆತನನ್ನು ಫೋಟೋ ಮೂಲಕ ದಾಖಲಿಸಿ ಅದರ ಆಧಾರದ ಮೇಲೆ ಚಿತ್ರಿಸುವುದು ಇನ್ನೊಂದು ಕ್ರಮ. ಆದರೆ ಮೊದಲೇ ಬೇರೊಂದು 'ಸಂದರ್ಭ'ದಲ್ಲಿ ಅನುಷ್ಠಾನಗೊಂಡಿರುವ 'ಪಿನ್‌ಅಪ್' ಹುಡುಗಿಯರ ಫೋಟೋಗಳನ್ನು ಹಾಗೂ ಅಭಿನಯ-ದೃಶ್ಯ-ಸಂಕೇತದ ಸಮಿಶ್ರಣ ಕಲಾಭಿವ್ಯಕ್ತಿಗೆ ಗುರುತಾಗಿ ನಿಲ್ಲುವ ತೊಗಲುಗೊಂಬೆಯ ಭೌತಿಕ ಸ್ಥಿರ ಆಕಾರಗಳನ್ನು ಕ್ಯಾನ್ವಾಸಿನ ಪ್ರೇಮಿನೊಳಕ್ಕೆ ಆಹ್ವಾನಿಸುವುದು ಮತ್ತೂ ವಿಶೇಷವಾದ ಕ್ರಮ. ಶಿವಪ್ರಸಾದರ ಕೃತಿಗಳ ಅತ್ಯುತ್ಕಟಾವಸ್ಥೆ ಎನ್ನಿಸಿರುವ ಇತ್ತೀಚಿನ ಕೃತಿಗಳಲ್ಲಿ, ಇವೆಲ್ಲವೂ, ಒಮ್ಮೆಲೇ, ಒಟ್ಟಾಗಿ ಕಂಡುಬರುತ್ತವೆ. ಇವೆಲ್ಲ ಬಗೆಯ ವ್ಯಕ್ತಿತ್ವಗಳು ನೈಜತೆಯ ಮುಖವಾಡ ಧರಿಸಿ ಮೂಡಿಬರುವ ಚಿತ್ರಗಳು. ತನ್ಮೂಲಕ ಈ ಕೃತಿಗಳು

ವಸಾಹತೋತ್ತರ ಸಂದರ್ಭದಲ್ಲಿ ಸಂಪೂರ್ಣ ಭಿನ್ನ ಆಯಾಮವೊಂದರ ಅನುಭವ ಲೋಕವನ್ನು ನಮಗೆ ಸೃಷ್ಟಿಸಿಕೊಡುತ್ತವೆ.

೧೯೯೭ರಲ್ಲಿ ಮುಂಬೈಯಿಯ ಜಹಂಗೀರ್ ಆರ್ಟ್ ಗ್ಯಾಲರಿಯಲ್ಲಿ ಸರಣಿ ಚಿತ್ರಗಳಲ್ಲಿ "ಪಿನ್‌ಅಪ್ ಹುಡುಗಿಯರ" ಬಳಕೆ ವಿಫುಲವಾಗಿತ್ತು. ಈ ಬರವಣಿಗೆಯ ಆರಂಭದಿಂದಲೂ ಶಿವಪ್ರಸಾದರ ಒಟ್ಟಾರೆ ಸೃಜನದರ್ಶನಕ್ಕೆ ಸಂಕೇತವಾಗಿ ಬಳಸಿ, ವಿವರಿಸಲಾಗುತ್ತಿರುವ "ಹುಲಿಚಿತ್ರ"ವು ಈ ಸರಣಿಗೇ ಸೇರಿದ್ದೊಂದು ವಿಶೇಷ. ಈ ಚಿತ್ರಗಳಲ್ಲಿ ಪ್ರಚೋದನಕಾರಿಯಾದ ನಗ್ನ/ಅರೆನಗ್ನ ಹೆಣ್ಣುಗಳ ದೇಹಗಳನ್ನು ಸಹಜವೆನಿಸದ ಚಿತ್ರದ ಚೌಕಟ್ಟಿನೊಳಕ್ಕೆ ಅಳವಡಿಸಿಕೊಳ್ಳಲಾಗಿದೆ. ಈ ಅಳವಡಿಕೆಯು ಆ ಚಿತ್ರಗಳ 'ಸಹಜತೆ'ಯನ್ನು ಕಡೆಗಣಿಸದೆ ವೀಕ್ಷಕನ ದೃಷ್ಟಿಯ ನೈತಿಕತೆಯನ್ನು ಚುಚ್ಚುತ್ತದೆ. ವಿವರಿಸಿ ಹೇಳುವುದಾದರೆ ಪಿನ್‌ಅಪ್ ಹುಡುಗಿಯರು ಕದ್ದುಮುಚ್ಚಿ ನೋಡಬೇಕಾದ 'ಪೀಪ್ ಷೋ'ಗಳ ಬೆಡಗಿಯರು, ಮ್ಯಾಗಜೆನ್‌ಗಳಲ್ಲಿ ಸ್ಲೈಡ್‌ಗಳಲ್ಲಿ ಇರುವ ಈ ಹುಡುಗಿಯರನ್ನು ಶಿವಪ್ರಸಾದ್ ಆಳೆತ್ತರಕ್ಕೆ, ಅದೂ ತೈಲವರ್ಣದಲ್ಲಿ ಚಿತ್ರಿಸುತ್ತಾರೆ. ಅಂದರೆ ಸರಾಗವಾಗಿ ನಮ್ಮ ಯಾವುದೇ ಸಾಮಾಜಿಕ ಸಂದರ್ಭದಲ್ಲಿ ಶಿಷ್ಟವಲ್ಲವೋ ಅಂತಹ 'ದೃಶ್ಯ'ವನ್ನು ಒಂದು ಗಂಭೀರ ಸೃಜನ ಮಾಧ್ಯಮದಲ್ಲಿ ಇರಿಸುವ ನಿಷಿದ್ಧ ಚಟುವಟಿಕೆ ಇಲ್ಲಿ ನಡೆಯುತ್ತಿದೆ. ಗ್ಯಾಲರಿಯೊಂದರಲ್ಲಿ ಪ್ರತಿಯೊಬ್ಬ ಶಿಷ್ಟ ವ್ಯಕ್ತಿಯ ಆಯ್ದ ದೃಷ್ಟಿಯ ಆವರಣದೊಳಗೆ ಪಿನ್‌ಅಪ್ ಹುಡುಗಿಯರಿಗೆ ಪ್ರವೇಶವಿಲ್ಲದಿದ್ದಾಗಲೂ ಅವರನ್ನು ಅನಿವಾರ್ಯವಾಗಿ 'ಶಿಷ್ಟ-ದೃಷ್ಟಿಯ' ಅಂಗಳದಲ್ಲಿ ಬರಮಾಡಿಕೊಳ್ಳಲೇ ಬೇಕಾಗುವ ಒತ್ತಡವು ಈ ಸರಣಿ ಚಿತ್ರಗಳಲ್ಲಿದೆ. ಈ ಪಿನ್‌ಅಪ್ ಹುಡುಗಿಯರನ್ನು ಕದ್ದು ಮುಚ್ಚಿ ಅವಸರದಲ್ಲಿ ನೋಡುವಾಗ ಅವರು ಕಣ್ಣಿಗೆ ಗೋಚರಿಸುವ' ಬಗೆಯು ತೀವ್ರವೇಗದ್ದು. ಆ ವೇಗವು ಈ ಕ್ಯಾನ್ವಾಸುಗಳಲ್ಲಿ ನಿಧಾನಗತಿಯದ್ದಾಗುತ್ತದೆ. ಅಂದರೆ ದೃಷ್ಟಿಯು ಜಾನ್ ಬರ್ಜರ್ ಸೂಚಿಸುವ, ಅಪ್ರಜ್ಞಾಪೂರ್ವಕವಾಗಿ 'ವೀಕ್ಷಿಸುವ' ನಮ್ಮ ಗಮನವು ಪ್ರಜ್ಞಾಪೂರ್ವಕ ಚಟುವಟಿಕೆಗೆ ಬದಲಾಗುವ ಕ್ರಮಕ್ಕೆ ಈ ಪಿನ್‌ಅಪ್ ಹುಡುಗಿಯರ ಕ್ಯಾನ್ವಾಸುಗಳು ಸಹಾಯಕಾರಿ. ಎರಡನೆಯದಾಗಿ ತಮ್ಮ ಅಸಲಿ ಸಂದರ್ಭದಲ್ಲಿ ಚಿಕ್ಕದಾಗಿರುವ ಈ ಹುಡುಗಿಯರು ತಮ್ಮ ಮೈಮೇಲಿನ ವಿವರಗಳನ್ನು ವೀಕ್ಷಕರ ದೃಷ್ಟಿಗೆ ಸಂಪೂರ್ಣ ಬಿಟ್ಟುಕೊಡದೇ ವೀಕ್ಷಕರೇ 'ಕಲ್ಪಿಸಿಕೊಳ್ಳಬೇಕಾದ' ಅನಿವಾರ್ಯತೆಯನ್ನು ಒಡ್ಡುತ್ತಾರೆ. ಅಂತಹ ಭೌತವಸ್ತುವಿನ (ಹೆಣ್ಣಿನ ನಗ್ನ ದೇಹಗಳ) ವೀಕ್ಷಣೆಯ ಕ್ರಮದಲ್ಲೇ ಪರಸ್ಪರ ವ್ಯತ್ಯಾಸಗೊಳ್ಳುವ ಕಲ್ಪನೆಗಳು ಪ್ರತಿಯೊಂದೂ ಜೋಡಿ ಕಣ್ಣಿಗೂ ಬೇರೆ ಬೇರೆಯಾಗಿಯೇ ಲಭಿಸುತ್ತವೆ. ಅದೇ ಹುಡುಗಿಯರು ಶಿವಪ್ರಸಾದರ ಕೃತಿಗಳಲ್ಲಿ ಬಟಾಬಯಲಾಗುತ್ತಾರೆ. ಥಿಕ್ ಇಂಪಾಸ್ಟೋ ತಂತ್ರಗಳಲ್ಲಿ ಚಿತ್ರಿಸಲಾಗಿರುವುದರಿಂದಲೇ ತಮ್ಮ ಸಪೂರ ಸುಲಲಿತ ದೇಹಗುಣಗಳನ್ನೂ ಈ ಹುಡುಗಿಯರು ಕಳೆದುಕೊಂಡು ಬಿಡುತ್ತಾರೆ. ಕಲೆಯ ಇತಿಹಾಸದಲ್ಲಿ, ಶತಮಾನಗಳ ಕಾಲ ಹೆಣ್ಣಿನ ನಗ್ನ ದೇಹ ರಚನೆಗಾಗಿ

ತೈಲವರ್ಣದ ಸಪೂರ ಬಳಕೆಯಾಗುತ್ತಿದ್ದುದು ಒಂದು ಅಲಿಖಿತ ನಿಯಮವಾಗಿತ್ತು. ಶಿವಪ್ರಸಾದರ ಕೃತಿಗಳಲ್ಲಿ ಈ ನಿಯಮವು ಮುರಿದು ಬೀಳುತ್ತದೆ.

ಈ ವಿವರಣೆಯನ್ನು ಓದುವಾಗಲೆಲ್ಲಾ ಶಿವಪ್ರಸಾದರ ಕೃತಿಗಳಲ್ಲಿನ ವ್ಯಕ್ತಿಗಳು ಜೀವಂತ ವ್ಯಕ್ತಿಗಳಾಗಿರುವುದಕ್ಕಿಂತಲೂ 'ಸಾಂಕೇತಿಕ ವ್ಯಕ್ತಿಗಳಾದ(ಪರ್ಸಾನಿಫಿಕೇಷನ್ ಆಫ್ ಎ ಬೀಯಿಂಗ್) ಸೂತ್ರಧಾರರು' ಎಂಬ ಪ್ರಮೇಯವನ್ನು ನಿರಂತರವಾಗಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಆದ್ದರಿಂದ ಪಿನ್‌ಅಪ್ ಹುಡುಗಿಯರೂ ಸಹಾ ಮೇಲೆ ವಿವರಿಸಿದಂತೆ, ವೀಕ್ಷಕರ ಶಿಷ್ಟ-ದೃಷ್ಟಿ ಒಳಗಿನ ಪದರಗಳಲ್ಲಿ ಅಡಗಿರುವ ನಿಶಿದ್ಧ ಚಪಲಗಳನ್ನು ಕೆಣಕುವ ತುಂಟ ಸೂತ್ರಧಾರಣಿಯರ ಪಾತ್ರ ವಹಿಸುತ್ತಾರೆ.

ಸ್ವತಃ ಖಡಾಖಂಡಿತ ನಂಬಿಕೆಗಳನ್ನಿರಿಸಿಕೊಂಡಿರುವ ಶಿವಪ್ರಸಾದರು ಪ್ರಜ್ಞಾಪೂರ್ವಕವಾಗಿಯೇ ಶಿಷ್ಟ ವೀಕ್ಷಕ/ವಿಮರ್ಶಕ ಕಣ್ಣನ್ನು ಲೇವಡಿ ಮಾಡುತ್ತಾರೆ. ಇದೊಂದು ಯಾವುದೋ ವಿಶಾಲ ಉದ್ದೇಶವೊಂದರ ಪೂರೈಕೆಗಾಗಿ ರೂಪಿಸಲಾಗಿರುವ 'ಕಲಾತ್ಮಕ ಮನೋವೈಜ್ಞಾನಿಕ' ಆಟವೆಂಬುದನ್ನು ಅರಿಯುವ ತಾಳ್ಮೆಯಿಲ್ಲದ ಒಂದು ವೀಕ್ಷಕ ವರ್ಗವು, ಶಿವಪ್ರಸಾದರ ಕಲಾಕೃತಿಗಳು ನಿಜಜೀವನದ-ಬಿಂಬವೇ ಹೌದು ಎಂಬಂತೆ ಈ ಕೃತಿಗಳಿಗೆ ಪ್ರತಿಕ್ರಿಯಿಸುವ ತಪ್ಪು ಮಾಡಿದ್ದಾರೆ.*2* ಅಂತಹ ಪರಿಸರದಲ್ಲಿದ್ದರೂ ಅದನ್ನು ಸೃಜನಾತ್ಮಕವಾಗಿಯೇ ಮೀರುವ ಪ್ರಯತ್ನ ಸಮಾಜವಾದದ ಒಲವುಳ್ಳ ಶಿವಪ್ರಸಾದರದ್ದು.

ದೃಶ್ಯವೊಂದನ್ನು ನೋಡುವ ಕ್ರಮದ ಬಗ್ಗೆಯೇ ಇಂತಲ್ಲಿ ಶಿವಪ್ರಸಾದರ ಕಲಾತ್ಮಕ ಅಸಮಾಧಾನವಿರುವುದು. ಅವರ ಸಮಗ್ರ ಕೃತಿಸಮೂಹವು ತೋರಿಕೆಗೆ ನೈಜಚಿತ್ರ ಪ್ರಕಾರವನ್ನು ನೆನಪಿಸುತ್ತದೆ. ಈ ನೆನಪೂ ಸಹ ಸರಳವಾದುದ್ದಲ್ಲ. ನಾಸ್ಟಾಲ್ಜಿಯಾದಷ್ಟೇ ಗಾಢವಾದುದು. ಅಂದರೆ ಈಗಾಗಲೇ ಕಲಾ ಇತಿಹಾಸದಲ್ಲಿ ಸಾಂದ್ರಗೊಂಡಿರುವ ಮಾಧ್ಯಮ ಮತ್ತು ಶೈಲಿಯನ್ನು ಹೋಲುವ' (ಆಂತರ್ಯದಲ್ಲಿ ಭಿನ್ನವಾಗಿದ್ದರೂ ಸಹ) ಕೃತಿಗಳನ್ನು ನೋಡಿದ ಕೂಡಲೇ ಅಂತಹ ಕೃತಿಗೆ, ಅದು ನೆನಪಿಸಿಕೊಡುವ ದೃಶ್ಯ ಸಂಪ್ರದಾಯದ ಎಲ್ಲ ಗುಣಲಕ್ಷಣಗಳನ್ನು ಆರೋಪಿಸಿಬಿಡಬಹುದು. ಇದು ನಮ್ಮಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ಒಂದು ರೂಢಿ. ಯೂರೋಪಿಯನ್ ರೆನಾಯಸಾನ್ಸ್ ಕಾಲದ ಆಲ್ಬರ್ಟಿಯು ಇಟಾಲಿಯನ್ ಮೇರುಕೃತಿ ಸಮೂಹವನ್ನು ಕುರಿತ ತನ್ನ ಅನುಭವದ ಆಧಾರದ ಮೇಲೆ "ನೈಜಚಿತ್ರವೊಂದನ್ನು ಕಿಟಕಿಯ ಮೂಲಕ ಗೋಚರಿಸುವ ದೃಶ್ಯ" ಎನ್ನುವ ಒಂದು ವೀಕ್ಷಣಾ ವ್ಯಾಕರಣವನ್ನೇ ಹುಟ್ಟುಹಾಕಿದ್ದಿದೆ. ರಾಜಾ ರವಿವರ್ಮನಂತಹವರ ನೈಜತೆಯಲ್ಲಿ ವೀಕ್ಷಕನೇ ಒಂದು ಆಳೆತ್ತರದ ಆಯಸ್ಕಾಂತವಾಗಿದ್ದಲ್ಲಿ ಕೃತಿಯೊಳಗಿನ ವಸ್ತು-ವ್ಯಕ್ತಿಗಳೆಲ್ಲ ಕಬ್ಬಿಣದಿಂದ ನಿರ್ಮಿಸಲಾದಂತಿದ್ದಾರೆ. ಹೇಗೆ ಅವರೆಲ್ಲ/ಅವುಗಳೆಲ್ಲ ವೀಕ್ಷಕನ ಕಡೆಗೇ ತಿರುಗುತ್ತಿದ್ದಾರೆಯೋ ಅಂತಹ ಒಂದು ಸಂಯೋಜನಾ ಕ್ರಮವು ಕಳೆದ ಒಂದು ಶತಮಾನದಿಂದಲೂ ಇನ್ನೂ ಚಾಲನೆಯಲ್ಲಿರುವ ರೂಢಿಗತವಾದ ಶೈಲಿ. ಕಣ್ಣಿಗೆ ಆಲ್ಬರ್ಟಿ-ರವಿವರ್ಮರ ನಡುವಿನ ನೈಜ ದೃಶ್ಯವ್ಯಾಕರಣದ ಎಷ್ಟೆಲ್ಲ ಜ್ಞಾನವಿದ್ದಷ್ಟೂ, ಅಷ್ಟೂ ವೀಕ್ಷಣಾಶಕ್ತಿ ಶಿವಪ್ರಸಾದರ ಕೃತಿಗಳಲ್ಲಿ ಉದ್ದೀಪನಗೊಳ್ಳುತ್ತದೆ. ಅಂತಿಮವಾಗಿ, ಅವುಗಳ ಬಗ್ಗೆ ಅರಿವಿದ್ದೂ ನೈಜತೆಯನ್ನು ಅಳಿಸಿಹಾಕುವ ಕಡೆಗೇ

ಶಿವಪ್ರಸಾದರ ಸಂಯೋಜನಾತಕ ಜಾಣ್ಮ ಇರುವುದು. ಅಥವ ಇದನ್ನು ರೂಢಿಗತ ನೋಟಕ್ರಮವನ್ನು ಕುರಿತ ಅಸಮಾಧಾನ'ವೆಂದೂ ಅರ್ಥೈಸಬಹುದು.

ಪಿನ್‌ಅಪ್ ಹುಡುಗಿಯರು ಶಿವಪ್ರಸಾದರ ಕೃತಿಯೊಳಕ್ಕೆ ಪ್ರವೇಶಿಸುವ ಕಾಲಕ್ಕೆ ಶಿವಪ್ರಸಾದರ ಕೃತಿಸಮೂಹವೇ ವೀಕ್ಷಕ ಸಮುದಾಯಕ್ಕೆ ಸುಮಾರು ಎರಡು ದಶಕಗಳ ಕಾಲದಲ್ಲಿ, ಒಂದು ವೈಯಕ್ತಿಕ ನಾಸ್ತಾQಯಾವನ್ನು ಕಟ್ಟಿಕೊಟ್ಟಿತ್ತು. ಅದನ್ನೇ ನಾನು ಈ ಹಿಂದೆ ಆಲ್ಬರ್ಟ್-ರವಿವರ್ಮರ ಉದಾಹರಣೆಯ ಮೂಲಕ ಸೂಚಿಸಿದ್ದು, ಪಿನ್‌ಅಪ್ ಹುಡುಗಿಯರು ಇಂತಹ ಒಂದು ಚಿರಪರಿಚಿತವಾದ ಹಿನ್ನೆಲೆ, ರಸ್ತೆ ಮತ್ತು ಮನೆಯ ಮುಂದೆ ಬಂದಾಗ ಅವರ ಭಂಗಿ ಹಾಗೂ ಹಿನ್ನೆಲೆಯೊಂದಿಗಿನ ಅವರ ಸಂಬಂಧ ಇವೆರಡೂ ಸಹ ಸಹಜ ಅರ್ಥದಲ್ಲಿ ನೈಜತೆಯ ಗಡಿಯನ್ನು ಮೀರಿದ್ದಾಗಿತ್ತು.

"ಪೊನ್ನಮ್ಮ ಕೃತಿಯನ್ನು ಪರಿಶೀಲಿಸಿ ನೋಡಿ, ತುಂಡು ಒಳಉಡುಪು ಮಾತ್ರ ಧರಿಸಿ ನಿಂತಿರುವ ಬೃಹದಾಕಾರದ ಹೆಣ್ಣಿನ ನೀಲಿ ಪೋಸ್ಟರ್‌ಗೆ ಪೊನ್ನಮ್ಮ ಬೆನ್ನು ತಿರುಗಿಸಿ ಕುಳಿತಿದ್ದಾಳೆ. ಸಂಪೂರ್ಣ ವಸ್ತ್ರಮಯವಾಗಿರುವ



ಪೊನ್ನಮ್ಮಳ ಮುದಿ ಮುಗ್ಧ ದೇಹಕ್ಕೂ, ನಗ್ನತೆಯ ಪ್ರದರ್ಶನದ ಆಶಯವುಳ್ಳ ಪೋಸ್ಟರಿನ ಸ್ವಪ್ರಜ್ಞೆಯ ಯೌವ್ವನದ ಹೆಣ್ಣಿನ ದೇಹಕ್ಕೂ ಒಂದು ಸ್ಪಷ್ಟ ವಿರೋಧಾಭಾಸ ವ್ಯಕ್ತವಾಗುತ್ತದೆ. ಇದು ಎರಡು ತಲೆಮಾರುಗಳ ನಡುವಿನ ವಿರೋಧಾಭಾಸವೆಂದೇನಲ್ಲ. ಬದಲಿಗೆ, ಪೊನ್ನಮ್ಮಳ ಹಿಂದೆ ಇರುವುದು ಗೋಡೆಯ ಮೇಲಿನ ಪೋಸ್ಟ ಅಲ್ಲ. ಅದು ಒಂದು ಕಲ್ಪಿತ ಕನ್ನಡಿಯೊಳಗಿನ ಬಿಂಬ ಎಂದು ಪರಿಗಣಿಸಿ ನೋಡಲು ಸಾಕಷ್ಟು ಪೂರಕ ಅಂಶಗಳಿವೆ. ವೀಕ್ಷಕನ/ಳ ಲಿಂಗವನ್ನಾಧರಿಸಿ ರಸಿಕತೆಯನ್ನು ಈ ಕೃತಿಯು ಕೆಣಕುತ್ತದೆ. ಬಹುಶಃ ಪೊನ್ನಮ್ಮ ತನ್ನ ಹಿಂದೆ ಇರುವುದೇನೆಂದು ಅರ್ಥಮಾಡಿಕೊಂಡು ಹಿಂದಿರುಗಿ ನೋಡಿದ್ದಿದ್ದರೆ ಆಕೆ ಆ ಜಾಗದಲ್ಲಿ ಕುಳಿತುಕೊಳ್ಳುವ ಮನಸ್ಸು ಮಾಡುತ್ತಿರಲಿಲ್ಲ.

ಏಕೆಂದರೆ ಮೊದಲಿಗೆ ೧೯೯೭ರಲ್ಲಿ ಪೊನ್ನಮ್ಮ ಅಲ್ಲಿ ಬಂದು ಕುಳಿತಾಗ (ಹಾಗೆ ಮೊದಲು ಚಿತ್ರಿಸಲ್ಪಟ್ಟಾಗ) ಆಕೆಯ ಹಿಂದೆ ಆ ಅರೆನಗ್ನ ದೇಹವಿರಲಿಲ್ಲ. ಬದಲಿಗೆ, ಮೊದಲು ಆ ಜಾಗದಲ್ಲಿ ಶಿವಪ್ರಸಾದ್, ಅಂಗಡಿಯೊಳಗೆ ನಿಂತ ಹೆಣ್ಣೊಬ್ಬಳನ್ನು ಚಿತ್ರಿಸಿದ್ದರು. ಇದೊಂದು ಅಕ್ಷರಶಃ/ಭಾಗಶಃ ಪುನರ್ ಚಿತ್ರಿಸಲಾದ ಕ್ಯಾನ್ವಾಸ್. ಈ ರೀತಿ ಕಾಲಾಂತರದಲ್ಲಿ ಹಳೆಯ ಕ್ಯಾನ್ವಾಸುಗಳ ವಿಭಾಗಗಳನ್ನು ಬೇರೊಂದು ರೀತಿ ಚಿತ್ರಿಸುವ ಜಾಯಮಾನವೂ ಒಂದು ಅಪರೂಪದ ನಿರ್ಧಾರ. ಸಾಂಕೇತಿಕವಾಗಿ ಹೇಳುವುದಾದರೆ, ಆನಂತರ ಶಿವಪ್ರಸಾದ್ ಅಂಗಡಿಯ ಬಾಗಿಲಿಗೆ

ಗೋಡೆಯನ್ನಿಟ್ಟು ಅದರ ಮೇಲೆ ನಗ್ನ ಹೆಣ್ಣಿನ ಪೋಸ್ಟರ್ ಬರೆದರು. ನಗರಗಳಲ್ಲಾಗುವಷ್ಟು ಶೀಘ್ರಗತಿಯಲ್ಲಲ್ಲದೆ ತೀರ ಅಪರೂಪಕ್ಕೆ ಶಿವಪ್ರಸಾದರಿಗೆ ಪರಿಚಿತವಾದ ಹಳ್ಳಿಗಾಡಿನ ಸಣ್ಣಪುಟ್ಟ ಟೌನ್‌ಗಳಲ್ಲಿನ ಮನೆಮಠಗಳು ಬದಲಾವಣೆಗೊಳ್ಳುತ್ತವೆ, ನವೀಕರಣಗೊಳ್ಳುತ್ತವೆ. ಒಂದರ್ಥದಲ್ಲಿ ನೈಜವೆನಿಸುತ್ತಲೇ ಈ ಬಗೆಯ ಸೌಂದರ್ಯೇತರ 'ಬಯಕೆ'ಗಳು ಇಂತಹ ಕೃತಿಗಳಲ್ಲಿ ಕಂಡುಬರುತ್ತವೆ. ದಶಕಗಳ ನಂತರ ಜನ ಊರುಗಳಿಗೆ ಹಿಂದಿರುಗಿ ಬಂದರೂ ಅಲ್ಲಿನ ರಸ್ತೆಗಳು, ಮನೆ, ಜನಜಂಗುಳಿಯ ಬದಲಾವಣೆ, ಮನುಷ್ಯರು, ಮತ್ತವರ ಸ್ನೇಹದ ಕೊಂಡಿಗೆ ಕುಂದುಂಟಾಗುವುದಿಲ್ಲ.

ಈ ರೀತಿ ಪಿನ್‌ಅಪ್ ಹುಡುಗಿಯರು ಸಹಜವೆನ್ನಿಸುವ ಹಿನ್ನೆಲೆಗೆ ಆತುಕೊಳ್ಳಲು ಬಂದರೂ ಅವುಗಳ ನಡುವೆ ಇರುವ 'ಕೊಲಾಜ್' ಗುಣದ ಸ್ಪಷ್ಟ ಹಿನ್ನೆಲೆಯನ್ನು ನೈಜವೆಂದು ನಾವು ಸ್ವೀಕರಿಸುವಾಗ, ಆ ಹುಡುಗಿಯರು ಕಾಣುವ ರೀತಿಯಲ್ಲಿ (ಉದಾಹರಣೆಗೆ "ಲೈಲಾ" ಕೃತಿಯಲ್ಲಿ) ಅಲ್ಲಿ ಇರಬಾರದೆನ್ನಿಸುತ್ತದೆ. ಮತ್ತು ಆ ಆಕಾರಗಳ ನಗ್ನತೆಯನ್ನು ಆಸ್ವಾದಿಸುವಾಗ ಅವುಗಳಿಗೆ ನೀಡಲಾಗಿರುವ ಹಿನ್ನೆಲೆಯು ನಮ್ಮ ನಿಗೂಢ ಬಯಕೆಗಳನ್ನು “ಬಯಲುಗೊಳಿಸಿದಂತೆಯೂ' ಆಗಿಬಿಡುತ್ತದೆ. ವೈಯಕ್ತಿಕ ಮತ್ತು ಸಾರ್ವತ್ರಿಕ ಸ್ಥಳಾವಕಾಶದ ನಡುವಿನ ಸ್ಥಳಪಲ್ಲಟದ ಘರ್ಷಣೆಯು ಈ ಕೃತಿಗಳಲ್ಲಿ ಸ್ಪಷ್ಟ. ಕೂಡುಕುಟುಂಬ ಎಂಬ ಹೆಚ್ಚು ಸಾರ್ವತ್ರಿಕ ಸಂಸಾರದ ಬಂಧವು ಕ್ರಮೇಣ ನ್ಯೂಕ್ಲಿಯಸ್ ಫ್ಯಾಮಿಲಿ ಎಂಬ ಸಣ್ಣ ಕುಟುಂಬಗಳಾಗಿ ಹೊಳಾಗುತ್ತಿದ್ದ ದಶಕಗಳಲ್ಲಿ, ಈ ಇದೇ ಪ್ರಜ್ಞೆಯು ಅಂತಹ ಹಿನ್ನೆಲೆಯಲ್ಲಿಯೇ ರೂಪುಗೊಂಡ ಶಿವಪ್ರಸಾದರ ಈ ಕೃತಿಗಳಲ್ಲಿ ಕಲಾತ್ಮಕ ಸ್ಪರ್ಶ ಪಡೆದುಕೊಂಡದ್ದು ಕಾಕತಾಳೀಯ ಸಂಬಂಧವೇನಲ್ಲ. ಅಷ್ಟೇ ಆಗಿದ್ದಲ್ಲಿ ಮತ್ತೆ ಇದೊಂದು ಎಡಪಂಥೀಯ ಒಲವಿನ ಕಲಾತ್ಮಕ ಕೃತಿಗಳು ಆಗಿಬಿಡಬಹುದು. ಇಂತಹ ಸೂಕ್ಷ್ಮ ಪ್ರಯೋಗಗಳಲ್ಲಿ ಕ್ಲೀಷೆ ಇರುವುದಿಲ್ಲವಾದರೂ ಶಿವಪ್ರಸಾದರ ಒಟ್ಟಾರೆ ಕೃತಿಸಮೂಹದ ಭೂಪಟದಲ್ಲಿ ಸಮಾಜವಾದಿ ಒಲವು; ನೈಜತೆಗೊಂದು ಮುಸುಗಿದ ಗುದ್ದು; ನಿಕೃಷ್ಟಗೊಂಡ ಕೆಲವು ಕಲಾಪ್ರಕಾರಗಳ ಪುನರ್ ಬಳಕೆ ಮುಂತಾದ ನಾಲ್ಕಾರು ಮಾನವಶಾಸ್ತ್ರೀಯ ಅಂಶಗಳಿಗೂ ಬೆಲೆಯುಂಟು.

"ಪೊನ್ನಮ್ಮ" ಮತ್ತು "ಪಿನ್‌ಅಪ್ ಹುಡುಗಿಯರ 'ನ್ನೇ ಆಧಾರವಾಗಿರಿಸಿಕೊಂಡು ಮೇಲಿನ ವಿಷಯವನ್ನು ಮತ್ತಷ್ಟು ವಿವರಿಸಬಹುದು. ಕರ್ನಾಟಕದಲ್ಲಿ ಆಧುನಿಕ ದೃಶ್ಯಕಲೆಯಲ್ಲಿ ಮುಖ್ಯ ಕಾಳಜಿಗಳಲ್ಲೊಂದಾದ 'ನಗರೀಕರಣದ' ವಿಷಯವನ್ನು ಸಂಕ್ಷಿಪ್ತವಾಗಿ ಶಿವಪ್ರಸಾದರ ಕೃತಿಗಳು ಸೂಚಿಸಿದರೂ ಸಹ ಕ್ಯಾನ್ವಾಸಿನೊಳಗಣ ಆಕಾರಗಳ ಸೂತ್ರಧಾರಿತ್ವ ವ್ಯಕ್ತಿತ್ವದ ರೂಪಾಂತರ ಮತ್ತು ಅವುಗಳೊಂದಿಗಿನ ಪ್ರೇಕ್ಷಕ ಸಮೂಹದ ಕಣ್ಣಿನ ನೋಟವನ್ನು ಮೀರಿದ ಸಹಭಾಗಿತ್ವವು ಈ ಹಂತದಲ್ಲಿ ಮುಖ್ಯವಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಗ್ಯಾಲರಿಗಳೊಳಗೆ ಬೆಲೆಯುಳ್ಳ ಕ್ಯಾನ್ವಾಸುಗಳನ್ನು ಅಕ್ಷರಶಃ ಕಾವಲುಗಾಯುವ ಪರಿಸರದಲ್ಲಿ (ಶಿವಪ್ರಸಾದರ ಕೃತಿಗಳೂ ಕರ್ನಾಟಕದ ಸಂದರ್ಭದಲ್ಲಿ ಅತಿ ಹೆಚ್ಚಿನ ಆರ್ಥಿಕ ಬೆಲೆಯುಳ್ಳದ್ದು) ವೀಕ್ಷಕನನ್ನು ಕೃತಿಯೊಳಕ್ಕೆ ಮಾನಸಿಕವಾಗಿ ಪ್ರವೇಶಿಕೆ ನೀಡುವ ಔದಾರ್ಯ ಕಂಡುಬರುತ್ತದೆ.

ಕೆ.ಟಿ. ಶಿವಪ್ರಸಾದ್/೨೨

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನೈಜತೈಲವರ್ಣದ ಕ್ಯಾನ್ವಾಸ್ ಎಂದು ನಾವು ಯಾವುದನ್ನು ಸರಳವಾಗಿ ಗುರ್ತಿಸುತ್ತೇವೆಯೋ ಅದು ಒಂದು ಕಲ್ಪಿತವಾದ, ಅದೇ ಕಾರಣಕ್ಕೆ ಒಂದು ಬೆಲೆಯಿರುವ 'ನಿರ್ಮಿತಿ'. ಕಲಾವಿಮರ್ಶಕರು ಭಾವಿಸಿರುವಂತೆ ಕ್ಯಾನ್ವಾಸಿನ 'ಒಳಗಿನ' ದೃಶ್ಯ ಹಾಗೂ ಅದನ್ನು ನೋಡುತ್ತಿರುವ 'ಕಣ್ಣು', ಕೇವಲ ಇವೆರಡರ ನಡುವಿನ ಸಂಬಂಧವನ್ನು ಮಾತ್ರ ಪರಿಗಣಿಸಲಾಗದು. ಐತಿಹಾಸಿಕವಾಗಿ, ಪಾಶ್ಚಿಮಾತ್ಯರಲ್ಲಿ ನಾಲ್ಕಾರು ಶತಕದಾದ್ಯಂತ ಮೂಡಿಬಂದುದನ್ನೆಲ್ಲ 'ನೈಜ'ವೆಂದು ಬಿಟ್ಟರೆ ಅವುಗಳ ನಡುವಿನ ಪರಸ್ಪರ ಅಗಾಧವಾದ ವ್ಯತ್ಯಾಸಗಳು ಹಾಗೂ ಭಿನ್ನ ಅನುಭವಗಳನ್ನು ನಾವು ಕಳೆದುಕೊಂಡಂತೆಯೇ ಸರಿ. ಐರೋಪ್ಯ ಕಲೆಯನ್ನು 'ಒಂದು' ಎಂದು ತಪ್ಪಾಗಿ ಭಾವಿಸುವ ಕ್ರಮವಿದು. ಈ ಚರ್ಚೆ ಬೇರೆಯೇ ಒಂದು ಪ್ರಕರಣವಾದರೂ ಸಹ, ಶಿವಪ್ರಸಾದರ ಕೃತಿಗಳು ಹಾಗೂ ಅವರ ವೀಕ್ಷಕವರ್ಗದ ನಡುವಿನ ಮುಖ್ಯಕೊಂಡಿಯಿದು, ಮತ್ತು ಈ ಕೊಂಡಿಯನ್ನೇ ಅಪಹಾಸ್ಯಕ್ಕೀಡು ಮಾಡುತ್ತಾರ ಶಿವಪ್ರಸಾದ್,

ಅದನ್ನು ಇನ್ನಷ್ಟು ಸ್ಪಷ್ಟವಾಗಿ ವಿವರಿಸಬಹುದು. ಮುಖ್ಯವಾಗಿ ಒಂದೆರಡು ದಶಕಗಳ ಕಾಲ ಭಾರತೀಯ ನೈಜ ದೃಶ್ಯಕರಣದ ಚೌಕಟ್ಟಿನೊಳಗೇ ತಮ್ಮ ಕೃತಿಗಳನ್ನು ರೂಪಿಸುತ್ತಿದ್ದ ಶಿವಪ್ರಸಾದ್, ಕ್ರಮೇಣ ಅದರೊಳಗಿನಿಂದಲೇ' ಅದರ ವಿರುದ್ಧಾರ್ಥ, ವಿರುದ್ಧ ಅನುಭವಗಳನ್ನು ಹೊರಡಿಸತೊಡಗಿದರು. ಉದಾಹರಣೆಗೆ ಪಿನ್‌ಅಪ್ ಹುಡುಗಿಯರಿರುವ ಚಿತ್ರಗಳಲ್ಲಿ ಸಾರ್ವತ್ರಿಕ ಹಿನ್ನೆಲೆಯಲ್ಲಿ ವೈಯಕ್ತಿಕ ಹೆಣ್ಣಿನ ಚಿತ್ರಗಳ ಬಳಕೆಯನ್ನು ಒಂದು ತರಹದ ನೈಜವಲ್ಲದ ಕೊಲಾಜ್ ಎಂದೇ ಭಾವಿಸಬಹುದು.

ಇದು ಒಂದು ತೀರ ವೈಯಕ್ತಿಕವಾದ, ವೈರುಧ್ಯವೇ ಜೀವಸತ್ವವೆನಿಸುವ ಕೊಲಾಜ್. ನಿರ್ದಿಷ್ಟವಾಗಿ ಕರ್ನಾಟಕದ ಪಶ್ಚಿಮ ಘಟ್ಟಗಳ, ಹಾಸನ, ಸಕಲೇಶಪುರ ಇತ್ಯಾದಿ ಜಿಲ್ಲೆಗಳ ಜನಜೀವನದ ನೈಜ ಅನುಭವವನ್ನು ಕಟ್ಟಿಕೊಡುತ್ತಿದ್ದವು. ಶಿವಪ್ರಸಾದರ ಮುಂಚಿನ ಕೃತಿಗಳು ಪಿನ್‌ಅಪ್ ಹುಡುಗಿಯರ ಅಳವಡಿಕೆಯು ಎಂತಹ ರೂಪಾಂತರವೆಂದರೆ ಅವುಗಳು ಕೇವಲ ಕಲಾತ್ಮಕವಾದ ಬದಲಾವಣೆಗಳಿಂದಷ್ಟೇ, ಗೊತ್ತಿರುವ ಅರ್ಥದಲ್ಲಿ, ಕೊಲಾಜ್ ಆಗಲಿಲ್ಲ. ಅದನ್ನೂ ಮೀರಿದ ಹೊಸಜಗತ್ತಿನ ಸೃಷ್ಟಿಯಿದು. ಭೌತಿಕವಾಗಿ ಕಾಣದ, ಕೇಳದುದ್ಯಾವುದೂ ಅವರ ಕೃತಿಗಳನ್ನು ಪ್ರವೇಶಿಸದ ಸಂದರ್ಭವೊಂದಿತ್ತು. ಆದರೆ ಪಿನ್‌ಅಪ್ ಹುಡುಗಿಯರು ಎಲ್ಲಿಯೂ ಸಲ್ಲುವವರಾಗಿ ಇಲ್ಲಿ ಮೂಡಿಬಂದರು. ಗೊತ್ತಿರುವ ಜಗತ್ತಿನ ಅನುಭವವು ಕ್ರಮೇಣ ಅವರ ಕೃತಿಗಳಲ್ಲಿ ರೂಢಿಗತ ಅರ್ಥದಲ್ಲಿ ಗೊತ್ತಾಗಲಾರದ ಜಗತ್ತಿಗೆ ಬದಲಾದುದೂ, ಅದೂ ಗೊತ್ತಿರುವ ಜಗದ 'ನೆನಪಿನೊಂದಿಗೇ' ಹಾಗಾದುದನ್ನು ದೃಶ್ಯಕಲೆಯ ಲೇಟ್-ಮಾಡರ್ನ್ ಚರ್ಚೆಯಲ್ಲಿ 'ಬೈನರಿ ಅಪೋಸಿಷನ್' ಎನ್ನುತ್ತೇವೆ.

ಸಂಗ್ರಹರೂಪದಲ್ಲಿ ಹೇಳುವುದಾದರೆ ನೈಜತೆಗೂ, ಕೊಲಾಜ್ ದೃಶ್ಯಾಂಶಗಳಿಗೂ ಇರುವ ಐತಿಹಾಸಿಕ ದ್ವೇಷವು, ಕಲಾ ಇತಿಹಾಸ ತಿಳಿದವರಿಗೆಲ್ಲರಿಗೂ ಅರಿವಿದೆ. ದೃಶ್ಯಕಥಾನಕವೊಂದರ ಎಳೆಯನ್ನು ಮುರಿಯದಂತೆ ನೈಜತೆ ಒಂದು ಅನುಭವವನ್ನು ಕಟ್ಟಿಕೊಟ್ಟರೆ ಅದನ್ನು ಛೇದಿಸುವುದೇ ಕೊಲಾಜ್-ಕಥಾನಕದ ಮುಖ್ಯ ಉದ್ದೇಶವಾಗುತ್ತದೆ. ಕರ್ನಾಟಕದಲ್ಲಿ ಬಂಡಾಯ ಹಾಗೂ ದಲಿತ ಚಳುವಳಿಗಳು ಎಪ್ಪತ್ತರ ದಶಕದಿಂದೀಚೆಗೆ ಒಂದು

ಎಳೆಯಾಗಿ ಪ್ರಾರಂಭಗೊಂಡು ನಂತರ ಹಲವು ಕವಲುಗಳಾಗಿ ವಿಭಾಗೀಕರಣಗೊಂಡಿದ್ದರೂ, ಶಿವಪ್ರಸಾದರ ಅದೇ ಕಾಲದ ಕೃತಿಗಳು ಒಂದೇ ಎಳೆಯ ದೃಶ್ಯಾನುಭವದಿಂದ ಹಲವು ಕವಲುಗಳುಳ್ಳ ಕೊಲಾಜ್ ರೀತಿಗೆ ವಿಭಾಗಗೊಂಡುದಕ್ಕೂ ಒಂದು ತೆರನಾದ ಅವಿನಾಭಾವ ಸಂಬಂಧವಿದೆ. ಈ ವಿಷಯವು ಮತ್ತೊಂದು ಬೇರೆಯದೇ ವಿವರಪೂರ್ಣ ಚರ್ಚೆಯನ್ನು ಬೇಡುತ್ತದೆ. ಶಿವಪ್ರಸಾದ್ ಒಂದು ಹಂತದಲ್ಲಿ ನೈಜತೆಯನ್ನು ಕುರಿತ ವೈಮನಸ್ಯವನ್ನು ತಮ್ಮ ಕೃತಿಯೊಳಗಿನಿಂದಲೇ ರೂಪಿಸುತ್ತಾರೆ. ಆದರೆ ಅದೇ ಅವರ ಉದ್ದೇಶವಲ್ಲ. ಅದೊಂದು ಸಾಧನವಷ್ಟೇ. ತನ್ಮೂಲಕ ನೈಜ ದೃಶ್ಯಕರಣದ ವ್ಯಾಕರಣದ ಪುನರ್ ರಚನೆ ಶಿವಪ್ರಸಾದರ ಕೃತಿಸಮೂಹ. ಇಲ್ಲಿ ವೀಕ್ಷಕನ ಪಾತ್ರವನ್ನು -ಕೇವಲ ಕಣ್ಣಿನಿಂದ ಚಿತ್ರವನ್ನು ನೋಡುವ, ಕೇವಲ ಚಿತ್ರಾಂಶಗಳನ್ನು ನೋಡುತ್ತ ಅದರ ಚೌಕಟ್ಟಿನ ಹೊರಗಿನ ಸಂದರ್ಭವನ್ನು (ಸಾಮಾಜಿಕ, ವ್ಯಕ್ತ, ಅವ್ಯಕ್ತ) ಪರಿಗಣಿಸದ ಇತ್ಯಾದಿ ಗುಣಗಳಿಂದ ಬದಲಾಯಿಸುವ ಅವಕಾಶ ಹಾಗೂ ಒತ್ತಡವಿದೆ. ಮತ್ತೊಂದು ವಿಶೇಷವೆಂದರೆ, ಶಿವಪ್ರಸಾದರ ಕ್ಯಾನ್ವಾಸುಗಳು, ಕಾಲದ ದೃಷ್ಟಿಯಿಂದ ಹೆಚ್ಚು ಆಧುನಿಕವಾದ, ಅದೇ ಕಾರಣಕ್ಕೆ ಹೆಜಿಮೋನಿಕ್ ನಿಟ್ಟಿನಿಂದ ಕ್ಯಾನ್ವಾಸ್ ಚಿತ್ರಗಳಿಗಿಂತ



ಭಿನ್ನವಾದ ಕೃತಿಗಳು. ಅನುಭವ ವಿಸ್ತಾರವನ್ನು ನೀಡುವ ನೆಲಾಕೃತಿಯ ("ಅರ್ಥ್‌ವರ್ಕ್") ವೈಯಕ್ತಿಕೃತ ಅನುಭವವನ್ನು ಮತ್ತೊಂದು ನಿಟ್ಟಿನಿಂದ ಕಟ್ಟಿಕೊಡುತ್ತವೆ ಈ ಕೃತಿಗಳು. ಅದನ್ನು ಶಕ್ತಗೊಳಿಸಲು ಶಿವಪ್ರಸಾದರು ಕೇವಲ ಹೊರಗಿನ ಭಿನ್ನ ಜಗತ್ತುಗಳ ಆಕಾರಗಳನ್ನಷ್ಟೇ ಬೆರೆಸುವುದಿಲ್ಲ. ತೊಗಲುಬೊಂಬೆಯಾಕಾರಗಳನ್ನು ಅಳವಡಿಸುವುದರ ಮೂಲಕ ನೈಜ ಜಗತ್ತಿನೊಂದಿಗೆ ಕಲ್ಪಿತ ಜಗತ್ತನ್ನು ಬೆರೆಸುವ ನಮ್ಮ ಸಂದರ್ಭದಲ್ಲಿ ಅನನ್ಯವಾದ ಪ್ರಯತ್ನವನ್ನು ಮಾಡುತ್ತಾರೆ. ಆಗ ವೀಕ್ಷಕನಿಗೆ ಈ ಕೃತಿಗಳನ್ನು ಅನುಭವಿಸಲು ಕೇವಲ ಕಣ್ಣುಗಳು ಸಾಲದಾಗುತ್ತವೆ. ಕೇವಲ ಕಣ್ಣಿನ ದೃಷ್ಟಿಗಷ್ಟೇ ಆಹಾರವಾಗುತ್ತಿದ್ದ ಕೃತಿರಚನೆಯ ಕಾಲವು - ವಾದಿಸಿ ಹೇಳುವುದಾದರೆ - ಶುದ್ಧ ಈಸಲ್ ಪೈಂಟಿಂಗ್ ಮುಖಾಂತರವೇ. ಅದಕ್ಕೂ ಭಿನ್ನ/ಹೆಚ್ಚಿನ ಜಗತ್ತಿನ ಅನುಭವವನ್ನು ಕಟ್ಟಿಕೊಡುವಂತೆ ಮಾಡಿದ್ದು ಶಿವಪ್ರಸಾದರ ಸಾಧನೆ. 'ನೈಜಲೋಕದ ಎಲ್ಲ ಮೂಲೆಗಳನ್ನು ಶೋಧಿಸದೆಯೇ ಅದನ್ನು ಬದಿಗಿರಿಸಲಾಗಿದೆ' ಎಂಬುದಕ್ಕೆ ಈ ಕೃತಿ ಸಮೂಹವು ಒಂದು ನಿಚ್ಚಳ ಸಾಕ್ಷಿ ಕೂಡ.

೬

ಇಲ್ಲಿಯವರೆಗಿನ ನನ್ನ ದೃಷ್ಟಿಕೋನವನ್ನು ಸಾಂದ್ರವಾಗಿ ನಮಗೆ ಕಟ್ಟಿಕೊಡುವುದು ಶಿವಪ್ರಸಾದರ ಇತ್ತೀಚಿನ ಕೃತಿಗಳು. ಇವುಗಳಲ್ಲಿ ತೊಗಲುಗೊಂಬೆಗಳನ್ನು ಅಳವಡಿಸಲಾಗಿದೆ. ಪಿನ್‌ಅಪ್ ಹುಡುಗಿಯರನ್ನು, ಬೇರೊಂದು

ಕಲಾಪ್ರಕಾರದ ಈಸಲ್ ನೈಜ ಚಿತ್ರಗಳೊಳಕ್ಕೆ ಆ ಹುಡುಗಿಯರು ತರಬಹುದಾದ ಎಲ್ಲ ವಿಚ್ಛಿದ್ರಕಾರಕ ಸಂಬಂಧಗಳ ಅರಿವಿನೊಂದಿಗೇ ಒಳಸೆಳೆದುಕೊಳ್ಳಲಾಯಿತು.

ಮೂಲಭೂತವಾಗಿ ತೊಗಲುಗೊಂಬೆಯ ಚಿತ್ರಗಳು ಒಂದು ಅಭಿವ್ಯಕ್ತಿ ಮಾಧ್ಯಮದ ಅಪೂರ್ಣ ಅವಸ್ಥೆ. ತೊಗಲುಗೊಂಬೆ ನಾಟಕ ನಡೆಯುವಾಗಲಷ್ಟೇ 'ಚಲನಶೀಲವಾಗಿದ್ದು' ಈ ಗೊಂಬೆಗಳು, ಇನ್ನಿತರ ವೇಳೆಯಲ್ಲಿ ಸ್ಥಿರ/ಅಪೂರ್ಣ ಅವಸ್ಥೆಯಲ್ಲಿರುತ್ತವೆ. ಪರದೆಯ ಮೇಲೆ ಮೂಡಿಬರದ ಸಮಯದಲ್ಲಿರುವ ಸಿನಿಮಾ ರೀಲಿನ ಸ್ಥಿತಿಯ ಹಾಗೆ. ಆದರೆ ಶಿವಪ್ರಸಾದರ ಕೃತಿಗಳಲ್ಲಿ ತೊಗಲುಗೊಂಬೆಗಳು ಮತ್ತೊಮ್ಮೆ ವೀಕ್ಷಕ-ಕಲಾಕೃತಿಯ ನಡುವಿನ ಸಂಬಂಧಕ್ಕೆ ಹೊಸ ಅರ್ಥವನ್ನು ಸೇರ್ಪಡೆ ಮಾಡುತ್ತವೆ. ಅರ್ಥಾತ್ ಪಿನ್‌ಅಪ್ ಹುಡುಗಿಯರು ಈಸಲ್ ಚಿತ್ರಗಳಿಗೆ ನೀಡಲು ಆರಂಭಿಸಿದ ಹೊಸ ಅನುಭವವನ್ನು, ಮತ್ತೊಂದು ಹೆಜ್ಜೆ ಮುಂದೆ ಒಯ್ಯುತ್ತವೆ. ಐವತ್ತರ ಹೊಸ್ತಿಲಲ್ಲಿರುವ ಶಿವಪ್ರಸಾದರ ಈಚಿನ ದಿನಗಳ ಕೃತಿಗಳಲ್ಲಿ ಈ ತೊಗಲುಗೊಂಬೆಗಳದ್ದೇ ಆಧಿಪತ್ಯ.

ಕ್ಯಾನ್ವಾಸುಗಳ ಒಳಗೆ ತೊಗಲು-ಚಿತ್ರಗಳು ಪ್ರಥಮತಃ ಕ್ಯಾನ್ವಾಸನ್ನು ನೋಡುವ ರೂಢಿಗತ ಕ್ರಮವನ್ನು ಅಕ್ಷರಶಃ ತಲೆಕೆಳಗು ಮಾಡುತ್ತವೆ. ವಿನೋದಮಯವಾಗಿ ಹೇಳುವುದಾದರೆ, ಈ ಮೂರನೆ ಹಂತದ ಕೃತಿಗಳನ್ನು ನೋಡಿದಾಗ ಒಮ್ಮೆಲೆ ವೀಕ್ಷಕ ತನ್ನ ಕಣ್ಣುಗಳನ್ನು ಒಳಗೊಂಡಿರುವ ತಲೆಯನ್ನು ಸಮಯಿರಿಸಿಕೊಳ್ಳುವ ಬದಲಿಗೆ ಅಡ್ಡಡ್ಡ ನೋಡುವ ಪ್ರಯತ್ನ ಮಾಡುತ್ತಾನೆ/ಳೆ. ಮೇಲಿನಿಂದ ಬೀಳುತ್ತಿರುವಂಥ, ಅಡ್ಡಲಾದ, ತಲೆಕೆಳಗಾದ ತೊಗಲು-ಚಿತ್ರಗಳೆಲ್ಲವೂ ಪ್ರೇಕ್ಷಕರ ಜೋಡಿಕಣ್ಣನ್ನು ಲೇವಡಿ ಮಾಡುತ್ತವೆ. ಚಿತ್ರ ಚೌಕಟ್ಟಿನ 'ಮೇಲೆ' 'ಕೆಳಗೆ' ಎಂಬ ಗುರುತ್ವದ ಅಂಶಗಳು ಪಲ್ಲಟಗೊಳ್ಳುತ್ತವೆ. ಇದು ಭೌತಿಕವಾದ ಒಂದು ಬಗೆಯ ದೃಷ್ಟಿಚಿಕಿತ್ಸಕ ಕ್ರಮ.

"ದ ಚೇರ್" ಎಂಬ ಇಂತಹ ಕೃತಿಯೊಂದರಲ್ಲಿ, ಎಡಕ್ಕೆ ಬ್ರಿಟೀಷರ ಸೈನಿಕನ ತೊಗಲುಚಿತ್ರವೊಂದು ಕುದುರೆಯನ್ನೇರಿ, ಕ್ಯಾನ್ವಾಸಿನ ಎಡ-ಎತ್ತರದ ಫ್ರೇಮಿನ ಮೇಲೆಯೇ, ಅದೊಂದು ದಾರಿಯೋ ಎಂಬಂತೆ “ನಡೆದು' ಹೋಗುತ್ತಿದ್ದಾನೆ. ಚೌಕಟ್ಟಿನ ಮೇಲ್ಭಾಗದಲ್ಲಿ ಆಫ್ರಿಕನ್ ತೊಗಲುಚಿತ್ರವೊಂದು ತಲಕೆಳಗಾಗಿಯೇ ಮುಖವಾಡವೊಂದನ್ನು ಮುಂದಿರಿಸಿಕೊಂಡು 'ಕುಳಿತುಬಿಟ್ಟಿದೆ', ತ್ರಿಶಂಕುವಿನಂತೆ. ಬಲಕ್ಕೆ ಮೈಸೂರಿನ ಸೈನಿಕನ ತೊಗಲು-ಚಿತ್ರ ಕುದುರೆಯ ಮೇಲೇರಿ 'ಇಳಿದು' ಬರುತ್ತಿದೆ. ಕೆಳಭಾಗದಲ್ಲಿ ಪಿನ್‌ಅಪ್ ಹುಡುಗಿಯೊಬ್ಬಳು ಕುರ್ಚಿಯೊಂದರ ಮೇಲೆ ಮಂಡಿಯೂರಿ, ಪೃಷ್ಠವನ್ನು ಮೇಲಕ್ಕೆತ್ತಿ ಬಾಗಿದ್ದಾಳೆ. ಈ ಚಿತ್ರದಲ್ಲಿ ಕಣ್ಣಿಗೊಂದು ಬಗೆಯ 'ಗಡಿಯಾರದ ಮುಳ್ಳು ಚಲಿಸುವ ದಿಕ್ಕಿನ (ಕ್ಲಾಕ್‌ವೈಸ್) ಚಲನೆ' ಕಂಡುಬರುತ್ತದೆ. ಇಲ್ಲಿ ಕಾಣುವ ಚಿತ್ರವನ್ನು ಕೇವಲ 'ಆಕಾರಗಳನ್ನಾಗಿ ಪರಿಶೀಲಿಸಿದಾಗ ಮಾತ್ರ ಈ ಚಲನೆಯನ್ನು ಕಂಡುಕೊಳ್ಳಲು ಸಾಧ್ಯ. ಇಲ್ಲದಿದ್ದಲ್ಲಿ ಈ ಹುಡುಗಿಯ ಆಕಾರವು ಹೆಚ್ಚು

'ಇಂದ್ರಿಯಾಸಕ್ತಿಯನ್ನು ಪ್ರಚೋದಿಸಬಲ್ಲಳು' ಹಾಗೂ 'ಫೋಟೋವನ್ನಾಧರಿಸಿದ ನೈಜ ಹುಡುಗಿ' ಎಂಬ ನಂಬಿಕೆಗಳಿಂದಾಗಿ, ಹೋಲಿಕೆಯ ದೃಷ್ಟಿಯಿಂದ ಹೆಚ್ಚು ನೈಜವೆನ್ನಿಸುತ್ತಾಳೆ. ಇತರ ಮೂರು ಆಕಾರಗಳು 'ನೈಜ' ಪ್ರಪಂಚದಿಂದ, ಛಾಯಾಗ್ರಹಣದ ಮೂಲಕ ಹಾದು, ನಮ್ಮದೃಷ್ಟಿಗೆ ಗೋಚರಿಸಿದಂತಹವಲ್ಲ. ಅವರು ಎಂದೆಂದಿಗೂ "ಒಂದು ಕಲ್ಪಿತ ಜಗತ್ತಿನವರು', ನಿರಂತರವಾಗಿ 'ಕಲ್ಪಿತ ಜಗತ್ತಿಗೇ' ಸೇರಿದವರು. ಅದೇ ಕಾರಣಕ್ಕೆ "ಪದ್ಮ" ಎಂಬ ಕೃತಿಯಲ್ಲಿ ನಿಜಜೀವನದಿಂದ ಮೂಡಿಬಂದಿರುವ ಪದಳು ಬಾಗಿಲಿಗೆ 'ಒರಗಿ ನಿಂತಿದ್ದರೂ' ಸಹ, ಚಿತ್ರದ ಚೌಕಟ್ಟಿನಲ್ಲಿ ಆಕೆ ಮಲಗಿದಂತೆ ಅನ್ನಿಸಿದರೂ ಸಹ, ಆಕೆಯೇ ನಿಜವಾದವಳು. ಆಕೆಯ ಎಡ-ಬಲಕ್ಕೆ ಕೆಳಗಿರುವ ಸೂಪ- ಗರ್ಲ್ ಆಕಾರಗಳು ಕಲ್ಪಿತ ಜಗತ್ತಿನವರು ಎನ್ನಿಸದಿರದು.

'ಬೈನರಿ ಆಪೋಸಿಷನ್ಸ್' ಎಂಬ ಒಂದು ಮುಖ್ಯ ಆಧುನಿಕೋತ್ತರ ಸಾಂಸ್ಕೃತಿಕ ವಿಶ್ಲೇಷಣೆಯ ತಂತ್ರದ ಪದದ ಅರ್ಥವು ಇಲ್ಲಿ ವ್ಯತ್ಯಾಸ ಕಳೆದುಕೊಂಡುಬಿಡುತ್ತದೆ. ಅಂದರೆ ಎರಡು ಅಥವ ಅದಕ್ಕಿಂತ ಹೆಚ್ಚು ವೈರುಧ್ಯಮಯ ಜಗತ್ತಿನ ಮಿಶ್ರಣವಾಗುವಲ್ಲಿ (ಎಕ್ಲಕ್ಟಿಕ್) ಅವುಗಳ ನಡುವಣ ವ್ಯತ್ಯಾಸ ಮಾಯವಾಗುತ್ತದೆ. ಕಾಮಿಕ್ ಪ್ರಪಂಚದ ಸೂಪರ್‌ಗರ್ಲ್, ನೈಜ ಜಗದ ಪದ್ಮ ಶಿವಪ್ರಸಾದರದೇ ಹಳೆಯ ಕೃತಿಗಳ ಪಾರ್ವತಿ, ಹುಲಿವೇಷದವ ಇವರೆಲ್ಲರೂ ಮತ್ತೊಮ್ಮೆ ಒಂದೇ ಚಿತ್ರದ ಚೌಕಟ್ಟಿನೊಳಗೆ ಒಟ್ಟುಗೂಡಿದ್ದಾರೆ -- ಶಿವಪ್ರಸಾದರ ಇತ್ತೀಚಿನ ಕೃತಿಗಳಲ್ಲಿ. ಇದನ್ನು ಎಲ್ಲೆಕ್ಟಿಕ್ ಮಿಶ್ರಣವೆನ್ನುತ್ತೇವೆ. ನೈಜ, ಕಲ್ಪಿತ ಎಂದು ಯಾವ ಎರಡು ರೂಪಗಳನ್ನು ನಾವು ನಿರಂತರವಾಗಿ ವಿಭಾಗಿಸುತ್ತ ಬಂದಿದ್ದೇವೆಯೋ ಅವುಗಳ ನಡುವಣ ವ್ಯತ್ಯಾಸ ಇಲ್ಲಿ ಕಾಣೆಯಾಗುತ್ತದೆ. ಹಲವು ದಶಕಗಳ ಕಾಲ ಕ್ಯಾನ್ವಾಸ್ ಚಿತ್ರಣವನ್ನೇ ಮುಂದುವರೆಸಿಕೊಂಡು, ಅದರ ಒಳಗಿನಿಂದಲೇ ಕಲ್ಪಿತ ನೈಜತೆ ಮತ್ತು ಅಮೂರ್ತತೆಯನ್ನು ಹೀಗೆ ಬೆರೆಸುತ್ತ ಬಂದಿರುವ ಮತ್ತೊಬ್ಬ ಭಾರತೀಯ ಕಲಾವಿದನಿರುವುದು ಅಪರೂಪ. ಕರ್ನಾಟಕದ ಸಂದರ್ಭದಲ್ಲಂತೂ ಇದು ಇನ್ನೂ ಅಪರೂಪ.

ಇನ್ನಿತರ ಎಷ್ಟೋ ಸಾಧ್ಯತೆಗಳಿದ್ದಾಗ್ಯೂ ಪಾರ್ವತಿ, ಪದ್ಮ ಹುಲಿವೇಷದವರನ್ನು ನಮ್ಮ ಜಗತ್ತಿನವರೆಂದು, ಅವರನ್ನು ನೋಡುವಾಗ ನಾವು ಒಪ್ಪಿಕೊಳ್ಳುವಂತೆ, ತೊಗಲಿನ ಚಿತ್ರಗಳನ್ನು ಸ್ವೀಕರಿಸಲಾಗದ ಒಂದು ಮನಸ್ಸಿದೆ. ಆದರೆ ಈ ತೊಗಲುಚಿತ್ರಗಳು ಯಾವ ಜಗತ್ತಿನವು ಎಂಬ ಪ್ರಶ್ನೆ ಉದಯಿಸುತ್ತದೆ. ಅವುಗಳಲ್ಲೂ ಉಪವಿಭಜನೆ ಮಾಡುವಾಗ ಪೌರ್ವಾತ್ಯ-ಪಾಶ್ಚಾತ್ಯ ತೊಗಲುಚಿತ್ರಗಳೆಂಬ ವಿಭಾಗೀಕರಣವು ಉಂಟಾಗುತ್ತದೆ. ಐತಿಹಾಸಿಕ, ಮನೋವೈಜ್ಞಾನಿಕ, ವಸಾಹತು-ವಸಾಹತೋತ್ತರ, ಆಧುನಿಕಪೂರ್ವ-ಆಧುನಿಕೋತ್ತರ ಮಾಧ್ಯಮಗಳೆಂಬ ಅನೇಕ ಕಲಾತ್ಮಕ/ಸಾಂಸ್ಕೃತಿಕ ಸ್ಮೃತಿಗಳು ನಮ್ಮ ಕಣ್ಣಿನ ಮನಸ್ಸಿನಾಳಕ್ಕೆ ದಾಳಿಯಿಡುತ್ತವೆ. (ಲಿಯೊ ಸ್ಟೆನ್‌ಬರ್ಗ್ ಹೇಳುವಂತೆ 'ದ ಐ ಆಫ್ ದಿ ಮೈಂಡ್' ಎಂಬ ರೀತಿಯಲ್ಲಿ ಚಿತ್ರ ನೋಡುವ ಕ್ರಮವಿದು.) ಕಣ್ಣೆದುರಿಗೆ ಕಾಣುವ ಈ ಚಿತ್ರಗಳನ್ನು ಶಿವಪ್ರಸಾದರ ಹಳೆಯ ಚಿತ್ರಗಳ ನೆನಪಿನೊಂದಿಗೆ ಅವುಗಳು ಮೂಡಿ ಬಂದ ಪರಿಸರದ 'ಸಾಂಸ್ಕೃತಿಕ ನೆನಪಿನ' (ನಾಸ್ಟಾಲ್ಜಿಯ) ವಿಶಾಲತೆಯನ್ನು ಸ್ವೀಕರಿಸಿದವರಿಗೆ ಈ ಚಿತ್ರಗಳ ದೃಶ್ಯಗಳು ಪ್ರಜ್ಞಾಪೂರ್ವಕವಾಗಿ ಮೂಡಿಬಂದ ಒಂದು ಅಗಣಿತ ಗಣಿ.

ಸರಳವಾಗಿ ಹೇಳುವುದಾದರೆ ಶಿವಪ್ರಸಾದರ ಕೃತಿಗಳು ಕೇವಲ ಕಣ್ಣಿನ ನೋಟಕ್ಕೆ ಸಿಲುಕುವಂತಹುದಲ್ಲ. ಅದಕ್ಕೆ ಕಾರಣ ಭೌತಿಕವಾಗಿ ನಿಜವಾದರೂ ಸಹ ಅವರ ಕ್ಯಾನ್ವಾಸುಗಳು ಕೇವಲ ಈಸಲ್ ಚಿತ್ರಗಳಾಗಿ ಉಳಿದಿಲ್ಲ.

'ತೊಗಲುಚಿತ್ರಗಳು ಕ್ಯಾನ್ವಾಸಿನಲ್ಲಿ ತೇಲುವಂತೆ ಕಾಣುವುದು' ಕ್ಯಾನ್ವಾಸನ್ನು ನೋಡುವ ರೂಢಿಗತ ಕ್ರಮದಿಂದ ಉಂಟಾಗುವ ಭಾವನೆ. ಆದರೆ ಅಸಲಿ ತೊಗಲುಬೊಂಬೆಯಾಟದಲ್ಲಿ ಬಿಳಿ ಪಂಚೆಯ ಹಿಂದೆ ಬೊಂಬೆಯು ತೇಲುವುದು, ಚಲಿಸುವುದು ಅದರ 'ಅಸಲಿ ನಿಲುವು' ಕೂಡ. ಅಂದರೆ ಈ ಕ್ಯಾನ್ವಾಸಿನಲ್ಲಿ ತೊಗಲುಬೊಂಬೆಯನ್ನು ನೋಡುವಾಗ, ಅದರ ಅಸಲಿ ಆಟ ಹಾಗೂ ಇಲ್ಲಿನ ಅದರ ಪಾತ್ರ ಪರಸ್ಪರ ಘರ್ಷಿಸುತ್ತವೆ. ಅರ್ಥಾತ್ ದೃಶ್ಯವೊಂದನ್ನು ನೋಡುವಾಗ ಕಣ್ಣಿನ ದೃಷ್ಟಿಯು ಸ್ಪಷ್ಟವಾಗಿ, ಭೂತಕಾಲದ 'ನಾಸ್ಟಾಲಿಕ್ ನೆನಪು' (ತೊಗಲು ಗೊಂಬೆಯಾಟದ ನೆನಪು) ಹಾಗೂ ವರ್ತಮಾನದ ಗೋಚರಿತ ದೃಶ್ಯ (ತೈಲವರ್ಣದ ತೊಗಲು ಚಿತ್ರ) ಎಂಬ ಎರಡು ಬಗೆಯ ಅನುಭವಗಳನ್ನು ಪ್ರಸರಿಸುತ್ತವೆ. ಆದರೆ ಅಲ್ಲಿನ ತೊಗಲುಚಿತ್ರಕ್ಕೂ ಅದು ನಿರಂತರವಾಗಿ 'ನೆನಪಿಸುವ' ಅಸಲಿ ತೊಗಲುಗೊಂಬೆಯಾಟಕ್ಕೂ ಇರುವ ವ್ಯತ್ಯಾಸವು ಬೆಳಕಿನಿಂದುಂಟಾದುದು. ಅಸಲಿ ಆಟದಲ್ಲಿ ಪಂಜಿನ ಬೆಳಕು ಈ



ತೊಗಲಿನ ಆಕಾರದ ಮೂಲಕ ಹಾಯ್ದು ಅದರ ಮುಂದಿರುವ ಬಿಳಿ ಪರದೆಯ ಮೇಲೆ ಬೀಳುತ್ತದೆ. ಅದೊಂದು ರೀತಿಯಲ್ಲಿ ಸ್ಲೈಡ್ ಬಿಂಬವನ್ನು ಹಾಯಿಸಿದಂತೆ. ಅಲ್ಲಿ ಕಣ್ಣೆದುರಿಗೆ ಕಾಣುವ ಕ್ಷಣಿಕ ಬಿಂಬವೊ, ಸತ್ಯವೋ; ಅದು ಮೂಡಲು ಕಾರಣವಾದ ಮೂಲ ತೊಗಲುಗೊಂಬೆ 'ಅಸಲಿಯೋ' ಎಂಬುದೊಂದು ತಾತ್ವಿಕ ಪ್ರಶ್ನೆ. ತೊಗಲುಗೊಂಬೆಯಾಟದ ಮೂಲ ಸ್ವರೂಪಕ್ಕೆ ನಿರ್ದಿಷ್ಟವಾದ ಈ ಪ್ರಶ್ನೆಗೆ ಉತ್ತರ ಈ ಕ್ಯಾನ್ವಾಸ್ ಚಿತ್ರಗಳಲ್ಲಿವೆ.

ತೊಗಲುಗೊಂಬೆಯನ್ನು ಶಿವಪ್ರಸಾದ್ ಚಿತ್ರಿಸುವುದು ಥಿಕ್ ಇಂಪಾಸ್ಟೋ ತಂತ್ರದಲ್ಲಿ, ಅಂದರೆ ಈ ಬೊಂಬೆಯ ಮೂಲಕ ಎರಡು ಬಗೆಯಲ್ಲಿ, ಅದಕ್ಕೆ ರೂಢಿಗತವಲ್ಲದ ಕಾರ್ಯ ನಿರ್ವಹಿಸುವಂತೆ ಉತ್ತೇಜಿಸಿದಂತಾಯಿತು. ಮೊದಲನೆಯದಾಗಿ, ತನ್ನ ಮೂಲಕ ಬೆಳಕನ್ನು ಸ್ವೀಕರಿಸುತ್ತಿದ್ದ ಗೊಂಬೆಯು, ಈಗ ಕ್ಯಾನ್ವಾಸುಗಳಲ್ಲಿ ತಾನು ರೂಪಿತವಾಗಿರುವ ತೈಲವರ್ಣದ 'ಮೇಲೆ' ಬೆಳಕನ್ನು ಸ್ವೀಕರಿಸುತ್ತಿದೆ. ಎರಡನೆಯದಾಗಿ, ಇಂಥ ಕ್ಯಾನ್ವಾಸುಗಳನ್ನು ನೋಡುವಾಗ ಇರುವ ಗ್ಯಾಲರಿಯ ಬೆಳಕಿನ ಏರಿಳಿತದ ಆಧಾರದ ಮೇಲೆಯೇ ವೀಕ್ಷಕನು ಅದನ್ನು ನೋಡುವ ಹತ್ತಿರ/ದೂರ ಅಂತರವನ್ನಾಧರಿಸಿಯೇ, ಅದರ ರೂಪವು ಅಯೋಮಯವಾಗಿ ಗೋಚರಿಸುತ್ತದೆ. ಈ ಅಯೋಮಯ ಗುಣವೇ ಈ ಹಿಂದೆ ಚರ್ಚಿಸಲಾದ ಸೂತ್ರಧಾರನ/ಳ ಗುಣವು ಕೂಡ. ಆತ/ಆಕೆ ಒಂದು ಕಥಾನಕವನ್ನು ಅರ್ಥೈಸಲು ಕೆಟಲಿಸ್ಟ್ ಇದ್ದ ಹಾಗೆ. ಆದರೆ ಕೆಲವೊಮ್ಮೆ ಆತ ತನ್ನದೇ ತರ್ಕದ ಆಧಾರದ ಮೇಲೆ ದೃಶ್ಯಕಥನದ ಸ್ವರೂಪವನ್ನೂ ಮಾರ್ಪಡಿಸಿಬಿಡಬಲ್ಲ.

ಪಿನ್‌ಅಪ್ ಹುಡುಗಿಯರು ಹಾಗೂ ತೊಗಲುಗೊಂಬೆ ಆಕಾರಗಳು ಶಿವಪ್ರಸಾದರ ಕೃತಿಗಳಲ್ಲಿ ಈ ಸೂತ್ರಧಾರನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತಾರೆ. ಅರ್ಥಾತ್ ಒಂದು ವಾಚ್ಯಕಥನ, ಒಂದು ರಂಗಭೂಮಿ, ಒಂದು ಜನಪ್ರಿಯ ಕಲಾ ಪ್ರಕಾರ, ಫೋಟೋಗ್ರಫಿ ಮತ್ತು ಈಸಲ್ ಚಿತ್ರ - ಇನ್ನೂ ಸಂಪ್ರದಾಯಗಳು ಒಟ್ಟಾಗಿ, ಸ್ವಪ್ರಜ್ಞೆಯಿಂದಲೇ ಶಿವಪ್ರಸಾದರ ಕೃತಿಗಳಲ್ಲಿ ಬೆರೆಯುವುದಕ್ಕೆ ಮುಖ್ಯ ಕಾರಣವೊಂದಿದೆ. 'ವೀಕ್ಷಕರು ಪ್ರೇಕ್ಷಕರಾಗಿ ಕಲಾಕೃತಿಗಳ ಅಂಗಳವನ್ನು - ಕೇವಲ ದೃಷ್ಟಿ ಪ್ರವೇಶಿಕೆಯಿಂದಷ್ಟೇ ಅಲ್ಲದೆ - ದೈಹಿಕವಾಗಿಯೂ ಪ್ರವೇಶಿಸುವಂತಾಗಬೇಕು. ತನ್ಮೂಲಕ ಭೌತಿಕವಾಗಿ ಸತ್ಯವಾದ ಜನಸಮೂಹದ ಸಮಾಜವಾದಿ ಚಳುವಳಿಯ ಅನುಭವವು, ಕಲಾತ್ಮಕವಾಗಿಯೂ ಸಾಧ್ಯವಾಗಬೇಕು. ಕಲಾವಿದನಾದ ಸಮಾಜವಾದಿಯೊಬ್ಬ ಘೋಷಣೆಗಳ ಮಿತಿಯನ್ನು, ಅರ್ಥವನ್ನು ಮೀರಿದ ಸಾಮಾಜಿಕ ಅನುಭವವೊಂದನ್ನು ಕಲಾತ್ಮಕವಾಗಿ ನಿರ್ಮಿಸಬೇಕು. ಈ ಅಂಶಗಳು ಇಲ್ಲಿಯವರೆಗಿನ ಶಿವಪ್ರಸಾದರ ಒಟ್ಟಾರೆ ಕೃತಿಗಳ ಸತ್ವವೆನ್ನಬಹುದು.

ದೃಶ್ಯೀಕರಣದ ಮನೋವಿಜ್ಞಾನದ ಕೋನದಿಂದ ಹೇಳುವುದಾದರೆ ತೊಗಲುಚಿತ್ರಗಳ ಕೃತಿಸಮೂಹವು ವೀಕ್ಷಕನ ಮಾನಸಿಕ ಗುರುತ್ವವನ್ನು ತೊಡೆದುಹಾಕುತ್ತದೆ. ಅನುಭವದ ಅತೀತತೆಯಲ್ಲಿ ಅಷ್ಟೇ ಸಾಮಾನ್ಯವಾಗಿ ವ್ಯಕ್ತಿಯೊಬ್ಬ ಈ ಬಗೆಯ ಗುರುತ್ವ ಕಳೆದುಕೊಳ್ಳಬಲ್ಲ. ಮತ್ತು ಆಧುನಿಕ ಚಿತ್ರ-ಶಿಲ್ಪಗಳಲಲ್ಲದೆ, ಭಿನ್ನ ಭಿನ್ನ ಕಲಾರೂಪಗಳಲ್ಲಿಯೂ ಇಂತಹ ಗುರುತ್ವರಹಿತ ಗುಣ ಕಂಡುಬರಬಲ್ಲದು. ದೇವಾಲಯ, ಚರ್ಚ್ ಮುಂತಾದ ಧಾರ್ಮಿಕ ಸ್ಥಳಗಳಲ್ಲಿ ವಿಫುಲವಾಗಿರುವ ಸೀಲಿಂಗ್-ಮ್ಯೂರಲ್‌ಗಳ (ಮೇಲ್ಚಾವಣಿಯ ಚಿತ್ರ) ವೀಕ್ಷಕನನ್ನು, ಕತ್ತು ಮೇಲಕ್ಕೆ ಎತ್ತುವಂತಹ ಸರಳ ದೈಹಿಕ ಚಲನೆಯಲ್ಲಿ ತೊಡಗಿಸಿರುವುದರಿಂದ ಇಲ್ಲಿಯೂ ಈ ಗುರುತ್ವ ನಾಶದ ಅಂಶ ಕಂಡುಬರುತ್ತದೆ. ಆದ್ದರಿಂದಲೇ 'ನೈಜಜಗತ್ತನ್ನು ರೂಪಿಸುವ ಸಂಯೋಜನೆಗಳು ಮೇಲ್ಚಾವಣಿ ಚಿತ್ರಗಳಲ್ಲಿ (ಉದಾಹರಣೆಗೆ: ಮಿಕಂಜಲೋವಿನ 'ಜೆನಿಸಸ್ ಆಫ್ ಅರ್ಥ್", ಬಿನೋದ್ ಬಿಹಾರಿ ಮುಖರ್ಜಿಯ ಶಾಂತಿನಿಕೇತನದ ಮೇಲ್ಚಾವಣಿಯ ಮ್ಯೂರಲ್, ಇತ್ಯಾದಿ) ಕಂಡುಬರುವುದಿಲ್ಲ. ಅಂತಲ್ಲಿ ಅಮೂರ್ತ ಜಿಯಾಮಿಟ್ರಿ ಆಕಾರಗಳಿರುತ್ತವೆ. ಅಥವ ಇದು ಆಕಾಶ, ಇದು ಭೂಮಿ' ಎಂಬ ಕಲ್ಪನೆ ಮಾಯವಾಗುವಂತಹ ಆದಿಭೌತಿಕ ಅನುಭವ ನೀಡುವ 'ಜೆನಿಸಸ್ ಆಫ್ ಅರ್ಥ್' ಅಥವ ಒಂದು ಒಟ್ಟಾರೆ ಜನ ಸಮೂಹದ ಇತಿಹಾಸದ ಕಥೆಗಳನ್ನು ಕಟ್ಟಿಕೊಡುವಂತೆ ಸಂಯೋಜನೆಯನ್ನು ರೂಪಿಸಲಾಗಿರುತ್ತದೆ. ಇದೊಂದು ನೈಜ-ಸ್ಥಳಾವಕಾಶದ 'ಸ್ಥಾನ ಪಲ್ಲಟವೂ' ಹೌದು.

ಕೆ.ಟಿ. ಶಿವಪ್ರಸಾದ್/೧೬

ಆದರೆ ತೊಗಲುಬೊಂಬೆ ಚಿತ್ರಗಳು ಸಂಯೋಜನಾ ಚಾತುರ್ಯದ ಆಧಾರದ ಮೂಲಕ, ಅದೂ ಈಸಲ್ ಚಿತ್ರಸಂಪ್ರದಾಯದ ಚೌಕಟ್ಟಿನೊಳಗಿನಿಂದಲೇ ವೀಕ್ಷಕರ ಈ ಆದಿಭೌತಿಕ ಅನುಭವ, ಭಾಗವಹಿಸುವಿಕೆಯು ಉಂಟಾಗುವಂತೆ ಮಾಡುತ್ತವೆ. ನೈಜತೆಯ ಹೊರಗಿರುವ ದೃಶ್ಯ, ನೆನಪು, ನಾಸ್ಟಾಲ್ಡಿಯಾ ಇತ್ಯಾದಿಗಳೆಲ್ಲವೂ, (ಅಂದರೆ ಭೂತಕಾಲವೆಲ್ಲವೂ) ಸಂಗ್ರಹ ರೂಪದಲ್ಲಿ ಭವಿಷ್ಯತ್ತಿನ ತಾರ್ಕಿಕ ನೆಲೆಯಲ್ಲಿ (ಈಸಲ್ ಚಿತ್ರವು ತಾರ್ಕಿಕ ಯುಗದ ಶಿಶು) ಅಭಿವ್ಯಕ್ತಿಗೊಳ್ಳುವುದು ಶಿವಪ್ರಸಾದರ ಕೃತಿಗಳ ಒಟ್ಟಾರೆ ಸಾಧನೆ.

## ಪ ರಿ ಸ ಮಾ ಪ್ತಿ

ಶಿವಪ್ರಸಾದ್ ಇನ್ನೂ ಜೀವಂತವಿರುವ ಕಲಾವಿದ. ಆದ್ದರಿಂದ ಅವರ ಇಲ್ಲಿಯವರೆಗಿನ ಕಲಾ ಜೀವನವನ್ನು ಕುರಿತು ಸಂಗ್ರಹರೂಪದಲ್ಲಾಗಲಿ ಅಥವ ಆತ್ಯಂತಿಕವಾಗಿಯಾಗಲೀ ಕ್ರೋಢೀಕರಿಸುವುದು ತಪ್ಪಾಗುತ್ತದೆ. ಮೂವತ್ತು ವರ್ಷದ ಅವರ ಸಾಧನೆಯನ್ನು ಕುರಿತು ಒಂದು ಪಕ್ಷಿನೋಟವೂ ಸಹ ಅಸಾಧ್ಯ. ಏಕೆಂದರೆ ಕಲಾವಿದನೊಬ್ಬನ ಕುರಿತಾದ ವಸ್ತುನಿಷ್ಠ ಪಕ್ಷಿನೋಟವೂ' ಒಂದು ಕಲ್ಪಿತ ನಂಬಿಕೆಯಾಗುತ್ತದೆಯಷ್ಟೆ. ಭಾಷಾಶಾಸ್ತ್ರದ ನೆಲೆಯಿಂದ ಚಿಂತಿಸುವುದಾದರೆ, ಶಿವಪ್ರಸಾದರನ್ನು (ಅಂತೆಯೇ ಯಾವುದೇ ಕಲಾವಿದನನ್ನು ಕುರಿತ ಯಾವುದೇ ಮಾಹಿತಿಯು ಒಂದು ನಿರ್ಮಿತಿ (ಕನ್‌ಸ್ಟಕ್ಸ್) ಆಗುತ್ತದೆಯಷ್ಟೇ. ಈ ರೀತಿಯ ಹಲವು ನಿರ್ಮಿತಿಗಳೂ ಸಾಧ್ಯ. ಮಾಹಿತಿ ನೀಡುವ ನಿರ್ಮಿತಿಗಿಂತಲೂ ಅದರೊಂದಿಗೆ ವಿಶ್ಲೇಷಣಾತ್ಮಕ ನಿರ್ಮಿತಿಯ ಬೆಸುಗೆ ಉತ್ತಮ. ಈ ಪುಸ್ತಕ ಅಂತಹ ಒಂದು ಪ್ರಯತ್ನ,

ಇಲ್ಲಿಯವರೆಗಿನ ಈ ಬರಹದ ತಿರುಳನ್ನು ಕೆಳಕಂಡಂತೆ ಸಂಗ್ರಹಿಸಬಹುದು: ತೈಲವರ್ಣದ ಮಾಧ್ಯಮವನ್ನು ನಿರಂತರವಾಗಿ ಬಳಸುವ ಮುಖಾಂತರ ಶಿವಪ್ರಸಾದರು ಅದಕ್ಕೊಂದು ವೈಯಕ್ತಿಕ ವ್ಯಕ್ತಿತ್ವವನ್ನು ನೀಡಿದ್ದಾರೆ. ಈ ವ್ಯಕ್ತಿತ್ವವು ಸ್ವ-ವಿಮರ್ಶಕ ಗುಣವನ್ನು ಹೊಂದಿದೆ. ಏಕೆಂದರೆ ಒಂದು ಹಂತದವರೆವಿಗೂ ಪಾಶ್ಚಾತ್ಯ, ಅಸಲಿ ಸಂದರ್ಭದಲ್ಲಿ ತೈಲವರ್ಣವು, ಆಧುನಿಕ ಯುಗದ ಮುನ್ನ ಹೇಗೆ ಏಕೆ ಬಳಕೆಯಾಗುತ್ತಿತ್ತೋ ಅದೇ 'ನೈಜತೆ'ಯ ಆವರಣದೊಳಗಿನಿಂದಲೇ ಕಾರ್ಯ ನಿರ್ವಹಿಸುತ್ತಿತ್ತು. ಕ್ರಮೇಣ -- ಈ ಮುನ್ನ ವಿವರಿಸಲಾದ ಶಿವಪ್ರಸಾದರ ಕೃತಿಗಳ ಮೂರು ಹಂತಗಳಲ್ಲಿ ಎರಡು ಹಾಗೂ ಮೂರನೇ ಹಂತಗಳಲ್ಲಿನ ತೈಲವರ್ಣದ ಬಳಕೆಯ ಕ್ರಮವು ಬದಲಾಗತೊಡಗಿತು. ಇದಕ್ಕೆ ಕಾರಣ ಸೌಂದರ್ಯಾತೀತವಾದುದು. ಕೇವಲ ಶುದ್ಧ ಸೇಂದ್ರೀಯ (ಸನ್ಮುಯಲ್) ನಿಟ್ಟಿನಿಂದ ವೀಕ್ಷಿಸಿದರೂ ಸಹ ಈ ಥಿಕ್ ಇಂಪಾಸ್ಟೋ ತಂತ್ರವು ರೂಢಿಬದ್ಧವಾಗಿದ್ದ (ಶಿವಪ್ರಸಾದರದ್ದೇ ಹಳೆಯ ಕೃತಿಗಳಲ್ಲಿದ್ದಂತೆ) 'ದೃಶ್ಯ-ಆಹ್ಲಾದವನ್ನು ತ್ಯಜಿಸುತ್ತವೆ. ದೃಶ್ಯಶಿಕ್ಷಣ ಮತ್ತು ದೃಶ್ಯಜ್ಞಾನವು ಕ್ಷೀಣವಾಗಿರುವ ಜನಸಮೂಹಕ್ಕಾಗಿ ಸೃಷ್ಟಿಗೊಂಡಿರುವ ಈ ಕೃತಿಗಳಲ್ಲಿನ ಥಿಕ್ ಇಂಪಾಸ್ಟೋ ತಂತ್ರಗಾರಿಕೆಯು (ಈ ತಂತ್ರದ ಕಾರಣದಿಂದಾಗಿಯೇ) ಒಂದರ್ಥದಲ್ಲಿ ಜನಾಕರ್ಷಕ ಗುಣವನ್ನು ಕಳೆದುಕೊಂಡು ಬಿಡುತ್ತವೆ. ಈ ಜನಾಕರ್ಷಕ ಗುಣವು ಒಂದು ಬಗೆಯ ದೃಶ್ಯದಾರಿದ್ರವನ್ನು ಹೆಚ್ಚು ಮಾಡಬಲ್ಲ, ನಮ್ಮ ಅನುಭವದ ಜಗತ್ತನ್ನು ವಿಸ್ತರಿಸಲಾಗದ ಕ್ಲೀಷಾತ್ಮ 'ಗುಣ'. ಥಿಕ್ ಇಂಪಾಷ್ಟೋ ತಂತ್ರಗಾರಿಕೆಗೆ ಒಂದು ಊರ್ಧ್ವ ಮುಖವಿದೆ. ಶಿವಪ್ರಸಾದರ ಇಂತಹ ಕ್ಯಾನ್ವಾಸುಗಳು

ಒರಟು ಮೈವಳಿಕೆ ಹೊಂದಿರುವುದರಿಂದಲೇ ಕೇವಲ ಸೌಂದರ್ಯಾತ್ಮಕತೆಗೆ ಮಿತಿಗೊಂಡ ಅನುಭವ ನೀಡಲು ನಿರಾಕರಿಸುತ್ತವೆ. ಬದಲಿಗೆ ಒರಟಾದ, ಅಪೂರ್ಣವಾದ, ಭಿತ್ತನೆಯ ಮುಂಚಿನ ಉತ್ತಿದ ನೆಲದಂತಹ ಉಬ್ಬುಗೆತ್ತನೆಯ ಅನುಭವವನ್ನು ವೀಕ್ಷಕರ ಕಣ್ಣಿಗೆ ನೀಡುತ್ತದೆ. ಯಾವುದೇ ಚಿತ್ರಿತ 'ಆಕಾರ'ಗಳಿದ್ದಾಗಲೂ (ಪಿನ್‌ಅಪ್ ಹುಡುಗಿಯರು, ತೊಗಲುಬೊಂಬೆ ಇತ್ಯಾದಿ) ಸಹ ಈ ಪ್ರಾಥಮಿಕ ಅನುಭವದಿಂದ ವೀಕ್ಷಕ ತಪ್ಪಿಸಿಕೊಳ್ಳಲಾರ. ಶಿವಪ್ರಸಾದರು ಜೀವಿಸಿರುವ ಕಲೆಯ ಆರ್ಥಿಕ ಸಂದರ್ಭದಲ್ಲಿ ಅವರ ಸಪೂರ ಚಿತ್ರಣಕ್ರಮಕ್ಕೆ ಮಾರುಕಟ್ಟೆಯಲ್ಲಿ ಆದ್ಯತೆಯಿದ್ದಾಗಲೂ ಅವರು ಅದನ್ನು ತೊರೆದು ಕಡಿಮೆ ಜನಪ್ರಿಯ ಶೈಲಿಗೆ ಬದಲಾಗಿರುವು, ಅವರ ಕೃತಿಗಳ ಗಾಂಭೀರ್ಯಕ್ಕೊಂದು ಸಾಕ್ಷಿಯಷ್ಟೆ. ಆದರೆ ಈ ಅನುಭವದೊಂದಿಗೇ, ಭೌತಿಕವಾಗಿ ಕ್ಯಾನ್ವಾಸಿನ ಮೇಲೆ ಈ ಬಗೆಯ ತೈಲದ ಬಳಕೆಯ ಮೂಲಕವೇ ಮೂಡಿರುವ ಆಕಾರಗಳು ನೀಡುವ 'ಅರ್ಥ'ದ ಅನುಭವವು ಸೇರಿಯಷ್ಟೇ ಒಂದು ಒಟ್ಟಾರೆ ದೃಶ್ಯಾರ್ಥ ಅನುಭವವಾಗುತ್ತದೆಂಬುದನ್ನು ನಾವು ಮರೆಯಬಾರದು. ಈ ಬಗೆಯ ಸಮಗ್ರತೆಯ ದೃಶ್ಯಾರ್ಥಕ್ಕೆ ಪ್ರಸ್ತುತ ದೃಶ್ಯ ಚಿಂತನಾಕ್ರಮದಲ್ಲಿ ಹೆಚ್ಚು ಮನ್ನಣೆ ಇರುವುದು.

ಕೆ.ಟಿ. ಶಿವಪ್ರಸಾದ್/೧೭

ಶಿವಪ್ರಸಾದ್ ಚಿತ್ರಿಸಿರುವ 'ರೀತಿ' (ಶೈಲಿಯಲ್ಲ!) ಇದಾದರೆ ಎರಡು ಹಾಗೂ ಮೂರನೇ ಹಂತದ ಕೃತಿಗಳಲ್ಲಿ ಪಿನ್‌ಅಪ್ ಹುಡುಗಿಯರು ಹಾಗೂ ತೊಗಲುಗೊಂಬೆಗಳ ಆಯ್ಕೆಯು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿಯೇ ಬಳಕೆಯಾಗುವುದನ್ನು ಕುರಿತು ವಿವರಿಸಿದ್ದೇನೆ. ಹುಡುಗಿಯರನ್ನು ಬಳಸುವ ಕ್ರಮದಿಂದಾಗಿಯೇ ಏಕಾಂಗಿಯಾಗಿ, ಸೌಂದರ್ಯೇತರ ಉದ್ದೇಶಕ್ಕಾಗಿ ಬಳಕೆಗೊಳ್ಳುತ್ತಿದ್ದ ನೋಟವನ್ನು ಸಾಮೂಹಿಕ ವೀಕ್ಷಣಾಕ್ರಮದ ಪರಿಧಿಗೆ ಎಳೆತಂದಂತಾಗುತ್ತದೆ. ಇದೊಂದು ರೂಢಿಗತವಾದ ಅರ್ಥದಲ್ಲಿ ಬಹಿಷ್ಟವಾದ ಕ್ರಮ. ಇದನ್ನು ಮತ್ತೊಂದು ರೀತಿಯಲ್ಲಿ ವಿವರಿಸಬಹುದು. ದಿನನಿತ್ಯ ಜೀವನದಲ್ಲಿ ನಾವು ನಮ್ಮದೇಹಗಳನ್ನು ತೀರ ವೈಯಕ್ತಿಕವಾಗಿ ಬಳಸುವುದು ಬಚ್ಚಲು ಮನೆ ಮತ್ತು ಮಲಗುವ ಕೋಣೆಯಂತಹ ಕಡೆ. ಅಲ್ಲಿ ನಮ್ಮ ದೈಹಿಕ ಭಂಗಿಗಳಿಗೆ ಇತರರ ಕಣ್ಣುಗಳ, ನೋಟದ ಆವರಣವಿರುವುದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಸಾಮೂಹಿಕ ಪ್ರದೇಶಗಳಲ್ಲಿ, ಒಂದು ಗುಂಪು ಜನರೆದುರು, ಅವರ ಗಮನ ಸೆಳೆದು ಅವರೊಂದಿಗೆ ಒಡನಾಡುವಾಗ, ಕ್ಯಾಮೆರವೊಂದು ನಮ್ಮನ್ನು ಕೇಂದ್ರವಾಗಿಸಿರುವಾಗ, ನಮ್ಮಮೈಯೆಲ್ಲ ಕಣ್ಣಾಗಿರುತ್ತದೆ. ನಮ್ಮನಿಲುವು, ಮಾತು, ಸಂಜ್ಞೆ ಇತ್ಯಾದಿಗಳನ್ನೆಲ್ಲ – ನಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಅದುಮಿರಿಸಿಕೊಂಡು ಪ್ರಜ್ಞಾಪೂರ್ವಕವಾಗಿ ಬಳಸಬೇಕಾಗುತ್ತದೆ. ಫ್ರಾಯ್ಡ್ ಹೇಳುವ ಇದ್, ಈಗೋ ಮತ್ತು ಸೂಪರ್-ಇಗೋಗಳ ನಡುವಿನ ವ್ಯತ್ಯಾಸವೆಂದರೆ ಈ ತರಹದ ವಿಭಿನ್ನ ನಡವಳಿಕೆಯ ಕ್ರಮಗಳೇ. ಪಿನ್‌ಅಪ್ ಹುಡುಗಿಯರನ್ನು ಬೃಹದಾಕಾರದಲ್ಲಿ, ಥಿಕ್ ಇಂಪಾಸ್ಟೋ ತಂತ್ರದಲ್ಲಿ ಕ್ಯಾನ್ವಾಸಿನ ಮೇಲೆ ಚಿತ್ರಿಸುವಾಗ ಶಿವಪ್ರಸಾದ್ ಇದೇ ಇದ್, ಈಗೋ ಹಾಗೂ ಸೂಪರ್ ಈಗೋವನ್ನು ಬೆಸೆದುಬಿಡುತ್ತಾರೆ. ಅರ್ಥಾತ್ ಬಚ್ಚಲು ಮನೆಯಲ್ಲಿನ

ಒಬ್ಬನ/ಳ ಏಕಾಂತದ ನಡವಳಿಕೆಗಳನ್ನು ಊರ ಮುಂದಿನ ಸಾರ್ವಜನಿಕ ಸಭಾಂಗಣಕ್ಕೆ ಧುತ್ತನೆ ಸ್ಥಳಾಂತರಿಸಿಬಿಟ್ಟರೆ ಆಗುವ ಸಾಂಸ್ಕೃತಿಕ ಶಾಕ್ ಈ ಕ್ಯಾನ್ವಾಸುಗಳಲ್ಲಿ ಉಂಟಾಗುತ್ತದೆ.

ಮತ್ತೊಂದು ರೀತಿಯಲ್ಲಿ ವಿವರಿಸುವುದಾದರೆ, ಗ್ಯಾಲರಿಗಳಲ್ಲಿ ಸಾಮಾನ್ಯ ಕ್ಯಾನ್ವಾಸುಗಳ ಎದುರಿಗೆ ಪ್ರೇಕ್ಷಕನಿಗೆ ಉಂಟಾಗಬಹುದಾದ ಸಲೀಸುತನವು ಇಲ್ಲಿ ತನ್ನ ಗುರುತ್ವವನ್ನು ಕಳೆದುಕೊಂಡು ಬಿಡುತ್ತದೆ. ಅರ್ಥಾತ್ ಈ ಕ್ಯಾನ್ವಾಸುಗಳನ್ನು ಸಲೀಸಾಗಿ ನೋಡುವಾಗ ವೀಕ್ಷಕ ಹೊಸದೊಂದು ಚಟುವಟಿಕೆಯುಳ್ಳ 'ಪಾತ್ರ'ವನ್ನೇ ನಿರ್ವಹಿಸಲು ತಯಾರಾಗುತ್ತಾನೆ/ಳೆ. ಅದೂ ಈ ಚಿತ್ರಗಳ ಸೌಂದರ್ಯಾತ್ಮಕ/ರೂಪಾಂಶಗಳ ಸಂಯೋಜನೆ ಹಾಗೂ ರಚನಾತಂತ್ರದ ಮೂಲಕವೇ, ಅದರೊಳಗಿನಿಂದಲೇ ಈ ಪರಿಣಾಮವನ್ನು ಉಂಟು ಮಾಡುವುದು ಶಿವಪ್ರಸಾದರ ಒಂದು ಶಕ್ತ ಅಂಶ.

ಈಗಾಗಲೇ ವಿವರಿಸಿರುವಂತೆ ಶಿವಪ್ರಸಾದರ ಕ್ಯಾನ್ವಾಸುಗಳೊಳಕ್ಕೆ ತೊಗಲುಗೊಂಬೆಗಳ-ಚಿತ್ರಗಳ ಅಳವಡಿಕೆಯು ವೀಕ್ಷಕನನ್ನು ಮತ್ತೂ ಒಂದು ಹೆಜ್ಜೆ ಕೃತಿಯ ಒಳಕ್ಕೆ ಎಳೆದೊಯ್ಯುತ್ತದೆ. ಹೊಸಬಗೆಯ ಸೂತ್ರಧಾರಿಯ ಪಾತ್ರವನ್ನು ಈ ಬೊಂಬೆಗಳು ನಿರ್ವಹಿಸಲು ಪ್ರಾರಂಭಿಸುತ್ತವೆ. ಇದಕ್ಕಿರುವ ಕಾರಣವಂತೂ ವಿಶೇಷವಾದುದೇ. ಸಾಹಿತ್ಯಕವಲ್ಲದ ಕಲಾಪ್ರಕಾರಗಳನ್ನು ಅನುಭವಿಸುವ' ಒಂದು ಶಿಸ್ತು ನಮ್ಮ ಸಂದರ್ಭದಲ್ಲಿ (ಕರ್ನಾಟಕ, ಭಾರತ) ಇಲ್ಲದಿರುವುದು ದೃಶ್ಯಕಲಾ ಮೀಮಾಂಸೆಯ ದಾರಿದ್ರಕ್ಕೆ ಒಂದು ಕಾರಣ. ಎಲ್ಲೆಲ್ಲಿ ಈ ಬಗೆಯ ಸಾಹಿತ್ಯಕ ಪರಿಜ್ಞಾನವು ಅಸಾಹಿತ್ಯಕ ಕಲೆಗಳಿಗೆ ದಕ್ಕಿರುವುದಿಲ್ಲವೋ ಅಲ್ಲೆಲ್ಲ ಪರ್ಯಾಯ ಮಾರ್ಗಗಳ ನಿರಂತರ ಶೋಧನೆ ನಡೆಯುತ್ತಿರುತ್ತದೆ. ಅರ್ಥಾತ್ ದೃಶ್ಯಕಲಾ ಪ್ರಕಾರವೇ, ತಮಗಿಂತ ಮುಂಚೆ ಆಗಿ ಹೋದ ದೃಶ್ಯ ಕಲಾಕೃತಿಗಳಿಗೊಂದು 'ವಿಶ್ಲೇಷಣೆ'ಯಾಗಿ ರೂಪಗೊಳ್ಳುತ್ತವೆ. ಶಿವಪ್ರಸಾದರ ಕೃತಿ ಸಮೂಹವನ್ನು ಈ ರೀತಿಯ ತಮ್ಮ ಮುಂಚಿನ ಮತ್ತು ಸಮಕಾಲೀನ ಕರ್ನಾಟಕ/ಭಾರತೀಯ ನೈಜ ಆವರಣಗಳಲ್ಲಿ ಅತೀವ ನಿಷ್ಠೆ ಹೊಂದಿರುವ ಕೃತಿಗಳ ಪುನರ್ ವ್ಯಾಖ್ಯನವೆನ್ನಬಹುದು. ಈ ಬಗೆಯ ಅರ್ಥೈಸುವಿಕೆ ಅನಿವಾರ್ಯ ಕೂಡ. ಉದಾಹರಣೆಗೆ ಸುಧೀರ್ ಪಟವರ್ಧರ ಕೃತಿಗಳೊಳಗೆ ಸರಳ-ನೈಜ ಚೌಕಟ್ಟಿನೊಳಗೆ ಮನುಷ್ಯಾಕಾರಗಳು ನಿರ್ವಹಿಸುವ ಕಾರ್ಯವನ್ನು ಶಿವಪ್ರಸಾದರ ಕೃತಿಗಳು ಹೆಚ್ಚು ಪ್ರೌಢವಾಗಿ, ಅದೂ ಕೇವಲ ಮನುಷ್ಯಾಕಾರಗಳ ಆಧಾರದಿಂದ ಮಾತ್ರವಲ್ಲದೆ, ಹೆಚ್ಚು ಅಮೂರ್ತ ರೂಪಾಂಶಗಳ ಮುಖೇನವೂ ಸಹ ನಡೆಸಿ ಕೊಡುವುದೊಂದು ವಿಶೇಷ. ಈ ಮುಂಚೆಯೇ ಹೇಳಿದ್ದೆ - "ನೈಜಪ್ರಕಾರದೊಳಗಿನ ಆಕಾರಗಳು' ಸಾಧಿಸಿದ್ದೇ ನೈಜ ಪ್ರಕಾರಗಳ ಸಾಧನೆಯೂ ಹೌದು" ಎಂದು. ಅದನ್ನು ಮೀರಿದ ಸಾಧನೆಗಾಗಿ ನೈಜ ಕಲಾಕಾರರು ಫಣಿಕ್ಕರ್ ಮತ್ತು ಜೆಮಿನಿರಾಯರಂತೆ ನೈಜತೆಯ ಆವರಣವನ್ನು

ಸಾರಾಸಗಟಾಗಿ ತ್ಯಜಿಸಿ ಹೊರನಡೆದರೇ ಹೊರತು ಶಿವಪ್ರಸಾದರಂತೆ ಅದರೊಳಗಿನಿಂದಲೇ, ಅದರದೇ ಪರಿಕರಗಳನ್ನು ಉಪಯೋಗಿಸಿ 'ಸ್ವಯಂ ಚಿಕಿತ್ಸಕ' ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಿಲ್ಲ.

ಆದ್ದರಿಂದಲೇ ಶಿವಪ್ರಸಾದ್ ಕರ್ನಾಟಕದ 'ಜನಪರ' ಗುಂಪಿನ ಅತ್ಯುತ್ತಮ ಪ್ರತಿನಿಧಿ. ಕಳೆದೆರಡು ದಶಕಗಳಿಂದ ಕರ್ನಾಟಕದ ಕಲಾರಂಗದ ದೃಶ್ಯ ಹಾಗೂ ಅದನ್ನು ಕುರಿತಾದ ಸಾಹಿತ್ಯದಲ್ಲಿ ಮಾನ್ಯತೆ ಪಡೆದವರನ್ನು ವಿಶ್ವಾತಕರು ಎನ್ನಬಹುದು. ಅವರುಗಳ ವಿಫಲತೆಯಿಂದ ಮರೆಯಾಗಿ ಹೋಗಿದ್ದು, ಜನಸಮೂಹಕ್ಕೆ ಆತ್ಮೀಯರಾಗಿದ್ದ ಮತ್ತೊಂದು ಬಗೆಯ ಅಭಿರುಚಿಯ ಕಲಾಸಮೂಹವೇ 'ಸ್ವಜನಪರ' ಮಾದರಿಯನ್ನು ಪ್ರತಿನಿಧಿಸುವುದು. ಎಪ್ಪತ್ತು-ಎಂಬತ್ತರ ದಶಕದಲ್ಲಿ ಕರ್ನಾಟಕದಲ್ಲಿ ಚಾಲನೆಗೆ ಬಂದ ಸಿನಿಮಾಸ್ಕೋಪ್ ಹಾಗೂ ೭೦ ಎಂ.ಎಂ ಸಿನಿಮಾಗಳ (ಕನ್ನಡ ಹಾಗೂ ಇತರ ಭಾಷೆಗಳಲ್ಲಿ) ಅನುಭವಕ್ಕೂ, ಅದೇ ಕಾಲಕ್ಕೆ ರೂಪುಗೊಂಡ ಶಿವಪ್ರಸಾದರ ಕೃತಿಗಳ ಈ ಬಗೆಯ ಅನುಭವಕ್ಕೂ ಸಾಮ್ಯತೆ ಇದೆ. ಎರಡೂ ದೃಶ್ಯಾನುಭವಗಳು ವೀಕ್ಷಕನ ರೂಢಿಗತ ಭಾಗವಹಿಸುವಿಕೆಯನ್ನು ಹೆಚ್ಚು ತೀವ್ರಗೊಳಿಸುತ್ತವೆ. ಅರ್ಥಾತ್ ಕಣ್ಣನ್ನೂ ಮೀರಿದ ದೈಹಿಕ ಭಾಗವಹಿಸುವಿಕೆಯನ್ನು ಬೇಡುತ್ತವೆ. ಈ ಎರಡೂ ತೆರನಾದ ಅನುಭವಗಳು ಒಂದೇ ಕಾಲಕ್ಕೆ ಎರಡು ಮಾಧ್ಯಮಗಳಲ್ಲಿನ ನಿರ್ದಿಷ್ಟ ಹೊಸ ಉದ್ದೇಶಗಳನ್ನು ಒಮ್ಮೆಲೇ ಒಳಗೊಳ್ಳುವ ಪ್ರಯೋಗವು ಗಮನಾರ್ಹವಾದುದು. ಇದೊಂದು ಬಗೆಯ ಒರಟು ಮಾರ್ಕ್ಸಿಸ್ಟ್ ತತ್ವದ ಜನಸಮೂಹದ ದೈಹಿಕ ಭಾಗವಹಿಸುವಿಕೆಗಿಂತ ಭಿನ್ನವಾದುದು. ಆದರೆ ಪರಸ್ಪರ ಸಂಬಂಧವನ್ನು ಎಳ್ಳಷ್ಟಾದರೂ ಹೊಂದಿರುವಂತಹುದೂ ಹೌದು.

ಇಲ್ಲಿಯವರೆಗೂ ರೂಢಿಗತವಾಗಿರುವ ಮಾರ್ಕ್ಸಿಸ್ಟ್ ಬಯಕೆಗಳೇನೆಂದರೆ, ಕಲಾಕೃತಿಯೊಂದು ಸೌಂದರ್ಯೇತರ ಉದ್ದೇಶಕ್ಕಾಗಿ ಬಳಕೆಗೊಳ್ಳಬೇಕೆಂಬುದು. ಇನ್ನೂ ಸ್ಪಷ್ಟಗೊಳಿಸಿ ಹೇಳುವುದಾದರೆ, ಸೌಂದರ್ಯಶಾಸ್ತ್ರೀಯ ನೆಲೆಯಿಂದ ಕಲೆಯ ಅನುಭವವು ಸಮಾಜಶಾಸೀಯ ಉದ್ದೇಶ/ಅನುಭವಕ್ಕೆ ಸ್ಥಾನಪಲ್ಲಟ ಹೊಂದಬೇಕೆಂದು ಸಮಾಜವಾದಿ ಕಲಾವಿದರು ಭಾವಿಸುತ್ತಾರೆ. ಈ ಶತಮಾನದ ಬಹುಪಾಲು ರಷ್ಯನ್ ಕಲೆ ಇದಕ್ಕೆ ಉದಾಹರಣೆ. ಇದಕ್ಕೆ ತದ್ವಿರುದ್ಧವಾಗಿ ಕರ್ನಾಟಕದಲ್ಲಿರುವ, ಮುಖ್ಯವಾಗಿ 'ವಿಶ್ವಾತ್ಮಕ' ಮಾದರಿಯ ಕಲಾಸಮೂಹದಲ್ಲಿ ಇತ್ತೀಚಿನವರೆಗೂ ಕೃತಿನಿಷ್ಠ ಸೌಂದರ್ಯೋಪಾಸನೆಯೇ (ಫಾರ್ಮಲಿಸಂ) ಆತ್ಯಂತಿಕ ಸತ್ಯವಾಗಿದ್ದದು. ಶಿವಪ್ರಸಾದರ ಕೃತಿಸಮೂಹ ಇವೆರಡರ ನಡುವೆ ಸೇತುವೆ. ಅದು 'ಸ್ವ-ಚಿಕಿತ್ಸಕ' ಗುಣವುಳ್ಳದ್ದಾದ್ದರಿಂದ ಸಮಾಜೋ- ಸೌಂದರ್ಯಾತ್ಮಕತೆಯ ಸಂಲಗ್ನವಾದ ಈ ಕೃತಿಗಳ ಆಂತರ್ಯದಿಂದಲೇ, ಕಾಲಾಂತರದಲ್ಲಿ ಈ ಬಗೆಯ ರೂಪಾಂತರವಾದುದು ಶಿವಪ್ರಸಾದರ ಕೃತಿಗಳ ಅನನ್ಯ ಗುಣ. ಮುಂಬೈ ಕಲಾವಿದ ಅತುಲ್ ದೊಡಿಯರ ಕೃತಿಗಳಲ್ಲಿ ಈ ಸಾಧ್ಯತೆಯು ಕೇವಲ ಆಕಾರಗಳ ಪುನರುಕ್ತಿಯಲ್ಲಿ ಸಂತೃಪ್ತತೆ ಹೊಂದುತ್ತವೆ. ಆದರೆ ಸಮಾಜವಾದಿ ಒಲವುಳ್ಳ ಶಿವಪ್ರಸಾದರಿಗೆ ಒರಟು ಒಗರಿನ ಒಂದು ವಿಶಾಲ ಭಿತ್ತಿಯ ಇರುವಿಕೆಯೆ ಅದು ಅವರ ಪ್ರತಿ ಆಕಾರಗಳ ಆಂತರೀಕ ಪದರಗಳಲ್ಲಿ ಮುಖ್ಯವಾಗಿರುತ್ತದೆ. ಶಿವಪ್ರಸಾದರ ಕಲಾಕೃತಿಗಳನ್ನು ಒಟ್ಟಾಗಿ ಗ್ರಹಿಸಬೇಕಾದುದು ಅವರ ಹತ್ತಿರದ ಕಲಾವಲಯದ ಗ್ರಹಣಕ್ರಮಕ್ಕೆ ಸಲ್ಲುವ ಗೌರವ ಕೂಡಾ ಹೌದು. ಆದರೆ ಆ

ಕೃತಿಸಮೂಹವು ಇನ್ನೂ ಮುಂದೆ ಬದಲಾವಣೆಗೊಳ್ಳುವುದರಿಂದ ಅದರ ಭವಿಷ್ಯವನ್ನು ಈಗಲೇ ಅಂದಾಜು ಮಾಡುವುದು ಸೂಕ್ತವಲ್ಲ.

ಆದರೆ ಈ ಮೊದಲೇ ನಾನು ಹೇಳಿದಂತೆ ಆಕೃತಿಗಳನ್ನು ಒಟ್ಟಾಗಿ ಗ್ರಹಿಸುವುದೂ' ಸಹ ಒಂದು ಕಲಾ ಇತಿಹಾಸದ ನಿರ್ಮಿತಿ. ವಿಕೇಂದ್ರೀಕರಣವೇ ಕೇಂದ್ರವಾಗಿರುವ ಕಲಾ ಇತಿಹಾಸದ ಗ್ರಹಿಸುವ ಕ್ರಮ ಮತ್ತೆಲ್ಲಿಯೋ ಸಾಧ್ಯವಾಗಬಹುದೂ ಸಹ. ಆದರೆ ಈ ನಿರ್ಮಿತಿಗೆ ಆಕೃತಿಗಳೊಳಗೇ ಸಾಕ್ಷಿಗಳು ದೊರಕುವಂತಿರಬೇಕು. ಶಿವಪ್ರಸಾದರು ಅವರ ಸುತ್ತಲಿನ ಸಮಾಜಕ್ಕೆ ಕಲಾತ್ಮಕವಾಗಿ ಬದ್ಧವಾಗಿರುವುದರಿಂದಲೇ ಈ ರೀತಿಯ ಸಾಕ್ಷಿಗಳು ಹುಟ್ಟಿಕೊಳ್ಳುತ್ತವೆ. ಇದೊಂದು ತೀರಾ ಅಪರೂಪದ ಘಟನೆ. ನಗರೀಕರಣದ ವಲಯದ ಹೊರಗಿನಿಂದಲೇ ನಗರೀಕರಣ-ಗ್ರಾಮೀಣತೆ' ಎಂಬ ಕ್ಲಾಸಿಕಲ್ ವೈರತ್ವದ ಕಲ್ಪನೆಯನ್ನು ಶಿವಪ್ರಸಾದರ ಕೃತಿಗಳು ನಿರಾಕರಿಸುತ್ತವೆ. ತೈಲವರ್ಣ ದಾಖಲಾತಿಯ ಆತ್ಮವುಳ್ಳ ಛಾಯಾಚಿತ್ರಗಳು, ಸೇಂದ್ರೀಯ ದೈಹಿಕ ನಗ್ನತೆ, ತೊಗಲುಗೊಂಬೆಯ ಪುನರ್ವ್ಯಾಖ್ಯಾನ - ಇತ್ಯಾದಿಗಳ ಸಮ್ಮಿಲನವು ಇದಕ್ಕೆ ಪೂರಕ. ನಗರೀಕರಣ-ಗ್ರಾಮೀಣತೆಯ ಕಲ್ಪನೆಯು ದೃಶ್ಯವಿಶೇಷಣ ಕ್ರಮದಲ್ಲಿ ಕೇವಲ ಸೌಂದರ್ಯಾತ್ಮಕ ಹಂತದ ಮಟ್ಟಿಗೇ ನಿಂತುಬಿಡುವಂತಹದ್ದು. ಆದರೆ ಅದನ್ನೂ ಬಳಸಿಕೊಂಡು ಹೆಚ್ಚು ವಿಶಾಲವಾದ



ಒಂದು ಸಾಂಸ್ಕೃತಿಕ ಅನುಭವವನ್ನು ಶಿವಪ್ರಸಾದರ ಕೃತಿಗಳು ಕಟ್ಟಿಕೊಡುತ್ತವೆ. ಇಲ್ಲಿಯವರೆಗೂ ಈ ರೀತಿಯ ಸಾಂಸ್ಕೃತಿಕ ಅನುಭವವನ್ನು ಬಹುವಾಗಿ ಕನ್ನಡ ಸಾಹಿತ್ಯಕ ಜಗತ್ತು ನಿರ್ಮಿಸಿಕೊಟ್ಟಂತೆ ಮತ್ಯಾವ ಕಲಾಪ್ರಕಾರವೂ, ಅದರಲ್ಲಿಯೂ ಸಾಹಿತ್ಯೇತರ ಪ್ರಕಾರವು ಕಟ್ಟಿಕೊಟ್ಟ ಉದಾಹರಣೆ ಇಲ್ಲಿಲ್ಲ. ಶಿವಪ್ರಸಾದರ ಕೃತಿಗಳು ಈ ಕೆಲಸವನ್ನು ಮಾಡುತ್ತದೆಂಬುದಷ್ಟೇ ಅದರ ಹೆಚ್ಚಳಿಕೆಯೂ ಅಲ್ಲ. ಬದಲಿಗೆ ಸೌಂದರ್ಯಾತ್ಮಕ ಅನುಭವವನ್ನೇ ಆತ್ಯಂತಿಕವೆಂದು ನಂಬಿಕೊಂಡ ಆಧುನಿಕ ದೃಶ್ಯಕಲೆಗೆ, ಅದನ್ನು ಮೀರಿದ ಸೌಂದರ್ಯೇತರ ಅನುಭವವೂ ಸಹಾ ಸೌಂದರ್ಯಾತ್ಮಕ ಪರಿಕರಗಳ ಮುಖೇನವೇ ಸಾಧ್ಯ ಎಂದು ಶಿವಪ್ರಸಾದರ ಕೃತಿಗಳು ತೋರಿಸಿಕೊಡುತ್ತಿವೆ. ಮತ್ತು ಸೌಂದರ್ಯೇತರ ಎಂದಾಕ್ಷಣ 'ಸಾಮಾಜಿಕ ಕಲೆ' ಎಂಬಂತಹ ಕ್ಲೀಷೆಯನ್ನು ಮರುಪರಿಶೀಲನೆಗೆ ಒಡ್ಡುತ್ತವೆ. ಮತ್ತು ಹೀಗಾಗುವಾಗ, ಸೌಂದರ್ಯಾತ್ಮಕ ಅನುಭವಕ್ಕೆ 'ಸೂಕ್ತ ಸಾಧನ'ವನ್ನೂ ಸಹ ಗುರ್ತಿಸಿಕೊಡುತ್ತವೆ.

ಮತ್ತೊಂದು ರೀತಿಯಲ್ಲಿ ವಿವರಿಸುವುದಾದರೆ ಶಿವಪ್ರಸಾದರ ತೈಲವರ್ಣ ಕೃತಿಗಳ ನಿರ್ಮಾಣವು ನೆಲಾಕೃತಿಯ ಸಾರಸತ್ವವನ್ನು ಸಹಾ ಒಳಗೊಳ್ಳುತ್ತವೆ. ತನ್ಮೂಲಕ 'ಹೊಸವಸ್ತುಗಳ ಮುಖೇನ ನಿರ್ಮಾಣಗೊಳ್ಳುವ ಕಲಾಕೃತಿಗಳು ಮುಖ್ಯವಾಗಿ ತೈಲವರ್ಣದ ಸತ್ವದ ಇತಿಮಿತಿಗೆ ಸೂಚಿ' ಎಂಬ ಅಲಿಖಿತ ನಂಬಿಕೆಯನ್ನು

ಸುಳ್ಳಾಗಿಸುತ್ತದೆ. ಈ ನಿಟ್ಟಿನಲ್ಲಿ ಭಾರತದ ಮತ್ತೊಬ್ಬ ಪ್ರಮುಖ ಕಲಾವಿದ ವಿವಾನ್ ಸುಂದರಂ ಮೂರು ದಶಕಗಳ ಕಾಲ ತೈಲವರ್ಣವನ್ನು ಬಳಸಿ, ನಂತರ ಹೊಸವಸ್ತುಗಳ ಮೂಲಕ ಅಭಿವ್ಯಕ್ತಿಗೆ ತೊಡಗಿದ ಕ್ರಮದೊಂದಿಗೇ ಶಿವಪ್ರಸಾದರ ಕೃತಿಗಳ ತುಲನಾತ್ಮಕ ಹೋಲಿಕೆಯು ಅಧ್ಯಯನ ಯೋಗ್ಯ.

ತೈಲವರ್ಣ ಹಾಗೂ ನೆಲಾಕೃತಿಯ ನಡುವಣ ಮೂಲಭೂತ ವ್ಯತ್ಯಾಸವು ಪ್ರೇಕ್ಷಕನ ಕಣ್ಣಿನ ಭಾಗವಹಿಸುವಿಕೆಯನ್ನು ಕುರಿತದ್ದು. ಶಾಸ್ತ್ರೀಯ ಅರ್ಥದಲ್ಲಿ ತೈಲವರ್ಣದ ಪ್ರಕಾರಗಳಲ್ಲಿ ವೀಕ್ಷಕ-ಕಣ್ಣಿಗೆ ದೇಹವು ನಿಶ್ಚಲವಾಗಿದ್ದು, ಎಲ್ಲ ಬಗೆಯ ರಸಾಸ್ವಾದನೆಗೂ ಕಣ್ಣೆ ಮೂಲದ್ವಾರವಾಗಿರುತ್ತದೆ. ಆದರೆ ನೆಲಾಕೃತಿಯಲ್ಲಿ ಪ್ರೇಕ್ಷಕನ ದೇಹವೇ ಕಣ್ಣಾಗಿ ಮಾರ್ಪಾಡಾಗುತ್ತದೆ. ಭೌತಿಕ ಕಣ್ಣುಗಳಿಗೆ ರೂಢಿಗತ ಸೌಂದರ್ಯಾತ್ಮಕ ಕೆಲಸ ಇಲ್ಲವಾಗುತ್ತದೆ. 'ಕೃತಿಯ ಒಳಕ್ಕೆ ಪ್ರವೇಶಿಸುವುದು' ಎಂಬ ಅರ್ಥವ್ಯಾಖ್ಯೆಯು ಸಂಪೂರ್ಣ ರೂಪಾಂತರ ಹೊಂದುತ್ತದೆ. ಶಿವಪ್ರಸಾದರ ಕೃತಿಗಳ ಮೂಲಸತ್ವಕ್ಕೆ ಸಂಕೇತವಾಗಬಲ್ಲ ಅವರ ಇತ್ತೀಚಿನ ಕೃತಿಗಳಲ್ಲಿನ ಸೂತ್ರಧಾರನ ರೂಪಕವು ನೋಡುಗನನ್ನು ಈ ಅರ್ಥದಲ್ಲಿ ಒಂದು ದೃಶ್ಯಯಾತ್ರೆಗೆ ಸಜ್ಜುಗೊಳಿಸುತ್ತದೆ. ಅರ್ಥಾತ್ ಈ ಕೃತಿಗಳು ಮೇಲ್ಛಾವಣಿಯ ಭಿತ್ತಿಚಿತ್ರಗಳಂತಾದಾಗ ವೀಕ್ಷಕ ಮೊದಲಿಗೆ ತಾನು ನಿಶ್ಚಿತವಾಗಿ ನಿಂತಿದ್ದೇನೆ' ಎಂಬಂತಹ ಗುರುತ್ವ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾನೆ.

ಇದಕ್ಕೆ ಪೂರಕವಾಗಿ ಥಿಕ್ ಇಂಪಾಸ್ಟೋ ತಂತ್ರವು ಈ ಕೃತಿಗಳೊಂದಿಗೆ ವೀಕ್ಷಕನ ಅಂತರವನ್ನು ನಿರ್ಧರಿಸುತ್ತದೆ. ಸ್ಮೃತಿಯೆಂಬುದು ಮುಖ್ಯವಾಗುತ್ತದೆ. ಅಂದರೆ ಶಿವಪ್ರಸಾದರ ಹಳೆಯ ಸಪೂರವರ್ಣನೆಯ ಚಿತ್ರವನ್ನು ಮನಸ್ಸಿನಲ್ಲಿರಿಸಿಕೊಂಡು ಈಗಿನ ಚಿತ್ರ-ದೃಶ್ಯಗಳನ್ನು ಒಂದು ಅಂತರದಿಂದ ವೀಕ್ಷಿಸುವಾಗ, ಅವರ ಹಳೆಯ ನೈಜ ಶೈಲಿಯ ಅನುಭವದ ನೆನಪಾಗಬಹುದು. ಇದು ಕನ್ನಡ ಜನಪ್ರಿಯ ಸಿನಿಮಾಗಳಲ್ಲಿ ಮರುಕಳಿಸುವ ಒಂದೇ ಹಾಡು ಅಥವ ಸಂಗೀತದ ರೀತಿ, ಅಥವ ಪಿತೃವನ್ನೇ ಹೋಲುವ ಪುತ್ರನ ನೆನಪು ಪಿತೃವಿನ ಕಥನವನ್ನೇ ನೆನಪಿಸುವ ಪರಿಯಿದು.

ವಸಾಹತು-ವಸಾಹತೀಕೃತ ಅನುಭವದ ಮೂಸೆಯಲ್ಲಿ ಶಿವಪ್ರಸಾದರಿಗೆ ದಕ್ಕಿದ ತೈಲವರ್ಣದ ಚಿತ್ರದ ಕ್ರಮವು; ಅವುಗಳು ಉದ್ದೀಪಿಸುವ ಸಾಂಸ್ಕೃತಿಕ ನಾಸ್ಟಾಲ್ಜಿಯ; ಇದಕ್ಕೆ ಪೂರಕವಾಗಿ ವರ್ತಿಸುವ ತೊಗಲುಗೊಂಬೆಯ ಆಕಾರಗಳ ಪುನರ್‌ವ್ಯಾಖ್ಯಾನ; ಈ ರೀತಿಯ ಮರೆಯಲ್ಲಿರುವ ದೃಶ್ಯಾನುಭವವನ್ನು ಮನೋಪರದೆಗೆ ಎಳೆದು ತರುವ ಪಿನ್‌ಅಪ್ ಹುಡುಗಿಯರ ಆಕಾರಗಳ ಪುನರ್‌ಚಿತ್ರಣ; ಈ ಬಗೆಯ ಸಂಕೀರ್ಣ ಅನುಭವಗಳಿಗೆಲ್ಲ ದಿಕ್ಸೂಚಿಯಾಗಿ ವರ್ತಿಸುವ ರೂಪಕದ ಸೂತ್ರಧಾರಿ ಗುಣ ಇವೆಲ್ಲವೂ ಬೌದ್ಧಿಕ-ಅನುಭಾವಿಕ ಎಚ್ಚರಿಕೆಯಿಂದ ಶಿವಪ್ರಸಾದ್ ಮೂರು ದಶಕಗಳ ಕಾಲ ನಿರ್ಮಿಸಿಕೊಂಡಿರುವ, ನಿರ್ಮಿಸಿಕೊಟ್ಟಿರುವ ಒಂದು ಅನನ್ಯ ಅನುಭವ ಜಗತ್ತು. ಈ ಎಲ್ಲಾ ಅಂಶಗಳಿಗೆ

ಕೆ.ಟಿ. ಶಿವಪ್ರಸಾದ್/೩೦

